ಅಲಿಪುರ ಜೈಲು; ಸೆರೆಮನೆಯೊಳಗಿನ ಸ್ವಾತಂತ್ರ್ಯದ ಸಂಗಮ

ಬಳ್ಳಾರಿಯ ಅಲಿಪುರ ಜೈಲು ರಾಜಾಜಿ, ಕಾಮರಾಜ್, ಪೊಟ್ಟಿ ಶ್ರೀರಾಮುಲು, ಸಂಜೀವ ರೆಡ್ಡಿ, ಪೆರಿಯಾರ್, ಬಟುಕೇಶ್ವರ ದತ್ತ ಸೇರಿದಂತೆ ಅನೇಕ ರಾಷ್ಟ್ರೀಯ ಹೋರಾಟಗಾರರ ಸೆರೆಮನೆಯಾಗಿತ್ತು.

ವಿಭಿನ್ನ ಭಾಷೆ, ಪ್ರದೇಶ ಮತ್ತು ಹಿನ್ನೆಲೆಯ ಹೋರಾಟಗಾರರು ಒಂದೇ ಜಾಗದಲ್ಲಿ ಸೆರೆವಾಸ ಅನುಭವಿಸಿದ ಕಾರಣ, ಅಲಿಪುರ ಜೈಲು ದಮನದ ಸಂಕೇತವಾಗಿದ್ದಷ್ಟೇ ರಾಷ್ಟ್ರೀಯ ಏಕತೆಯ ಸಾಕ್ಷಿಯೂ ಆಯಿತು.

ಗೋಡೆಗಳು ಬಂಧಿಸಿದ್ದು ದೇಹಗಳನ್ನಷ್ಟೇ; ಅವರ ದೇಶಪ್ರೇಮವನ್ನಲ್ಲ!





ಅವರ ಕನಸಿನ ಭಾರತ ನಮ್ಮ ಹೊಣೆ

ಬಳ್ಳಾರಿಯ ಸ್ವಾತಂತ್ರ್ಯ ಹೋರಾಟವು ರಾಜಕೀಯ ಸ್ವಾತಂತ್ರ್ಯದಿಂದ ಸಾಮಾಜಿಕ ಸಮಾನತೆ ಮತ್ತು ಕನ್ನಡದ ಸ್ವಾಭಿಮಾನದವರೆಗೆ ವಿಸ್ತರಿಸಿತ್ತು.

ಗಾಂಧೀಜಿಯವರ ಹೆಜ್ಜೆ, ಟೇಕೂರು ಸುಬ್ರಹ್ಮಣ್ಯಂ ಅವರ ನಾಯಕತ್ವ, ಅಲಿಪುರ ಜೈಲಿನ ಹೋರಾಟಗಾರರ ತ್ಯಾಗ ಮತ್ತು ಬಳ್ಳಾರಿ ರಕ್ಷಣೆಯ ಜನಶಕ್ತಿ ಇವೆಲ್ಲವೂ ಈ ನೆಲದ ಹೋರಾಟದ ವಿಭಿನ್ನ ಮುಖಗಳು.

ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಮಹಿಳೆಯರು ಮತ್ತು ವಿವಿಧ ಸಮುದಾಯಗಳ ಜನರು ಒಂದಾಗಿ ನಿಂತು ಸ್ವಾತಂತ್ರ್ಯದ ಹಾದಿ ನಿರ್ಮಿಸಿದರು.

ಅವರ ತ್ಯಾಗವನ್ನು ನೆನಪಿಸಿಕೊಳ್ಳುವುದಷ್ಟೇ ಅಲ್ಲಅವರು ಕನಸು ಕಂಡ ಸಮಾನತೆ, ನ್ಯಾಯ ಮತ್ತು ಸೌಹಾರ್ದತೆಯ ಭಾರತವನ್ನು ಕಟ್ಟುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ.

ಜೈ ಹಿಂದ್! ಜೈ ಕರ್ನಾಟಕ!

ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ

ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,

ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com

ಗಡಿಜಿಲ್ಲೆಯಲ್ಲಿ ಸ್ವಾತಂತ್ರ್ಯದ ಕಾವು

ಬಳ್ಳಾರಿ





ಬಳ್ಳಾರಿ ನೆಲದಲ್ಲಿ ಸ್ವಾತಂತ್ರ್ಯದ ಕಾವು

ಹಳೆಯ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟವು ಬ್ರಿಟಿಷರ ವಿರುದ್ಧದ ರಾಷ್ಟ್ರೀಯ ಚಳವಳಿಯ ಜೊತೆಗೆ ಸಾಮಾಜಿಕ ಸಮಾನತೆ ಮತ್ತು ಅಸ್ಪೃಶ್ಯತಾ ನಿವಾರಣೆಯ ಹೋರಾಟವೂ ಆಗಿತ್ತು.

ಅಸಹಕಾರ, ಉಪ್ಪಿನ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ ಮತ್ತು ಭಾರತ ಬಿಟ್ಟು ತೊಲಗಿ ಚಳವಳಿಗಳಲ್ಲಿ ರೈತರು, ವಿದ್ಯಾರ್ಥಿಗಳು, ಕಾರ್ಮಿಕರು, ಮಹಿಳೆಯರು ಹಾಗೂ ಸಾಮಾನ್ಯ ಜನರು ಸಕ್ರಿಯವಾಗಿ ಪಾಲ್ಗೊಂಡರು.

ಅಲಿಪುರ ಜೈಲು ಹೋರಾಟಗಾರರ ಸಂಗಮ

ಬಳ್ಳಾರಿಯ ಅಲಿಪುರ ಜೈಲು ಅನೇಕ ರಾಷ್ಟ್ರೀಯ ಹೋರಾಟಗಾರರ ಸೆರೆಮನೆಯಾಗಿತ್ತು. ರಾಜಾಜಿ, ಕೆ. ಕಾಮರಾಜ್, ಪೊಟ್ಟಿ ಶ್ರೀರಾಮುಲು, ಸಂಜೀವ ರೆಡ್ಡಿ, ಪೆರಿಯಾರ್ ಸೇರಿದಂತೆ ಹಲವು ನಾಯಕರು ಇಲ್ಲಿ ಸೆರೆವಾಸ ಅನುಭವಿಸಿದರು. ಸೆರೆಮನೆಯೇ ರಾಷ್ಟ್ರೀಯ ಚಿಂತನೆಗಳ ಸಂಗಮವಾಯಿತು.

ಸ್ವಾತಂತ್ರ್ಯದಿಂದ ಕರ್ನಾಟಕದ ಏಕೀಕರಣದವರೆಗೆ

1948ರಲ್ಲಿ ಸಂಡೂರು ಸಂಸ್ಥಾನ ಭಾರತ ಒಕ್ಕೂಟಕ್ಕೆ ಸೇರ್ಪಡೆಯಾಯಿತು. 1953ರಲ್ಲಿ ಬಳ್ಳಾರಿಯನ್ನು ಆಂಧ್ರ ರಾಜ್ಯಕ್ಕೆ ಸೇರಿಸುವ ಪ್ರಯತ್ನದ ವಿರುದ್ಧ 'ಬಳ್ಳಾರಿ ರಕ್ಷಣೆ' ಚಳವಳಿ ನಡೆಯಿತು. ಟೇಕೂರು ಸುಬ್ರಹ್ಮಣ್ಯಂ, ಭೀಮಸೇನರಾವ್ ಸೇರಿದಂತೆ ಕನ್ನಡಿಗರ ಹೋರಾಟದ ಫಲವಾಗಿ ಬಳ್ಳಾರಿ ಕರ್ನಾಟಕದೊಂದಿಗೆ ತನ್ನ ಬಂಧವನ್ನು ಉಳಿಸಿಕೊಂಡಿತು.

ಬಳ್ಳಾರಿಯ ಹೋರಾಟ — ಸ್ವರಾಜ್ಯಕ್ಕಾಗಿ ಮಾತ್ರವಲ್ಲ, ಸ್ವಾಭಿಮಾನ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಕೂಡ!



ಬಳ್ಳಾರಿ-ವಿಜಯನಗರದ ಪ್ರಮುಖ ಹೋರಾಟಗಾರರು

◢ ಕೆ. ರಂಗ ಅಯ್ಯಂಗಾರ್

ಸಾಮಾಜಿಕ ಸಮಾನತೆಯ ಹೋರಾಟಗಾರ.

ಸ್ವಾತಂತ್ರ್ಯ ಚಳವಳಿಯ ಜೊತೆಗೆ ದಲಿತ ಮತ್ತು ವಾಲ್ಮೀಕಿ ಮಕ್ಕಳ ಶಿಕ್ಷಣಕ್ಕಾಗಿ ವಸತಿ ನಿಲಯಗಳನ್ನು ಸ್ಥಾಪಿಸಿ, ಸ್ವಾತಂತ್ರ್ಯದ ಜೊತೆಗೆ ಸಾಮಾಜಿಕ ನ್ಯಾಯವೂ ಅಗತ್ಯ ಎಂಬ ಸಂದೇಶ ಸಾರಿದರು.

◢ ವೈ. ಮಹಾಬಲೇಶ್ವರಪ್ಪ

ಅಖಂಡ ಬಳ್ಳಾರಿಯ ಧ್ವನಿ.

ಬಳ್ಳಾರಿ ಜಿಲ್ಲೆಯನ್ನು ಕರ್ನಾಟಕದಲ್ಲೇ ಉಳಿಸುವ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿ, ಅಖಂಡ ಬಳ್ಳಾರಿ ಜಿಲ್ಲಾ ಕ್ರಿಯಾ ಸಮಿತಿ ರಚನೆಯಲ್ಲಿ ಮುಂಚೂಣಿಯಲ್ಲಿದ್ದರು.

◢ ಬಿಂದು ಮಾಧವ

ಕೂಡ್ಲಿಗಿಯ ಗಾಂಧಿವಾದಿ.

ಶಿಕ್ಷಕರಾಗಿ ಮತ್ತು ಸ್ವಾತಂತ್ರ್ಯ ಹೋರಾಟಗಾರರಾಗಿ ಗಾಂಧೀಜಿಯವರ ವಿಚಾರಗಳನ್ನು ಜನರಿಗೆ ತಲುಪಿಸಿದರು. ಸ್ವಾತಂತ್ರ್ಯಾನಂತರವೂ ಗಾಂಧಿವಾದದ ಜನಜಾಗೃತಿಯನ್ನು ಮುಂದುವರಿಸಿದರು.



ಟೇಕೂರು ಸುಬ್ರಹ್ಮಣ್ಯಂ

ಬಳ್ಳಾರಿಯ ಸ್ವಾತಂತ್ರ್ಯ ಚಳವಳಿಯ ಪಿತಾಮಹ.


ಅಸಹಕಾರ, ಉಪ್ಪಿನ ಸತ್ಯಾಗ್ರಹ ಮತ್ತು ಭಾರತ ಬಿಟ್ಟು ತೊಲಗಿ ಚಳವಳಿಗಳನ್ನು ಮುನ್ನಡೆಸಿದ ಪ್ರಮುಖ ಗಾಂಧಿವಾದಿ. ಹಲವು ಬಾರಿ ಜೈಲು ಶಿಕ್ಷೆ ಅನುಭವಿಸಿದರು. ಸ್ವಾತಂತ್ರ್ಯಾನಂತರ ಸಂಸದರಾಗಿ ಸೇವೆ ಸಲ್ಲಿಸಿ, ಕನ್ನಡದ ಹಿತ ಮತ್ತು ಬಳ್ಳಾರಿಯ ಅಭಿವೃದ್ಧಿಗಾಗಿ ಶ್ರಮಿಸಿದರು

ಪ್ರಮುಖ ಐತಿಹಾಸಿಕ ಸಂಗತಿಗಳು

ಗಾಂಧೀಜಿಯವರ ಹರಪನಹಳ್ಳಿ-ಸಂಡೂರು ಭೇಟಿ

1934ರಲ್ಲಿ ಗಾಂಧೀಜಿಯವರು ಹರಪನಹಳ್ಳಿ ಮತ್ತು ಸಂಡೂರಿಗೆ ಭೇಟಿ ನೀಡಿದರು. ಹರಪನಹಳ್ಳಿಯಲ್ಲಿ ಅವರಿಗೆ ಅದ್ದೂರಿ ಸ್ವಾಗತ ದೊರೆಯಿತು. ಹರಿಜನ ಕಲ್ಯಾಣಕ್ಕಾಗಿ ನಿಧಿ ಸಂಗ್ರಹಿಸಿ ಅವರಿಗೆ ಅರ್ಪಿಸಲಾಯಿತು.

ಸಂಡೂರಿನಲ್ಲಿ ಅಸ್ಪೃಶ್ಯತಾ ನಿವಾರಣೆಗೆ ನಡೆದಿದ್ದ ಪ್ರಯತ್ನಗಳನ್ನು ಗಾಂಧೀಜಿ ಮೆಚ್ಚಿಕೊಂಡರು. ದಲಿತರಿಗೆ ದೇವಸ್ಥಾನ ಪ್ರವೇಶಕ್ಕೂ ಅವಕಾಶ ಕಲ್ಪಿಸಲಾಗಿತ್ತು.



(ಸಂಡೂರಿಗೆ ಭೇಟಿ ಕೊಟ್ಟಿದ್ದಾಗ ಗಾಂಧೀಜಿಯವರು ಅಲ್ಲಿನ ಪ್ರಕೃತಿ ಸೌಂದರ್ಯ ಮೆಚ್ಚಿ 'ಸೀ ಸಂಡೂರ್ ಇನ್ ಸೆಪ್ಟೆಂಬರ್' ಎಂದು ಹೇಳಿದ್ದರಂತೆ, ಆಸ್ಥಳವನ್ನು ಸೀ ಸಂಡೂರ್ ಪಾಯಿಂಟ್ ಎಂದು ಗುರುತಿಸಿ, ಅಲ್ಲಿ ಗಾಂಧೀಜಿಯವರ ಈ ಮೂರ್ತಿ ನಿಲ್ಲಿಸಲಾಗಿದೆ)

1924 — ಬೆಳಗಾವಿಯಲ್ಲಿ ಇತಿಹಾಸವೇ ನಡೆದ ದಿನ



ಗಾಂಧೀಜಿಯವರ ಅಧ್ಯಕ್ಷತೆಯ ಏಕೈಕ ಅಧಿವೇಶನ

1924ರ ಡಿಸೆಂಬರ್. ಬೆಳಗಾವಿ.
ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಅಚ್ಚಳಿಯದ ಅಧ್ಯಾಯವೊಂದು ಇಲ್ಲಿ ಬರೆಯಲ್ಪಟ್ಟಿತು. ಬೆಳಗಾವಿಯಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ 39ನೇ ಅಧಿವೇಶನಕ್ಕೆ ಮಹಾತ್ಮ ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದರು.

ಗಂಗಾಧರರಾವ್ ದೇಶಪಾಂಡೆ — ಸಂಘಟನೆಯ ಶಕ್ತಿ

“ಕರ್ನಾಟಕ ಕೇಸರಿ” ಗಂಗಾಧರರಾವ್ ದೇಶಪಾಂಡೆ ಅವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಅಧಿವೇಶನದ ಸಂಪೂರ್ಣ ಸಂಘಟನೆಯ ಹೊಣೆ ಹೊತ್ತಿದ್ದರು. ಅವರ ನೇತೃತ್ವದಲ್ಲಿ ಬೆಳಗಾವಿ ರಾಷ್ಟ್ರೀಯ ಚಳವಳಿಯ ಪ್ರಮುಖ ಕೇಂದ್ರವಾಗಿ ಹೊರಹೊಮ್ಮಿತು.

ಮೂರು ಸಂದೇಶಗಳು — ಒಂದು ಭಾರತ

ಈ ಅಧಿವೇಶನದಲ್ಲಿ ಗಾಂಧೀಜಿಯವರ ಚಿಂತನೆಯ ಪ್ರಮುಖ ಅಂಶಗಳು ಮತ್ತಷ್ಟು ಬಲ ಪಡೆದವು:

- ಸಾಮಾಜಿಕ ಸಮಾನತೆ
- ಅಸ್ಪೃಶ್ಯತೆಯ ವಿರುದ್ಧ ಹೋರಾಟ.
- ಹಿಂದೂ–ಮುಸ್ಲಿಂ ಐಕ್ಯತೆ
- ರಾಷ್ಟ್ರೀಯ ಏಕತೆಯ ಸಂಕಲ್ಪ.
- ಖಾದಿ ಮತ್ತು ಸ್ವದೇಶಿ
- ಸ್ವಾವಲಂಬನೆಯ ಮೂಲಕ ಸ್ವಾತಂತ್ರ್ಯದ ಹಾದಿ.





ಕಿತ್ತೂರು ಕೋಟೆ — ಬಂಡಾಯದ ನೆನಪು

ಕಿತ್ತೂರು ಕೋಟೆ, 17ನೇ ಶತಮಾನದಲ್ಲಿ ನಿರ್ಮಿಸಲಾದ ಈ ಐತಿಹಾಸಿಕ ಕೋಟೆ, ನಂತರ ರಾಣಿ ಚೆನ್ನಮ್ಮನ ವೀರ ಹೋರಾಟದ ಪ್ರತೀಕವಾಯಿತು. ಇಂದು ಕೋಟೆಯ ಆವರಣದಲ್ಲಿರುವ ವಸ್ತುಸಂಗ್ರಹಾಲಯವು ಕಿತ್ತೂರಿನ ಹೋರಾಟದ ನೆನಪುಗಳನ್ನು ಜೀವಂತವಾಗಿರಿಸುತ್ತದೆ.





ಬೆಳಗಾವಿಯ ಖಾನಾಪುರ ತಾಲೂಕಿನ ನಂದಗಡದ ವಸ್ತುಸಂಗ್ರಹಾಲಯ ‘ವೀರಭೂಮಿ’

1931 ಜನವರಿ 26ಕ್ಕೆ ಸಂಗೊಳ್ಳಿ ರಾಯಣ್ಣ ಅವರೊಂದಿಗೆ ಅವರ ಆರು ಮಂದಿ ವೀರ ಸಹಚರರನ್ನು ಗಲ್ಲಿಗೇರಿಸಲಾಯಿತು ಮತ್ತು ಇನ್ನೂ ಆರು ಮಂದಿಗೆ ಕಾಲಾಪಾನಿಯ ಶಿಕ್ಷೆ ನೀಡಿ ಅಂಡಮಾನ್‌ಗೆ ಗಡೀಪಾರು ಮಾಡಲಾಯಿತು. ಸಂಗೊಳ್ಳಿ ರಾಯಣ್ಣರನ್ನೂ ಸೇರಿ ಏಳುಮಂದಿ ಕಲಿಗಳನ್ನು ಅವರ ಹೆತ್ತವರು ಮತ್ತು ಸಾರ್ವಜನಿಕರ ಎದುರೇ ಗಲ್ಲಿಗೇರಿಸಿದ ಬೃಹತ್ ಆಲದ ಮರವೂ ಈ ವಸ್ತುಸಂಗ್ರಹಾಲಯ ’ವೀರಭೂಮಿ’ಯ ಆವರಣದಲ್ಲಿದೆ.


ಸ್ವಾತಂತ್ರ್ಯ ಕೇವಲ ಒಂದು ದಿನದ ಸಂಭ್ರಮವಲ್ಲ; ಅದು ಚೆನ್ನಮ್ಮನ ಶೌರ್ಯ, ರಾಯಣ್ಣನ ಬಲಿದಾನ ಮತ್ತು ಗಾಂಧೀಜಿಯವರ ಅಹಿಂಸೆಯ ಪರಂಪರೆಯ ನಿರಂತರ ನೆನಪು. ಈ ಪವಿತ್ರ ಬೆಳಗಾವಿ ನೆಲದ ಹೋರಾಟದ ಸ್ಫೂರ್ತಿಯಿಂದ ಸ್ವಾತಂತ್ರ್ಯ, ಸಮಾನತೆ ಮತ್ತು ಸೌಹಾರ್ದತೆಯ ಭಾರತವನ್ನು ಕಟ್ಟುವ ಸಂಕಲ್ಪ ಮಾಡೋಣ.

ಜೈ ಹಿಂದ್! ಜೈ ಕರ್ನಾಟಕ!

ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ

ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,


ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com



ಬೆಳಗಾವಿ ಜಿಲ್ಲೆ

ಹೋರಾಟದ ಕಿಡಿ ಹೊತ್ತಿಸಿದ ನೆಲ

ಸ್ವಾತಂತ್ರ್ಯ ಹೋರಾಟದಲ್ಲಿ ಜಿಲ್ಲೆಯ ಪಾತ್ರ



ಬೆಳಗಾವಿ ಜಿಲ್ಲೆ ಕರ್ನಾಟಕದ ಸ್ವಾತಂತ್ರ್ಯ ಹೋರಾಟದ ಅತ್ಯಂತ ಪ್ರಮುಖ ಕೇಂದ್ರಗಳಲ್ಲಿ ಒಂದಾಗಿತ್ತು. ಈ ನೆಲದಲ್ಲಿ ಶಸ್ತ್ರಸಜ್ಜಿತ ಹೋರಾಟದ ಕಿಡಿಯಿಂದ ಹಿಡಿದು ಗಾಂಧೀಜಿಯವರ ಅಹಿಂಸಾ ಚಳವಳಿಯವರೆಗೆ ಹೋರಾಟದ ಹಲವು ಮುಖಗಳು ಒಂದಾಗಿದ್ದವು.

ಕಿತ್ತೂರಿನಿಂದ ಸ್ವಾತಂತ್ರ್ಯದ ಕಿಚ್ಚು
ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಬ್ರಿಟಿಷರ ವಿರುದ್ಧ ನಡೆಸಿದ ಸಶಸ್ತ್ರ ಹೋರಾಟ ಈ ನೆಲದ ಧೈರ್ಯಕ್ಕೆ ಮೊದಲ ದೊಡ್ಡ ಸಂಕೇತವಾಯಿತು. ಅವರ ಹೋರಾಟದ ಪರಂಪರೆ ಮುಂದಿನ ತಲೆಮಾರುಗಳಲ್ಲೂ ಸ್ವಾತಂತ್ರ್ಯದ ಕಿಚ್ಚನ್ನು ಜೀವಂತವಾಗಿಟ್ಟಿತು.

1924 — ಗಾಂಧೀಜಿಯವರ ಬೆಳಗಾವಿ ಅಧಿವೇಶನ
1924ರಲ್ಲಿ ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಬೆಳಗಾವಿ ಸಾಕ್ಷಿಯಾಯಿತು. ಇದು ಕರ್ನಾಟಕದಲ್ಲಿ ರಾಷ್ಟ್ರೀಯ ಚಳವಳಿಗೆ ಹೊಸ ವೇಗ ನೀಡಿದ ಐತಿಹಾಸಿಕ ಘಟ್ಟವಾಗಿತ್ತು. ಜಿಲ್ಲೆಯಾದ್ಯಂತ ಸ್ವದೇಶಿ, ಖಾದಿ ಮತ್ತು ಸ್ವಾತಂತ್ರ್ಯದ ಸಂದೇಶ ಮತ್ತಷ್ಟು ಬಲವಾಗಿ ಹರಡಿತು.

ಖಾನಾಪುರದಿಂದ ಕ್ವಿಟ್ ಇಂಡಿಯಾವರೆಗೆ
ಖಾನಾಪುರ ಅರಣ್ಯ ಸತ್ಯಾಗ್ರಹ ಸೇರಿದಂತೆ ವಿವಿಧ ಚಳವಳಿಗಳಲ್ಲಿ ಬೆಳಗಾವಿಯ ಜನರು ಸಕ್ರಿಯವಾಗಿ ಪಾಲ್ಗೊಂಡರು. 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲೂ ಜಿಲ್ಲೆಯ ಯುವಕರು, ರೈತರು ಮತ್ತು ಸಾಮಾನ್ಯ ಜನರು ಬ್ರಿಟಿಷರ ವಿರುದ್ಧ ಧೈರ್ಯದಿಂದ ನಿಂತರು.

ಮಹಿಳೆಯರ ಮುಂಚೂಣಿ ಹೆಜ್ಜೆ
ಉಮಾಬಾಯಿ ಕುಂದಾಪುರ, ಕೃಷ್ಣಾಬಾಯಿ ಪಟವರ್ಧನ ಸೇರಿದಂತೆ ಅನೇಕ ಮಹಿಳೆಯರು ಗಾಂಧೀಜಿಯವರ ಮಾರ್ಗದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಅವರ ಪಾಲ್ಗೊಳ್ಳುವಿಕೆ ಬೆಳಗಾವಿಯ ಹೋರಾಟಕ್ಕೆ ಹೊಸ ಶಕ್ತಿ ನೀಡಿತು.

ಶೋಷಿತ ಸಮುದಾಯಗಳ ಅಜ್ಞಾತ ವೀರರು
ಕಿತ್ತೂರು ಚೆನ್ನಮ್ಮರ ಸೈನ್ಯದಿಂದ ಹಿಡಿದು ಸಂಗೊಳ್ಳಿ ರಾಯಣ್ಣರ ರಹಸ್ಯ ಪಡೆಯವರೆಗೆ, ದಲಿತ ಮತ್ತು ಶೋಷಿತ ಸಮುದಾಯಗಳ ಅನೇಕ ವೀರರು ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡಿದರು. ವೀರ ಸಿದ್ಧನಗೌಡ ಮತ್ತು ಸಿದ್ಧರಾಮ ಅವರಂತಹ ಹೋರಾಟಗಾರರು ಈ ನೆಲದ ಮರೆಯಲಾಗದ ಕೊಡುಗೆಯ ಪ್ರತೀಕ.

ಪ್ರಮುಖ ಹೋರಾಟಗಾರರು



ಕಿತ್ತೂರು ರಾಣಿ ಚೆನ್ನಮ್ಮ

ಬ್ರಿಟಿಷರ ವಿರುದ್ಧ ಸಶಸ್ತ್ರ ದಂಗೆ ಎದ್ದ ಮೊದಲ ಭಾರತೀಯ ರಾಣಿಯರಲ್ಲಿ ಒಬ್ಬರು.
1824ರಲ್ಲಿ ಬ್ರಿಟಿಷರ ವಿರುದ್ಧ ಕಿತ್ತೂರಿನಲ್ಲಿ ಸಶಸ್ತ್ರ ಹೋರಾಟ ನಡೆಸಿ, ಮೊದಲ ಹಂತದಲ್ಲೇ ಬ್ರಿಟಿಷ್ ಸೇನೆಗೆ ಸೋಲುಣಿಸಿದರು. ಅವರ ಧೈರ್ಯ ಮುಂದಿನ ಪೀಳಿಗೆಯ ಸ್ವಾತಂತ್ರ್ಯ ಹೋರಾಟಕ್ಕೆ ಶಾಶ್ವತ ಸ್ಫೂರ್ತಿಯಾಯಿತು.



ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ

ಕಿತ್ತೂರಿನ ಹೋರಾಟವನ್ನು ಮುಂದುವರಿಸಿದ ಗೆರಿಲ್ಲಾ ಸೇನಾನಿ.
ರಾಣಿ ಚೆನ್ನಮ್ಮ ಬಂಧನದ ನಂತರ ರಹಸ್ಯ ಪಡೆಯನ್ನು ಸಂಘಟಿಸಿ ಬ್ರಿಟಿಷರ ಕಚೇರಿ, ಬೊಕ್ಕಸ ಮತ್ತು ಸೇನಾ ವ್ಯವಸ್ಥೆಗಳ ವಿರುದ್ಧ ದಾಳಿ ನಡೆಸಿದರು. ನಂದಗಡದಲ್ಲಿ ಗಲ್ಲಿಗೇರಿದರೂ, ಅವರ ಹೆಸರು ಸ್ವಾತಂತ್ರ್ಯದ ಇತಿಹಾಸದಲ್ಲಿ ಅಮರವಾಗಿದೆ.

ಗಂಗಾಧರರಾವ್ ದೇಶಪಾಂಡೆ



“ಕರ್ನಾಟಕ ಕೇಸರಿ” — ಖಾದಿ ಮತ್ತು ಸ್ವದೇಶಿಯ ಹರಿಕಾರ.
ಗಾಂಧೀಜಿಯವರ ನಿಕಟವರ್ತಿಯಾಗಿ ಬೆಳಗಾವಿ ಭಾಗದಲ್ಲಿ ಖಾದಿ ಮತ್ತು ಸ್ವದೇಶಿ ಚಳವಳಿಯನ್ನು ವಿಸ್ತರಿಸಿದರು. 1924ರ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಐತಿಹಾಸಿಕ ಅಧಿವೇಶನದ ನೇತೃತ್ವ ವಹಿಸಿದರು.




ಉಮಾಬಾಯಿ ಕುಂದಾಪುರ

ಮಹಿಳಾ ಶಕ್ತಿ ಮತ್ತು ಭೂಗತ ಹೋರಾಟದ ಧೀರನಾಯಕಿ.
ಬೆಳಗಾವಿಯಲ್ಲಿ ಮಹಿಳೆಯರನ್ನು ಸಂಘಟಿಸಿ ದೇಶಸೇವೆ ಮತ್ತು ಸ್ವಾವಲಂಬನೆಯ ತರಬೇತಿ ನೀಡಿದರು. ಬ್ರಿಟಿಷರ ಕಣ್ಣಿಗೆ ಬೀಳದೆ ಕಾರ್ಯನಿರ್ವಹಿಸುತ್ತಿದ್ದ ಅನೇಕ ಹೋರಾಟಗಾರರಿಗೆ ಆಹಾರ, ಹಣ ಮತ್ತು ಸುರಕ್ಷಿತ ಆಶ್ರಯ ಒದಗಿಸಿದರು.

ಚನ್ನಪ್ಪ ವಾಲಿ



ರಹಸ್ಯ ಕ್ರಾಂತಿಕಾರಿ ಪಡೆಯ ಸಂಘಟಕ.
“ಕಿತ್ತೂರು ಗುಂಪು” ಮೂಲಕ ಬ್ರಿಟಿಷರ ರೈಲ್ವೆ ಮತ್ತು ಟೆಲಿಗ್ರಾಫ್ ಸಂಪರ್ಕಗಳಿಗೆ ಸವಾಲೆಸೆದರು. ರೈತರು ಮತ್ತು ಕಾರ್ಮಿಕರನ್ನು ಸಂಘಟಿಸಿ ಗ್ರಾಮೀಣ ಪ್ರದೇಶಗಳಲ್ಲಿ ಬ್ರಿಟಿಷ್ ವಿರೋಧಿ ಚಳವಳಿಯನ್ನು ಬಲಪಡಿಸಿದರು.



ಬಾಬುರಾವ್ ಠಾಕೂರ್

ಲೇಖನಿಯನ್ನೇ ಹೋರಾಟದ ಅಸ್ತ್ರವನ್ನಾಗಿಸಿದ ಪತ್ರಕರ್ತ.
ತರುಣ ಭಾರತ ಪತ್ರಿಕೆಯ ಮೂಲಕ ರಾಷ್ಟ್ರೀಯ ಭಾವನೆ ಮತ್ತು ಸ್ವಾತಂತ್ರ್ಯದ ಸಂದೇಶವನ್ನು ಜನರಿಗೆ ತಲುಪಿಸಿದರು. ಕ್ವಿಟ್ ಇಂಡಿಯಾ ಚಳವಳಿಯ ಸಂದರ್ಭದಲ್ಲಿ ಬೆಳಗಾವಿಯ ಯುವಕರು ಮತ್ತು ವಿದ್ಯಾರ್ಥಿಗಳನ್ನು ಹೋರಾಟಕ್ಕೆ ಪ್ರೇರೇಪಿಸಿದರು.

ವಾಸುದೇವ ಬಲವಂತ ಫಡ್ಕೆ


ಬೆಳಗಾವಿಯ ಅರಣ್ಯವನ್ನು ಸಶಸ್ತ್ರ ಹೋರಾಟದ ನೆಲೆಯನ್ನಾಗಿಸಿದ ಕ್ರಾಂತಿಕಾರಿ.
ಖಾನಾಪುರದ ಅರಣ್ಯ ಪ್ರದೇಶಗಳನ್ನು ನೆಲೆಯಾಗಿಸಿಕೊಂಡು ರೈತರು ಮತ್ತು ರಾಮೋಶಿ ಸಮುದಾಯದವರನ್ನು ಸಂಘಟಿಸಿ ಬ್ರಿಟಿಷರ ತೆರಿಗೆ ದಬ್ಬಾಳಿಕೆಯ ವಿರುದ್ಧ ಸಶಸ್ತ್ರ ಹೋರಾಟ ನಡೆಸಿದರು.

ವೀರ ಸಿದ್ಧನಗೌಡ ಮತ್ತು ಸಿದ್ಧರಾಮ

ಸಂಗೊಳ್ಳಿ ರಾಯಣ್ಣನ ರಹಸ್ಯ ಪಡೆಯ ದಲಿತ ವೀರರು.
ಮಾದಿಗ ಮತ್ತು ಹೊಲೆಯ ಸಮುದಾಯದಿಂದ ಬಂದ ಇವರಿಬ್ಬರೂ ರಾಯಣ್ಣನ ಗೆರಿಲ್ಲಾ ಪಡೆಯೊಂದಿಗೆ ಬ್ರಿಟಿಷರ ವಿರುದ್ಧ ಹೋರಾಡಿದರು. ಅಪಾಯಕಾರಿ ಕಾರ್ಯಾಚರಣೆಗಳಲ್ಲಿ ಪಾಲ್ಗೊಂಡು ಸ್ವಾತಂತ್ರ್ಯಕ್ಕಾಗಿ ಪ್ರಾಣತ್ಯಾಗ ಮಾಡಿದರು.

ಕೃಷ್ಣಾಬಾಯಿ ಪಟವರ್ಧನ್

ಬೆಳಗಾವಿಯ ಮಹಿಳಾ ಚಳವಳಿಯ ಮುಂಚೂಣಿ.
1930ರ ಉಪ್ಪಿನ ಸತ್ಯಾಗ್ರಹದಿಂದ 1942ರ ಭಾರತ ಬಿಟ್ಟು ತೊಲಗಿ ಚಳವಳಿವರೆಗೆ ಮಹಿಳೆಯರನ್ನು ಸಂಘಟಿಸಿದರು. ಲಾಠಿಚಾರ್ಜ್ ಮತ್ತು ಜೈಲು ಶಿಕ್ಷೆಯನ್ನೂ ಎದುರಿಸಿ ಖಾದಿ ಮತ್ತು ಸ್ವದೇಶಿಯ ಪ್ರಚಾರವನ್ನು ಮುಂದುವರಿಸಿದರು.





ಸ್ವಾತಂತ್ರ್ಯದ ಅಂಗಳದಲ್ಲಿ ಬೆಂಗಳೂರು ಗ್ರಾಮಾಂತರದ ಹೆಜ್ಜೆಗುರುತುಗಳು

ದೊಡ್ಡಬಳ್ಳಾಪುರದ ರಾಷ್ಟ್ರೀಯ ಜಾಗೃತಿ

1936ರಲ್ಲಿ ಕಾಂಗ್ರೆಸ್ ಘಟಕ ಸ್ಥಾಪನೆಯಾದ ಬಳಿಕ ದೊಡ್ಡಬಳ್ಳಾಪುರದಲ್ಲಿ ಸ್ವದೇಶಿ ಪ್ರಚಾರ, ಸಾರ್ವಜನಿಕ ಸಭೆಗಳು ಮತ್ತು ಸ್ವಯಂಸೇವಕ ಸಂಘಟನೆಗಳ ಮೂಲಕ ರಾಷ್ಟ್ರೀಯ ಚಳವಳಿ ಬಲಗೊಂಡಿತು. ಟಿ. ಸಿದ್ದಲಿಂಗಯ್ಯ ಮತ್ತು ಇತರ ನಾಯಕರ ನೇತೃತ್ವದಲ್ಲಿ ಯುವಕರು ಹಾಗೂ ಮಹಿಳೆಯರು ಚಳವಳಿಯ ಭಾಗವಾದರು.

1938ರ ಶಿವಪುರ ಧ್ವಜ ಸತ್ಯಾಗ್ರಹಕ್ಕೆ ಸ್ಥಳೀಯ ಕಾರ್ಯಕರ್ತರು ಬೆಂಬಲ ನೀಡಿದರು. ಹೀಗೆ ಗ್ರಾಮೀಣ ರಾಜಕೀಯ ಜಾಗೃತಿ ಕ್ರಮೇಣ ಜವಾಬ್ದಾರಿ ಸರ್ಕಾರದ ಬೇಡಿಕೆಯಾಗಿ ರೂಪುಗೊಂಡಿತು.

ಕನಕಪುರದ ಮೈಸೂರು ಚಲೋ

1947ರಲ್ಲಿ ಭಾರತ ಸ್ವತಂತ್ರವಾದರೂ ಮೈಸೂರು ಸಂಸ್ಥಾನದಲ್ಲಿ ಜನಪ್ರತಿನಿಧಿಗಳ ಜವಾಬ್ದಾರಿ ಸರ್ಕಾರದ ಬೇಡಿಕೆ ಮುಂದುವರಿಯಿತು. ಕನಕಪುರದ ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಕರ್ತರು ಜಾಥಾ ನಡೆಸಿ ಮೈಸೂರಿನತ್ತ ಸಾಗಿದರು.

ಕನಕಪುರದ ರಾಮಚಂದ್ರರಂತಹ ಕಾರ್ಯಕರ್ತರು ಸೆರೆವಾಸಕ್ಕೂ ಹೆದರದೆ ಹೋರಾಡಿದರು. 'ಮೈಸೂರು ಚಲೋ', ಜನರೇ ತಮ್ಮ ಸರ್ಕಾರವನ್ನು ಆಯ್ಕೆಮಾಡುವ ಹಕ್ಕಿನ ಹೋರಾಟವಾಗಿ ರೂಪುಗೊಂಡಿತು.



ತ್ಯಾಗದಿಂದ ಪಡೆದ ಸ್ವಾತಂತ್ರ್ಯ ನಮ್ಮ ಮುಂದಿನ ಕರ್ತವ್ಯ

ಬೆಂಗಳೂರು ಗ್ರಾಮಾಂತರ-ರಾಮನಗರದ ನೆಲದಲ್ಲಿ ಸ್ವರಾಜ್ಯಕ್ಕಾಗಿ ಹೋರಾಡಿದ ಕೆಂಗಲ್ ಹನುಮಂತಯ್ಯ, ಟಿ. ಸಿದ್ದಲಿಂಗಯ್ಯ, ಟಿ. ಸುನಂದಮ್ಮ , ಕನಕಪುರದ ರಾಮಚಂದ್ರ, ಎಚ್.ಎಸ್. ದೊರೆಸ್ವಾಮಿ ಸೇರಿದಂತೆ ಅಸಂಖ್ಯಾತ ಹೋರಾಟಗಾರರ ತ್ಯಾಗವನ್ನು ಸ್ಮರಿಸೋಣ.

ಅವರು ಜಾತಿ, ಧರ್ಮ ಮತ್ತು ವರ್ಗದ ಭೇದಗಳನ್ನು ಮೀರಿ **'ನಾವು ಭಾರತೀಯರು'** ಎಂಬ ಒಂದೇ ಭಾವನೆಯಡಿ ಹೋರಾಡಿದರು. ಅವರ ತ್ಯಾಗದ ಫಲವೇ ನಮ್ಮ ಸ್ವಾತಂತ್ರ್ಯ.

ಇಂದು ಅವರ ಹೋರಾಟಕ್ಕೆ ನಿಜವಾದ ಗೌರವ ಸಲ್ಲಿಸುವುದು ಸ್ಮಾರಕಗಳನ್ನು ಕಟ್ಟುವುದಲ್ಲ. ಬದಲಾಗಿ ಸಂವಿಧಾನದ ಮಾರ್ಗದಲ್ಲಿ ಸಮಾನತೆ, ಸಾಮಾಜಿಕ ನ್ಯಾಯ, ಸೌಹಾರ್ದತೆ ಮತ್ತು ಸಹಬಾಳ್ವೆಯ ಭಾರತವನ್ನು ಕಟ್ಟುವುದು.

ಜೈ ಹಿಂದ್! ಜೈ ಕರ್ನಾಟಕ!

ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ

ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,

ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com

ಬೆಂಗಳೂರು ಗ್ರಾಮಾಂತರ

ಸ್ವಾತಂತ್ರ್ಯದ ಅಂಗಳದಲ್ಲಿ ಹೋರಾಟದ ಹೆಜ್ಜೆಗುರುತುಗಳು



ಸ್ವರಾಜ್ಯದ ಕರೆಗೆ ಸ್ಪಂದಿಸಿದ

ಬೆಂಗಳೂರು ಗ್ರಾಮಾಂತರ/ ರಾಮನಗರದ ನೆಲ

1920ರ ದಶಕದಿಂದಲೇ ಮೈಸೂರು ಸಂಸ್ಥಾನದ ಈ ಭಾಗದಲ್ಲಿ ಗಾಂಧೀಜಿಯವರ ಅಸಹಕಾರ, ಖಾದಿ, ಸ್ವದೇಶಿ ಮತ್ತು ಸತ್ಯಾಗ್ರಹದ ವಿಚಾರಗಳು ಜನರನ್ನು ಪ್ರಭಾವಿಸಿದವು. ವಕೀಲರು, ವಿದ್ಯಾರ್ಥಿಗಳು, ಶಿಕ್ಷಕರು, ರೈತರು, ಮಹಿಳೆಯರು ಮತ್ತು ಸಾಮಾನ್ಯ ಜನರು ಕ್ರಮೇಣ ರಾಷ್ಟ್ರೀಯ ಚಳವಳಿಗೆ ಕೈಜೋಡಿಸಿದರು.

ಕನಕಪುರ, ಚನ್ನಪಟ್ಟಣ, ದೊಡ್ಡಬಳ್ಳಾಪುರ, ದೇವನಹಳ್ಳಿ, ನೆಲಮಂಗಲ, ಹೊಸಕೋಟೆ ಸೇರಿದಂತೆ ಗ್ರಾಮೀಣ ಪ್ರದೇಶಗಳಿಗೂ ರಾಷ್ಟ್ರೀಯ ಜಾಗೃತಿ ತಲುಪಿತು. 1936ರಲ್ಲಿ ದೊಡ್ಡಬಳ್ಳಾಪುರದಲ್ಲಿ ಕಾಂಗ್ರೆಸ್ ಘಟಕ ಸ್ಥಾಪನೆಯಾಗಿದ್ದು ಸ್ಥಳೀಯ ರಾಜಕೀಯ ಜಾಗೃತಿಯ ಪ್ರಮುಖ ಹೆಜ್ಜೆಯಾಗಿತ್ತು.

1942ರ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಯುವಕರು ಭೂಗತ ಚಟುವಟಿಕೆಗಳಲ್ಲಿ ಪಾಲ್ಗೊಂಡರು. 1947ರ ಮೈಸೂರು ಚಲೋ ಚಳವಳಿಯಲ್ಲಿಯೂ ಈ ಭಾಗದ ವಿದ್ಯಾರ್ಥಿಗಳು ಮತ್ತು ಕಾರ್ಯಕರ್ತರು ಸಕ್ರಿಯವಾಗಿ ಭಾಗವಹಿಸಿದರು.



ನಗರದಿಂದ ಹಳ್ಳಿಯವರೆಗೆ ಸ್ವರಾಜ್ಯದ ಕಿಚ್ಚು ಹೊತ್ತಿಸಿದ ನೆಲ

ಪ್ರಮುಖ ಹೋರಾಟಗಾರರು



ಕೆಂಗಲ್ ಹನುಮಂತಯ್ಯ

ಸ್ವಾತಂತ್ರ್ಯ ಹೋರಾಟಗಾರ ಮತ್ತು ಆಧುನಿಕ ಕರ್ನಾಟಕದ ಶಿಲ್ಪಿ

ರಾಮನಗರದ ಸಮೀಪದ ಲಕ್ಕಪ್ಪನಹಳ್ಳಿಯಲ್ಲಿ ಜನಿಸಿದ ಕೆಂಗಲ್ ಹನುಮಂತಯ್ಯರು ವಿದ್ಯಾರ್ಥಿ ದೆಸೆಯಲ್ಲಿಯೇ ರಾಷ್ಟ್ರೀಯ ಚಳವಳಿಗೆ ಧುಮುಕಿದರು. ಮೈಸೂರು ಕಾಂಗ್ರೆಸ್ ಮತ್ತು ಜವಾಬ್ದಾರಿ ಸರ್ಕಾರದ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿ, ಮೈಸೂರು ಚಲೋದಲ್ಲಿಯೂ ಭಾಗವಹಿಸಿದರು. ಸ್ವಾತಂತ್ರ್ಯಾನಂತರ ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿ ಶಿಕ್ಷಣ, ನೀರಾವರಿ, ಕೈಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಿದರು. ವಿಧಾನಸೌಧ ಅವರ ದೂರದೃಷ್ಟಿಯ ಪ್ರಮುಖ ಸಂಕೇತವಾಗಿದೆ

ಟಿ. ಸಿದ್ದಲಿಂಗಯ್ಯ

ದೊಡ್ಡಬಳ್ಳಾಪುರದ ರಾಷ್ಟ್ರೀಯ ಸಂಘಟಕ

1936ರಲ್ಲಿ ದೊಡ್ಡಬಳ್ಳಾಪುರ ಕಾಂಗ್ರೆಸ್ ಸಂಘಟನೆಯನ್ನು ಕಟ್ಟುವಲ್ಲಿ ಪ್ರಮುಖ ಪಾತ್ರವಹಿಸಿದ ಸಿದ್ದಲಿಂಗಯ್ಯರು ರಾಷ್ಟ್ರೀಯ ಚಳವಳಿಯನ್ನು ಗ್ರಾಮೀಣ ಜನರು ಮತ್ತು ಯುವಕರಿಗೆ ತಲುಪಿಸಿದರು. 1938ರ ಶಿವಪುರ ಸತ್ಯಾಗ್ರಹದಲ್ಲಿ ಭಾಗವಹಿಸಿ ಬಂಧನಕ್ಕೊಳಗಾದರು. ಸ್ವಾತಂತ್ರ್ಯಾನಂತರ ಸಂವಿಧಾನ ಸಭೆ ಮತ್ತು ಮೈಸೂರು ಸರ್ಕಾರದಲ್ಲಿಯೂ ಸೇವೆ ಸಲ್ಲಿಸಿದರು.

ಟಿ. ಸುನಂದಮ್ಮ

ಮಹಿಳಾ ಹೋರಾಟದ ಮುಂಚೂಣಿ

ಶಿವಪುರ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಯಂಸೇವಕರ ನಾಯಕಿಯಾಗಿ ಕಾರ್ಯನಿರ್ವಹಿಸಿದ ಸುನಂದಮ್ಮರು ಭಾರತ ಬಿಟ್ಟು ತೊಲಗಿ ಮತ್ತು ಮೈಸೂರು ಚಲೋ ಚಳವಳಿಗಳಲ್ಲಿಯೂ ಭಾಗವಹಿಸಿದರು. ಮಹಿಳೆಯರನ್ನು ರಾಷ್ಟ್ರೀಯ ಹೋರಾಟಕ್ಕೆ ಸಂಘಟಿಸುವಲ್ಲಿ ಪ್ರಮುಖ ಪಾತ್ರವಹಿಸಿದರು.

ಕನಕಪುರದ ರಾಮಚಂದ್ರ

ಗ್ರಾಮೀಣ ಯುವಜನರ ಪ್ರತಿನಿಧಿ

1942ರ ಭಾರತ ಬಿಟ್ಟು ತೊಲಗಿ ಹಾಗೂ 1947ರ ಮೈಸೂರು ಚಲೋ ಚಳವಳಿಗಳಲ್ಲಿ ಭಾಗವಹಿಸಿ ಸೆರೆವಾಸ ಅನುಭವಿಸಿದರು. ಗ್ರಾಮೀಣ ಯುವಕರೂ ಸ್ವಾತಂತ್ರ್ಯ ಮತ್ತು ಜವಾಬ್ದಾರಿ ಸರ್ಕಾರದ ಹೋರಾಟದಲ್ಲಿ ಮುಂಚೂಣಿಗೆ ಬಂದಿದ್ದಕ್ಕೆ ಅವರ ಜೀವನ ಸಾಕ್ಷಿಯಾಗಿದೆ.

ಎಚ್.ಎಸ್. ದೊರೆಸ್ವಾಮಿ

ನಿರಂತರ ಹೋರಾಟಗಾರ

ಕನಕಪುರ ತಾಲೂಕಿನ ಹಾರೋಹಳ್ಳಿಯಲ್ಲಿ ಜನಿಸಿದ ದೊರೆಸ್ವಾಮಿಯವರು 1942ರ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಭಾಗವಹಿಸಿ ಸೆರೆವಾಸ ಅನುಭವಿಸಿದರು. ಭೂಗತ ಚಟುವಟಿಕೆಗಳಲ್ಲಿಯೂ ತೊಡಗಿಸಿಕೊಂಡ ಅವರು, ಸ್ವಾತಂತ್ರ್ಯಾನಂತರವೂ ಜನತಾಂತ್ರಿಕ ಮೌಲ್ಯಗಳ ಪರವಾಗಿ ಧ್ವನಿ ಎತ್ತಿದರು

ಹೋರಾಟದ ಮುಂಚೂಣಿಯಲ್ಲಿ ಯುವಕರು, ಮಹಿಳೆಯರು ಮತ್ತು ಜನಸಾಮಾನ್ಯರು



ಸ್ವಾತಂತ್ರ್ಯ ಆಂದೋಲನದಲ್ಲಿ ಬೆಂಗಳೂರಿನ ಶ್ರಮಿಕ ವರ್ಗ

ಬೆಂಗಳೂರು ಸ್ವಾತಂತ್ರ್ಯ ಹೋರಾಟದಲ್ಲಿ ರಾಜಕೀಯ ನಾಯಕರ ನಗರ ಮಾತ್ರವಾಗಿರಲಿಲ್ಲ. ಮಿಲ್ ಕಾರ್ಮಿಕರು ಮತ್ತು ಶ್ರಮಿಕ ವರ್ಗ ಬ್ರಿಟಿಷ್ ಆಡಳಿತದ ವಿರುದ್ಧದ ಹೋರಾಟದ ಬಲಿಷ್ಠ ಬೆನ್ನೆಲುಬಾಗಿದ್ದರು.

1926ರಲ್ಲಿ ಬಿನ್ನಿ ಮಿಲ್‌ನ ಮುಷ್ಕರ ನಿರತ ಕಾರ್ಮಿಕರ ಮೇಲೆ ನಡೆದ ಗುಂಡಿನ ದಾಳಿಯಲ್ಲಿ ನಾಲ್ವರು ಕಾರ್ಮಿಕರು ಹುತಾತ್ಮರಾದರು. ಈ ಘಟನೆ ಕಾರ್ಮಿಕರ ಆಕ್ರೋಶವನ್ನು ಮತ್ತಷ್ಟು ಹೆಚ್ಚಿಸಿತು.

1932ರಲ್ಲಿ ವಿದೇಶಿ ಬಟ್ಟೆ ಅಂಗಡಿಗಳ ಮುಂದೆ ಕಾರ್ಮಿಕರು ನಡೆಸಿದ ಪಿಕೆಟಿಂಗ್‌ಗೆ ನೂರಾರು ಮಂದಿ ಸೇರಿದರು. ಬ್ರಿಟಿಷ್ ಆಡಳಿತವು 135ಕ್ಕೂ ಹೆಚ್ಚು ಕಾರ್ಮಿಕರನ್ನು ಬಂಧಿಸಿ ಶಿಕ್ಷಿಸಿತು.

1942 — 45 ದಿನಗಳ ಐತಿಹಾಸಿಕ ಮುಷ್ಕರ

ಕ್ವಿಟ್ ಇಂಡಿಯಾ ಚಳವಳಿಯ ಕರೆಗೆ ಓಗೊಟ್ಟು, ಬಿನ್ನಿ ಮಿಲ್‌ನ ಸಾವಿರಾರು ಕಾರ್ಮಿಕರು ಉತ್ಪಾದನೆ ಸ್ಥಗಿತಗೊಳಿಸಿದರು.



ಬಿನ್ನಿ ಮಿಲ್ ಜೊತೆಗೆ ಮಿನರ್ವ ಮಿಲ್, ಮೈಸೂರು ಲ್ಯಾಂಪ್ಸ್ ಮತ್ತು ಸರ್ಕಾರಿ ಸೋಪ್ ಫ್ಯಾಕ್ಟರಿಯ ಕಾರ್ಮಿಕರೂ ಹೋರಾಟಕ್ಕೆ ಬೆಂಬಲ ನೀಡಿದರು.

ಕಾರ್ಮಿಕರು ಕೆಲಸ ನಿಲ್ಲಿಸುವುದರಲ್ಲೇ ನಿಲ್ಲದೆ, ಮೆರವಣಿಗೆ, ಪಿಕೆಟಿಂಗ್ ಮತ್ತು ಧ್ವಜ ಸತ್ಯಾಗ್ರಹಗಳಲ್ಲಿ ಭಾಗವಹಿಸಿದರು. ಮಹಿಳಾ ಕಾರ್ಮಿಕರೂ ಲಾಠಿ ಪ್ರಹಾರವನ್ನು ಲೆಕ್ಕಿಸದೆ ಮುಂಚೂಣಿಯಲ್ಲಿ ನಿಂತರು.

"ಅನ್ನ ಮತ್ತು ಸ್ವಾತಂತ್ರ್ಯ"

1942ರಿಂದ 1947ರವರೆಗೂ ಕಾರ್ಮಿಕರ ಹೋರಾಟ ಮುಂದುವರಿಯಿತು.

ರಾಜಕೀಯ ಕೈದಿಗಳ ಬಿಡುಗಡೆಗಾಗಿ ಮುಷ್ಕರಗಳು ನಡೆದವು. ಯುದ್ಧಾನಂತರದ ಆಹಾರ ಕೊರತೆ ಮತ್ತು ಬೆಲೆ ಏರಿಕೆಯ ವಿರುದ್ಧ ಪೇಟೆ ಕಾರ್ಮಿಕರು "ಅನ್ನ ಮತ್ತು ಸ್ವಾತಂತ್ರ್ಯ" ಎಂಬ ಘೋಷಣೆಯೊಂದಿಗೆ ಬೀದಿಗಿಳಿದರು.

ಸ್ವಾತಂತ್ರ್ಯವೆಂದರೆ ಕೇವಲ ರಾಜಕೀಯ ಮುಕ್ತಿ ಅಲ್ಲ — ಹೊಟ್ಟೆಗೆ ಅನ್ನ, ಕೈಗೆ ಕೆಲಸ ಮತ್ತು ಬದುಕಿಗೆ ಗೌರವವೂ ಬೇಕು ಎಂಬ ಸಂದೇಶವನ್ನು ಕಾರ್ಮಿಕರು ಸಾರಿದರು.



ಒಂದು ನಗರದ ಹೋರಾಟ
ಒಂದು ರಾಷ್ಟ್ರದ ಕನಸು

1942ರಿಂದ 1947ರವರೆಗೂ ಕಾರ್ಮಿಕರ ಹೋರಾಟ ಮುಂದುವರಿಯಿತು.
ರಾಜಕೀಯ ಕೈದಿಗಳ ಬಿಡುಗಡೆಗಾಗಿ ಮುಷ್ಕರಗಳು ನಡೆದವು. ಯುದ್ಧಾನಂತರದ ಆಹಾರ ಕೊರತೆ ಮತ್ತು ಬೆಲೆ ಏರಿಕೆಯ ವಿರುದ್ಧ ಪೇಟೆ ಕಾರ್ಮಿಕರು "ಅನ್ನ ಮತ್ತು ಸ್ವಾತಂತ್ರ್ಯ" ಎಂಬ ಘೋಷಣೆಯೊಂದಿಗೆ ಬೀದಿಗಿಳಿದರು.
ಸ್ವಾತಂತ್ರ್ಯವೆಂದರೆ ಕೇವಲ ರಾಜಕೀಯ ಮುಕ್ತಿ ಅಲ್ಲ — ಹೊಟ್ಟೆಗೆ ಅನ್ನ, ಕೈಗೆ ಕೆಲಸ ಮತ್ತು ಬದುಕಿಗೆ ಗೌರವವೂ ಬೇಕು ಎಂಬ ಸಂದೇಶವನ್ನು ಕಾರ್ಮಿಕರು ಸಾರಿದರು.

ಕಾರ್ಮಿಕರ ಹೋರಾಟ, ವಿದ್ಯಾರ್ಥಿಗಳ ಧೈರ್ಯ,
ಜನರ ಒಗ್ಗಟ್ಟು ಇವೆಲ್ಲ ಸೇರಿ ಕಟ್ಟಿದ್ದು
ಸ್ವತಂತ್ರ ಭಾರತದ ಕನಸು

ಜೈ ಹಿಂದ್! ಜೈ ಕರ್ನಾಟಕ!

ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ

ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,

ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com

ಬೆಂಗಳೂರು

ಹೋರಾಟದ ಕುದಿಯುವ ನಗರ



ಸ್ವಾತಂತ್ರ್ಯ ಹೋರಾಟದಲ್ಲಿ ಬೆಂಗಳೂರಿನ ಪಾತ್ರ

ಬೆಂಗಳೂರು ಕೇವಲ ರಾಜಧಾನಿಯಾಗಿರಲಿಲ್ಲ ರಾಜಕೀಯ ಜಾಗೃತಿ, ವಿದ್ಯಾರ್ಥಿ ಚಳವಳಿ, ಕಾರ್ಮಿಕ ಹೋರಾಟ ಮತ್ತು ಸಾಮಾಜಿಕ ಸುಧಾರಣೆಯ ಪ್ರಮುಖ ಕೇಂದ್ರವಾಗಿತ್ತು. ಮಹಾತ್ಮ ಗಾಂಧೀಜಿ ಸೇರಿದಂತೆ ಅನೇಕ ರಾಷ್ಟ್ರೀಯ ನಾಯಕರು ಬೆಂಗಳೂರಿಗೆ ಭೇಟಿ ನೀಡಿ ಜನರಲ್ಲಿ ಸ್ವಾತಂತ್ರ್ಯದ ಅರಿವು ಮೂಡಿಸಿದರು. 1937ರಲ್ಲಿ ಕೆ.ಎಫ್. ನಾರಿಮನ್ ಅವರ ಬನಪ್ಪ ಪಾರ್ಕ್ ಭಾಷಣ ಯುವಕರಲ್ಲಿ ರಾಷ್ಟ್ರೀಯ ಭಾವನೆಗೆ ಹೊಸ ಕಿಡಿ ಹಚ್ಚಿತು.



1942 — ಬೆಂಗಳೂರಿನ ಬೀದಿಗಳಲ್ಲಿ ಕ್ವಿಟ್ ಇಂಡಿಯಾ

ಕ್ವಿಟ್ ಇಂಡಿಯಾ ಚಳವಳಿಯ ಸಂದರ್ಭದಲ್ಲಿ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳು, ಕಾರ್ಮಿಕರು ಮತ್ತು ಯುವಕರು ಬ್ರಿಟಿಷರ ವಿರುದ್ಧ ಬೀದಿಗಿಳಿದರು. ಬ್ರಿಟಿಷರ ಇಂಧನ, ಆಹಾರ ಮತ್ತು ಅಂಚೆ ಸರಬರಾಜಿಗೆ ತಡೆ, ಪ್ರತಿಭಟನೆಗಳು ಹಾಗೂ ಮುಷ್ಕರಗಳು ನಗರದಲ್ಲಿ ಹೋರಾಟದ ತೀವ್ರತೆಯನ್ನು ಹೆಚ್ಚಿಸಿದವು. ರಾಜಾ ಮಿಲ್ಸ್, ಮಿನರ್ವ ಮಿಲ್ಸ್, ಬಿನ್ನಿ ಮಿಲ್ ಸೇರಿದಂತೆ ಹಲವು ಕಾರ್ಖಾನೆಗಳ ಕಾರ್ಮಿಕರು ಮುಷ್ಕರ ನಡೆಸಿದರು. 1942ರ ಆಗಸ್ಟ್ 11ರಂದು ಮೈಸೂರು ಬ್ಯಾಂಕ್ ವೃತ್ತದ ಪ್ರತಿಭಟನೆಯಲ್ಲಿ ನಡೆದ ಗೋಲಿಬಾರ್‌ನಲ್ಲಿ ಸೆಂಟ್ರಲ್ ಕಾಲೇಜಿನ ಮೂವರು ವಿದ್ಯಾರ್ಥಿಗಳು ಸೇರಿದಂತೆ ನಾಲ್ವರು ಹುತಾತ್ಮರಾದರು.

ಈಸೂರು ಹೋರಾಟಕ್ಕೆ ಬೆಂಗಳೂರಿನ ಪ್ರತಿಧ್ವನಿ

ಈಸೂರಿನಲ್ಲಿ ಬ್ರಿಟಿಷರ ದಮನದ ಸುದ್ದಿ ಬೆಂಗಳೂರಿಗೆ ತಲುಪುತ್ತಿದ್ದಂತೆ, ವಿದ್ಯಾರ್ಥಿಗಳು ಮತ್ತು ಯುವಕರು ಬೃಹತ್ ಮೆರವಣಿಗೆ ಹಾಗೂ ಸತ್ಯಾಗ್ರಹ ನಡೆಸಿದರು.
1943ರಲ್ಲಿ ಈಸೂರು ಹೋರಾಟಗಾರರಿಗೆ ಮರಣದಂಡನೆ ಜಾರಿಯಾದಾಗ ಬೆಂಗಳೂರಿನಲ್ಲಿ ತೀವ್ರ ಪ್ರತಿಭಟನೆಗಳು ನಡೆದವು. ಸ್ವಾತಂತ್ರ್ಯದ ದಿನವೇ, 1947ರ ಆಗಸ್ಟ್ 15ರಂದು, ಬೆಂಗಳೂರು ಸೆಂಟ್ರಲ್ ಜೈಲಿನಿಂದ ಬಿಡುಗಡೆಯಾದ ಈಸೂರು ಹೋರಾಟಗಾರರನ್ನು ಜನರು ಭವ್ಯವಾಗಿ ಸ್ವಾಗತಿಸಿದರು.

ಎಲ್ಲರ ಹೋರಾಟ — ಒಂದೇ ಸ್ವಾತಂತ್ರ್ಯ

ಬೆಂಗಳೂರಿನ ಸ್ವಾತಂತ್ರ್ಯ ಹೋರಾಟವು ರಾಜಕೀಯ ನಾಯಕರಿಗೆ ಮಾತ್ರ ಸೀಮಿತವಾಗಿರಲಿಲ್ಲ. ಬಿನ್ನಿ, ರಾಜಾ ಮತ್ತು ಇತರ ಮಿಲ್‌ಗಳ ಕಾರ್ಮಿಕರು ಮುಷ್ಕರ ಹಾಗೂ ಸತ್ಯಾಗ್ರಹಗಳಲ್ಲಿ ಪಾಲ್ಗೊಂಡರು. 1920ರ ದಶಕದಲ್ಲಿ ಖಿಲಾಫತ್–ಕಾಂಗ್ರೆಸ್ ಚಳವಳಿಯ ಮೂಲಕ ಹಿಂದೂ–ಮುಸ್ಲಿಂ ಐಕ್ಯತೆ ಕೂಡ ಬಲಗೊಂಡಿತು. ಕಂಟೋನ್ಮೆಂಟ್ ಪ್ರದೇಶದ ವಿವಿಧ ಸಮುದಾಯಗಳ ನಾಯಕರು ಮತ್ತು ಕಾರ್ಯಕರ್ತರು ಹೋರಾಟಗಾರರಿಗೆ ಬೆಂಬಲ ನೀಡಿದರು.

ಬೆಂಗಳೂರಿನ ಸ್ವಾತಂತ್ರ್ಯದ ಮುಂಚೂಣಿಯವರು

ಕೆ. ಸಿ. ರೆಡ್ಡಿ



ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿ ಪ್ರಜಾಪ್ರಭುತ್ವದ ಹೋರಾಟಗಾರ.
ಮೈಸೂರು ಕಾಂಗ್ರೆಸ್‌ನ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿ, ಸಂಸ್ಥಾನದಲ್ಲಿ ಜವಾಬ್ದಾರಿಯುತ ಸರ್ಕಾರಕ್ಕಾಗಿ ಹೋರಾಡಿದರು. 1947ರ "ಮೈಸೂರು ಚಲೋ" ಚಳವಳಿಯನ್ನು ಮುನ್ನಡೆಸಿ, ಮೈಸೂರು ರಾಜ್ಯದಲ್ಲಿ ಪ್ರಜಾಪ್ರಭುತ್ವ ಸರ್ಕಾರ ಸ್ಥಾಪನೆಗೆ ದಾರಿ ಮಾಡಿಕೊಟ್ಟರು.

ಎಚ್. ಎಸ್. ದೊರೆಸ್ವಾಮಿ



ಸ್ವಾತಂತ್ರ್ಯದಿಂದ ಸಾಮಾಜಿಕ ನ್ಯಾಯದವರೆಗೆ.
ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಭೂಗತವಾಗಿ ಪತ್ರಿಕೆ ನಡೆಸಿ ಬ್ರಿಟಿಷರ ವಿರುದ್ಧ ಹೋರಾಡಿದರು. ಜವಾಬ್ದಾರಿಯುತ ಸರ್ಕಾರ, ಕರ್ನಾಟಕ ಏಕೀಕರಣ, ಸಾಮಾಜಿಕ ಸೌಹಾರ್ದ ಮತ್ತು ಸ್ವಚ್ಛ ಆಡಳಿತಕ್ಕಾಗಿ ಜೀವನಪೂರ್ತಿ ಧ್ವನಿಯೆತ್ತಿದರು.

ಆರ್. ಕಲ್ಯಾಣಮ್ಮ



ಬರಹದ ಮೂಲಕ ಮಹಿಳಾ ಜಾಗೃತಿ ಮತ್ತು ಸ್ವದೇಶಿಯ ಕಿಚ್ಚು ಹಚ್ಚಿದವರು.
ಮಹಿಳಾ ಸೇವಾ ಸಮಾಜ ಮತ್ತು ಮಕ್ಕಳ ಕೂಟದ ಮೂಲಕ ಮಹಿಳಾ ಸಬಲೀಕರಣ ಹಾಗೂ ಮಕ್ಕಳ ಶಿಕ್ಷಣಕ್ಕೆ ಹೊಸ ದಾರಿ ತೋರಿದರು. ಸರಸ್ವತಿ ಪತ್ರಿಕೆಯ ಮೂಲಕ ಸ್ವದೇಶಿ, ಖಾದಿ, ಮಹಿಳಾ ಹಕ್ಕು ಮತ್ತು ಅಸ್ಪೃಶ್ಯತಾ ನಿರ್ಮೂಲನೆಗೆ ಬಲವಾದ ಧ್ವನಿಯಾದರು.

ಆರ್. ಗೋಪಾಲಸ್ವಾಮಿ ಅಯ್ಯಂಗಾರ್

ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿ, ಪ್ರಜಾಪ್ರಭುತ್ವದ ಹೋರಾಟಗಾರ.
ದಲಿತ ಮಕ್ಕಳ ಶಿಕ್ಷಣ ಮತ್ತು ವಸತಿಗಾಗಿ ಸಂಸ್ಥೆಗಳನ್ನು ಸ್ಥಾಪಿಸುವುದರ ಜೊತೆಗೆ, ಖಾದಿ, ಸ್ವದೇಶಿ ಮತ್ತು ಸ್ವರಾಜ್ಯದ ವಿಚಾರಗಳನ್ನು ಜನರಲ್ಲಿ ಬೆಳೆಸಿದರು.

ಗಜಾಂಬಾಳ್ ರಾಮಲಿಂಗಮ್

ದೇಶಕ್ಕಾಗಿ ತನ್ನ ಸರ್ವಸ್ವವನ್ನೇ ಅರ್ಪಿಸಿದ ಮಹಿಳೆ.
ಗಾಂಧೀಜಿಯವರ ಹರಿಜನ ನಿಧಿ ಅಭಿಯಾನದ ಸಂದರ್ಭದಲ್ಲಿ ತಮ್ಮ ಬಳಿಯಿದ್ದ ಸ್ತ್ರೀಧನ ಮತ್ತು ಚಿನ್ನಾಭರಣಗಳನ್ನು ದೇಶಸೇವೆಗೆ ದಾನ ಮಾಡಿ ಸ್ವಾತಂತ್ರ್ಯ ಚಳವಳಿಗೆ ಬೆಂಬಲ ನೀಡಿದರು.

ಕಮಲಾಬಾಯಿ ಚಂದೂರ್

ಗರ್ಭಿಣಿಯಾಗಿದ್ದರೂ ಹೋರಾಟದಿಂದ ಹಿಂದೆ ಸರಿಯದ ಧೀರ ಮಹಿಳೆ.
ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿದರು. ಯರವಾಡ ಜೈಲಿನಲ್ಲೇ ಮಗುವಿಗೆ ಜನ್ಮ ನೀಡಿದ ಅವರ ತ್ಯಾಗ ಸ್ವಾತಂತ್ರ್ಯ ಹೋರಾಟದ ಅಪರೂಪದ ಅಧ್ಯಾಯವಾಗಿದೆ.ನೀಡಿದರು.

ಯಶೋಧರಮ್ಮ ದಾಸಪ್ಪ

ಮಹಿಳೆಯರನ್ನು ಸಂಘಟಿಸಿದ ಧ್ವಜ ಸತ್ಯಾಗ್ರಹದ ವೀರ ಮಹಿಳೆ.
ಬೆಂಗಳೂರು ಮೂಲದ ಯಶೋಧರಮ್ಮ ಅವರು ಮಹಿಳೆಯರನ್ನು ಸ್ವಾತಂತ್ರ್ಯ ಚಳವಳಿಗೆ ಸಂಘಟಿಸಿದರು. 1938ರ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಬ್ರಿಟಿಷರ ತಡೆಯನ್ನೂ ಲೆಕ್ಕಿಸದೆ ಧ್ವಜದ ಗೌರವಕ್ಕಾಗಿ ಹೋರಾಡಿದರು.

ಇವರು ಹೋರಾಡಿದ್ದು ಕೇವಲ ಸ್ವಾತಂತ್ರ್ಯಕ್ಕಾಗಿ ಅಲ್ಲ...

- ಶಿಕ್ಷಣಕ್ಕಾಗಿ • ಸಮಾನತೆಗಾಗಿ
- ಮಹಿಳಾ ಶಕ್ತಿಗಾಗಿ • ಪ್ರಜಾಪ್ರಭುತ್ವಕ್ಕಾಗಿ

ಅವರ ಧೈರ್ಯವೇ ಬೆಂಗಳೂರಿನ ಸ್ವಾತಂತ್ರ್ಯದ ಇತಿಹಾಸದ ಹೆಮ್ಮೆ. ಬೆಂಗಳೂರಿನ ಬೀದಿಗಳಲ್ಲಿ ಮೊಳಗಿದ ಹೋರಾಟ





ಪ್ರಮುಖ ಐತಿಹಾಸಿಕ ಸಂಗತಿಗಳು

ಗೋರಟಾ — ರಜಾಕಾರರ ದೌರ್ಜನ್ಯದ ರಕ್ತಸಾಕ್ಷಿ

1948ರ ಮೇ ತಿಂಗಳಲ್ಲಿ ಭಾರತದೊಂದಿಗೆ ಏಕತೆಯ ಪರ ನಿಂತಿದ್ದ ಗೋರಟಾ ಗ್ರಾಮದ ಮೇಲೆ ರಜಾಕಾರರು ದಾಳಿ ನಡೆಸಿದರು. ಹತ್ತಾರು ಗ್ರಾಮಸ್ಥರು ಹತ್ಯೆಗೀಡಾದ ಈ ದುರಂತವು ನಿಜಾಮನ ಆಡಳಿತದ ದಮನದ ಕರಾಳ ಮುಖವನ್ನು ತೆರೆದಿಟ್ಟಿತು.

ಗೋರಟಾ ಕೇವಲ ಒಂದು ಗ್ರಾಮದ ದುರಂತವಲ್ಲ — ಭಾರತದೊಂದಿಗೆ ಒಂದಾಗುವ ಹಕ್ಕಿಗಾಗಿ ಬೀದರ್ ಜನತೆ ನೀಡಿದ ರಕ್ತದ ಬೆಲೆಯ ಸಂಕೇತ.

ಆರ್ಯ ಸಮಾಜ — ಜಾಗೃತಿಯ ಮತ್ತೊಂದು ದಾರಿ

1930ರ ದಶಕದಿಂದಲೇ ಆರ್ಯ ಸಮಾಜವು ಬೀದರ್ ಸೇರಿದಂತೆ ಹೈದರಾಬಾದ್ ಸಂಸ್ಥಾನದಲ್ಲಿ ಶಿಕ್ಷಣ, ನಾಗರಿಕ ಹಕ್ಕು, ಸಮಾನತೆ ಮತ್ತು ಅಸ್ಪೃಶ್ಯತಾ ನಿವಾರಣೆಗಾಗಿ ಜನರನ್ನು ಸಂಘಟಿಸಿತು.

1937ರಲ್ಲಿ ನಿಜಾಮು ಸರ್ಕಾರ ಸಭೆಗಳಿಗೆ ನಿರ್ಬಂಧ ಹೇರಿದಾಗ, ಕಾರ್ಯಕರ್ತರು ಸತ್ಯಾಗ್ರಹದ ಮೂಲಕ ಪ್ರತಿರೋಧಿಸಿದರು. ಬೀದರ್, ಬಸವಕಲ್ಯಾಣ, ಚಿಟಗುಪ್ಪ ಸೇರಿದಂತೆ ಹಲವು ಪ್ರದೇಶಗಳಲ್ಲಿ ಈ ಚಳವಳಿ ರಾಷ್ಟ್ರೀಯ ಜಾಗೃತಿಗೆ ಬಲ ನೀಡಿತು. ರಾಜಕೀಯ ವಿಮೋಚನೆಯ ಜೊತೆಗೆ ಸಾಮಾಜಿಕ ಜಾಗೃತಿಯನ್ನೂ ಬೆಳೆಸಿದ ಚಳವಳಿಯೇ ಬೀದರ್‌ನ ವಿಶೇಷತೆ.

ವಿಮೋಚನೆಯ ಪರಂಪರೆಯಿಂದ ಸಂವಿಧಾನದ ಭಾರತದೆಡೆಗೆ

ಭಾರತದ ಬಹುತೇಕ ಭಾಗಗಳು 1947ರಲ್ಲಿ ಸ್ವಾತಂತ್ರ್ಯ ಪಡೆದರೂ, ಬೀದರ್‌ನ ಹೋರಾಟ ಅಲ್ಲಿಗೆ ಮುಗಿಯಲಿಲ್ಲ. ನಿಜಾಮನ ಆಡಳಿತ ಮತ್ತು ರಜಾಕಾರರ ದೌರ್ಜನ್ಯದ ವಿರುದ್ಧ ಜನರು ಇನ್ನೂ ಹೋರಾಡಬೇಕಾಯಿತು.

ಶರಣಗೌಡ ಇನಾಂದಾರ್ ಸೇರಿದಂತೆ ಅಸಂಖ್ಯಾತ ಹೋರಾಟಗಾರರು ತಮ್ಮ ಬದುಕನ್ನು ದೇಶ ಮತ್ತು ಜನರಿಗಾಗಿ

ಅರ್ಪಿಸಿದರು. ಜಾತಿ, ಧರ್ಮ, ಭಾಷೆ ಮತ್ತು ವರ್ಗದ ಭೇದಗಳನ್ನು ಮೀರಿ 'ಭಾರತೀಯ' ಎಂಬ ಒಂದೇ ಗುರುತಿನಡಿ ಒಂದಾದ ಅವರ ಹೋರಾಟವೇ ಬೀದರ್ ಅನ್ನು ಭಾರತ ಒಕ್ಕೂಟದೊಂದಿಗೆ ಬೆಸೆದಿತು.

ಇಂದು ಅವರ ತ್ಯಾಗದ ಫಲವಾಗಿ ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಹಕ್ಕುಗಳನ್ನು ಕಾಪಾಡುವುದು ನಮ್ಮ ಹೊಣೆ.

ಸಮಾನತೆ, ನ್ಯಾಯ, ಸ್ವಾತಂತ್ರ್ಯ ಮತ್ತು ಸೌಹಾರ್ದತೆಯ ಸಂವಿಧಾನಬದ್ಧ ಭಾರತವನ್ನು ಕಟ್ಟುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ.

ಜೈ ಹಿಂದ್! ಜೈ ಕರ್ನಾಟಕ!




ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ

ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,

ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com

ಬೀದರ್

ಇಬ್ಬಗೆಯ ದಾಸ್ಯಗಳ ನಡುವೆ ಸ್ವಾತಂತ್ರ್ಯದ ಕಹಳೆ





ಇಬ್ಬಗೆಯ ದಾಸ್ಯಗಳ ನಡುವೆ ಸ್ವಾತಂತ್ರ್ಯದ ಕಹಳೆ

ಬೀದರ್‌ನ ಸ್ವಾತಂತ್ರ್ಯ ಹೋರಾಟವು ಬ್ರಿಟಿಷ್ ಆಳ್ವಿಕೆಯ ನೆರಳಿನಲ್ಲಿದ್ದ ನಿಜಾಮನ ನಿರಂಕುಶ ಆಡಳಿತದಿಂದ ವಿಮೋಚನೆ ಪಡೆಯುವ ಹೋರಾಟವೂ ಆಗಿತ್ತು. 1947ರ ಆಗಸ್ಟ್ 15ರಂದು ಭಾರತ ಸ್ವತಂತ್ರವಾದರೂ, ಹೈದರಾಬಾದ್ ಸಂಸ್ಥಾನ ತಕ್ಷಣ ಭಾರತ ಒಕ್ಕೂಟಕ್ಕೆ ಸೇರಲಿಲ್ಲ.

ಹೀಗಾಗಿ ಬೀದರ್‌ನಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯ, ನಾಗರಿಕ ಹಕ್ಕು, ಸಾಮಾಜಿಕ ಸಮಾನತೆ ಮತ್ತು ಭಾರತದೊಂದಿಗೆ ಏಕೀಕರಣ — ಈ ಎಲ್ಲ ಆಶಯಗಳು ಒಂದೇ ಹೋರಾಟವಾಗಿ ಬೆಸೆದುಕೊಂಡವು.

ಹೈದರಾಬಾದ್ ರಾಜ್ಯ ಕಾಂಗ್ರೆಸ್, ಆರ್ಯ ಸಮಾಜ ಮತ್ತು ಸ್ಥಳೀಯ ಜನಪರ ಸಂಘಟನೆಗಳು ಜನರಲ್ಲಿ ರಾಷ್ಟ್ರೀಯ ಜಾಗೃತಿ ಮೂಡಿಸಿದವು. ಯುವಕರು ಗಡಿ ಶಿಬಿರಗಳಲ್ಲಿ ಸಂಘಟಿತರಾಗಿ ರಜಾಕಾರರ ದೌರ್ಜನ್ಯಕ್ಕೆ ಪ್ರತಿರೋಧಿಸಿದರು.

ಪ್ರಮುಖ ಹೋರಾಟಗಾರರು

‘ಬೀದರ್‌ನ ಸರ್ದಾರ್’ ಶರಣಗೌಡ ಇನಾಂದಾರ್

ಗಡಿ ಯುವಜನರ ಪಡೆ ಮತ್ತು ಬಾರ್ಡರ್ ಕ್ಯಾಂಪ್‌ಗಳ ಮೂಲಕ ಯುವಕರನ್ನು ಸಂಘಟಿಸಿ ರಜಾಕಾರರ ವಿರುದ್ಧ ಪ್ರತಿರೋಧ ಕಟ್ಟಿದರು. 1948ರ ಹೈದರಾಬಾದ್ ವಿಮೋಚನೆಯವರೆಗೂ ಹೋರಾಟ ಮುಂದುವರಿಸಿದರು.

ಜಯದೇವಿ ತಾಯಿ ಲಿಗಾಡೆ



ಬಸವಕಲ್ಯಾಣವನ್ನು ಕರ್ಮಭೂಮಿಯನ್ನಾಗಿ ಮಾಡಿಕೊಂಡು ಹೈದರಾಬಾದ್ ವಿಮೋಚನಾ ಚಳವಳಿಯಲ್ಲಿ ಸಕ್ರಿಯರಾದರು. ಮಹಿಳಾ ಶಿಕ್ಷಣ, ಸಬಲೀಕರಣ ಮತ್ತು ಕರ್ನಾಟಕ ಏಕೀಕರಣಕ್ಕೂ ಶ್ರಮಿಸಿದರು.

ಚನ್ನಬಸವ ಪಟ್ಟದ್ದೇವರು



ಶಿಕ್ಷಣ, ಕನ್ನಡಾಭಿಮಾನ ಮತ್ತು ಸಾಮಾಜಿಕ ಜಾಗೃತಿಯ ಮೂಲಕ ನಿಜಾಮನ ಆಡಳಿತದ ಕಾಲದಲ್ಲಿ ಜನರಲ್ಲಿ ಆತ್ಮವಿಶ್ವಾಸ ಮತ್ತು ಸಾಂಸ್ಕೃತಿಕ ಪ್ರಜ್ಞೆ ಮೂಡಿಸಿದರು.

ಶಂಕರರಾವ್ ಅಲ್ಮೇಲಕರ್

ಆರ್ಯ ಸಮಾಜದ ಮೂಲಕ ರಾಷ್ಟ್ರೀಯ ಜಾಗೃತಿ, ಶಿಕ್ಷಣ ಮತ್ತು ಅಸ್ಪೃಶ್ಯತಾ ನಿವಾರಣೆಯ ಆಶಯಗಳನ್ನು ಜನರ ನಡುವೆ ಬೆಳೆಸಿದ ಪ್ರಮುಖ ಸಮಾಜ ಸುಧಾರಕ.

ರಾಮಚಂದ್ರ ವೀರಪ್ಪ



ದಲಿತ ಸಮುದಾಯದಿಂದ ಬಂದ ಪ್ರಮುಖ ವಿಮೋಚನಾ ಹೋರಾಟಗಾರ. ನಿಜಾಮ ಮತ್ತು ರಜಾಕಾರರ ವಿರುದ್ಧ ಹೋರಾಡುವುದರ ಜೊತೆಗೆ ಸಾಮಾಜಿಕ ಸಮಾನತೆ ಮತ್ತು ದಲಿತರ ಹಕ್ಕುಗಳ ಪರ ಧ್ವನಿ ಎತ್ತಿದರು.


ಭೀಮಣ್ಣ ಖಂಡ್ರೆ



ಚಿಕ್ಕ ವಯಸ್ಸಿನಲ್ಲೇ ಹೈದರಾಬಾದ್ ವಿಮೋಚನಾ ಹೋರಾಟಕ್ಕೆ ಧುಮುಕಿ, ಆರ್ಯ ಸಮಾಜದ ಮೂಲಕ ರಾಷ್ಟ್ರೀಯ ಪ್ರಜ್ಞೆ ಮೂಡಿಸಿದರು. ನಂತರ ಕರ್ನಾಟಕ ಏಕೀಕರಣಕ್ಕೂ ಕೊಡುಗೆ ನೀಡಿದರು.

ಹೀರಾಚಂದ್ ವಾಘ್ಮಾರೆ

ಸಮಾಜವಾದಿ ಚಿಂತನೆಯ ಜನಪರ ಹೋರಾಟಗಾರ. ಬೀದರ್ ಭಾಗದಲ್ಲಿ ಸಾಮಾಜಿಕ ನ್ಯಾಯ ಮತ್ತು ಜನಜಾಗೃತಿಗಾಗಿ ದೀರ್ಘಕಾಲ ಶ್ರಮಿಸಿದರು.



ಪ್ರಮುಖ ಐತಿಹಾಸಿಕ ಸಂಗತಿಗಳು

ಹಲಗಲಿಯ ಬೇಡರ ಬಂಡಾಯ – 1857

ಬ್ರಿಟಿಷರು ಸ್ಥಳೀಯರಿಂದ ಆಯುಧಗಳನ್ನು ಒಪ್ಪಿಸುವಂತೆ ಆದೇಶಿಸಿದಾಗ ಹಲಗಲಿಯ ಬೇಡರು ಅದನ್ನು ತಿರಸ್ಕರಿಸಿದರು. 1857ರ ನವೆಂಬರ್ 29ರಂದು ಬ್ರಿಟಿಷ್ ಪಡೆಗಳು ಮತ್ತು ಗ್ರಾಮಸ್ಥರ ನಡುವೆ ಭೀಕರ ಘರ್ಷಣೆ ನಡೆಯಿತು.

ಜಡಗಪ್ಪ, ಬಾಳ್ಯ, ಪೂಜಾರಿ ಹನುಮ ಮತ್ತು ರಾಮ ಸೇರಿದಂತೆ ಅನೇಕರು ಮುಂಚೂಣಿಯಲ್ಲಿ ಹೋರಾಡಿದರು. ಬ್ರಿಟಿಷ್ ಪಡೆಗಳು ಗ್ರಾಮವನ್ನು ಸುತ್ತುವರಿದು ದಾಳಿ ನಡೆಸಿದರೂ, ಹೋರಾಟಗಾರರು ಶರಣಾಗದೆ ಪ್ರತಿರೋಧಿಸಿದರು. ಹಲಗಲಿಯ ಬಂಡಾಯದ ನೆನಪು ಇಂದಿಗೂ ಸ್ಥಳೀಯ ಜನಪದ ಪರಂಪರೆಯಲ್ಲಿ ಉಳಿದಿದೆ.

ಬಿಜಾಪುರದಲ್ಲಿ ಡಾ. ಬಿ.ಆರ್. ಅಂಬೇಡ್ಕರ್

1937ರ ಮೇ 30ರಂದು ಡಾ. ಬಿ.ಆರ್. ಅಂಬೇಡ್ಕರ್ ಅವರು ಕಾನೂನು ಪ್ರಕರಣವೊಂದರ ಸಂಬಂಧ ಬಿಜಾಪುರಕ್ಕೆ ಆಗಮಿಸಿದರು. ಸೋಮನಗೌಡ ಪಾಟೀಲರ ಪ್ರಕರಣದಲ್ಲಿ ವಕೀಲರಾಗಿ ಹಾಜರಾಗಿ, ಅವರನ್ನು ನಿರ್ದೋಷಿ ಎಂದು ಬಿಡುಗಡೆಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದರು.

ಮರುದಿನ ನಡೆದ ಜಿಲ್ಲಾ ಹರಿಜನ ಪರಿಷತ್ತಿನಲ್ಲಿ ಭಾಗವಹಿಸಿ, ಅಸ್ಪೃಶ್ಯತೆ, ಶಿಕ್ಷಣ, ಸಾಮಾಜಿಕ ಹಕ್ಕುಗಳು ಮತ್ತು ಸಮಾನತೆಯ ಕುರಿತು ಮಾತನಾಡಿದರು. ಅವರ ಭೇಟಿಯು ಈ ಭಾಗದಲ್ಲಿ ಶಿಕ್ಷಣ, ಸಂಘಟನೆ ಮತ್ತು ಆತ್ಮಗೌರವದ ಚಿಂತನೆಗೆ ಮತ್ತಷ್ಟು ಬಲ ನೀಡಿತು.

ನ್ಯಾಯಾಲಯದಲ್ಲಿ
ಕಾನೂನಿನ ಹೋರಾಟ
ಜನರ ನಡುವೆ
ಸಮಾನತೆಯ ಜಾಗೃತಿ



ಅವರ ತ್ಯಾಗದ ಭಾರತ – ನಮ್ಮ ಹೊಣೆ

ಹಲಗಲಿಯ ಬೇಡ ವೀರರ ರಕ್ತಸಿಕ್ತ ಬಂಡಾಯದಿಂದ ಹಿಡಿದು ಕೌಜಲಗಿ, ಸುಗಂಧಿ ಮುರಿಗಪ್ಪ, ಮುದವೀಡು ಕೃಷ್ಣರಾಯ, ಎಸ್.ಆರ್. ಕಂಠಿ ಮತ್ತು ಅಸಂಖ್ಯಾತ ಅನಾಮಿಕ ಹೋರಾಟಗಾರರ ಸೇವೆಯವರೆಗೆ, ವಿಜಯಪುರ-ಬಾಗಲಕೋಟೆಯ ಸ್ವಾತಂತ್ರ್ಯಗಾಥೆ ತ್ಯಾಗ, ಧೈರ್ಯ ಮತ್ತು ಜನಶಕ್ತಿಯ ಕಥೆ.

ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಮಹಿಳೆಯರು ಮತ್ತು ವಿವಿಧ ಸಮುದಾಯಗಳ ಜನರು ಸ್ವಾತಂತ್ರ್ಯದ ಒಂದೇ ಗುರಿಯಡಿ ಒಂದಾದರು. ಅವರ ತ್ಯಾಗದಿಂದ ದೊರೆತ ಸ್ವಾತಂತ್ರ್ಯವೇ ನಮ್ಮ ಪ್ರಜಾಪ್ರಭುತ್ವದ ಅಡಿಪಾಯ.

ಇಂದು ಅವರ ಹೋರಾಟದ ನಿಜವಾದ ಗೌರವವೆಂದರೆ ಸಮಾನತೆ, ಸ್ವಾತಂತ್ರ್ಯ, ನ್ಯಾಯ ಮತ್ತು ಸೌಹಾರ್ದತೆಯ ಸಂವಿಧಾನಿಕ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದು.

ಅವರು ಸ್ವಾಭಿಮಾನಕ್ಕಾಗಿ ರಕ್ತ ಸುರಿಸಿದರು;
ನಾವು ನ್ಯಾಯ ಮತ್ತು ಸಮಾನತೆಯ ಭಾರತ ಕಟ್ಟೋಣ.

ಜೈ ಹಿಂದ್! ಜೈ ಕರ್ನಾಟಕ!



ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ

ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,

ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com





ವಿಜಯಪುರ ಬಾಗಲಕೋಟೆ

ಹಲಗಲಿಯ ರಣಕಹಳೆಯಿಂದ ಜನಚಳವಳಿಯವರೆಗೆ



ವಿಜಯಪುರ – ಬಾಗಲಕೋಟೆಯ ಸ್ವಾತಂತ್ರ್ಯಗಾಥೆ

ವಿಜಯಪುರ-ಬಾಗಲಕೋಟೆಯ ಸ್ವಾತಂತ್ರ್ಯಗಾಥೆ

ಹಳೆಯ ಬಿಜಾಪುರ ಜಿಲ್ಲೆ—ಇಂದಿನ ವಿಜಯಪುರ ಮತ್ತು ಬಾಗಲಕೋಟೆ—ಉತ್ತರ ಕರ್ನಾಟಕದ ಪ್ರಮುಖ ಸ್ವಾತಂತ್ರ್ಯ ಹೋರಾಟದ ನೆಲೆ. 1857ಕ್ಕೂ ಮುನ್ನವೇ ಬ್ರಿಟಿಷ್ ವಿರೋಧಿ ಅಸಮಾಧಾನ ಇಲ್ಲಿ ಕಾಣಿಸಿಕೊಂಡಿತ್ತು. ನಂತರ ಅಸಹಕಾರ, ಸ್ವದೇಶಿ, ಖಾದಿ, ಉಪ್ಪಿನ ಸತ್ಯಾಗ್ರಹ ಮತ್ತು ಕರ ನಿರಾಕರಣೆ ಚಳವಳಿಗಳು ಜನರನ್ನು ಸಂಘಟಿಸಿದವು.

ಹಲಗಲಿಯಲ್ಲಿ ಹೊತ್ತಿದ ಬಂಡಾಯದ ಕಿಚ್ಚು

1857ರಲ್ಲಿ ಮುಧೋಳದ ಹಲಗಲಿ ಗ್ರಾಮದ ಬೇಡರು ಬ್ರಿಟಿಷರ ನಿಶ್ಶಸ್ತ್ರೀಕರಣ ನೀತಿಯನ್ನು ವಿರೋಧಿಸಿ ಸಶಸ್ತ್ರ ಪ್ರತಿರೋಧ ನಡೆಸಿದರು. ತಮ್ಮ ಆಯುಧ ಮತ್ತು ಸ್ವಾಭಿಮಾನವನ್ನು ಒಪ್ಪಿಸಲು ನಿರಾಕರಿಸಿದ ಅವರು ಬ್ರಿಟಿಷ್ ಪಡೆಗಳ ವಿರುದ್ಧ ವೀರಾವೇಶದಿಂದ ಹೋರಾಡಿದರು.

ರೈತರಿಂದ ಜನಸಾಮಾನ್ಯರವರೆಗೆ

ಕಂದಾಯ ಮತ್ತು ವಸಾಹತುಶಾಹಿ ನೀತಿಗಳ ವಿರುದ್ಧ ರೈತರು ಪ್ರತಿರೋಧ ತೋರಿದರು. ಶ್ರೀನಿವಾಸರಾವ್ ಕೌಜಲಗಿ ಮತ್ತು ಹನುಮಂತರಾವ್ ಕೌಜಲಗಿ ಮುಂತಾದ ನಾಯಕರು ಖಾದಿ, ಸ್ವದೇಶಿ ಮತ್ತು ರಾಷ್ಟ್ರೀಯ ಜಾಗೃತಿಯನ್ನು ಜನರ ನಡುವೆ ಬಲಪಡಿಸಿದರು.

1942ರ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲೂ ವಿಜಯಪುರ ಭಾಗದಲ್ಲಿ ಜನಪ್ರತಿರೋಧ ತೀವ್ರಗೊಂಡಿತು.

ಸ್ವಾಭಿಮಾನ ಕಸಿಯಲು ಬಂದವರಿಗೆ ಹಲಗಲಿಯ ನೆಲ ಸವಾಲೊಡ್ಡಿತು



ಜಿಲ್ಲೆಯ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರು

◢ ಹಲಗಲಿಯ ವೀರರು

ಜಡಗ, ರಾಮು, ಬಾಳ್ಯ ಮತ್ತು ಪೂಜಾರಿ ಹನುಮ

1857ರ ನಿಶ್ಶಸ್ತ್ರೀಕರಣ ಕಾಯ್ದೆಯನ್ನು ವಿರೋಧಿಸಿ ಬ್ರಿಟಿಷರ ವಿರುದ್ಧ ಹೋರಾಡಿದ ಹಲಗಲಿಯ ಧೀರರು. ಶಸ್ತ್ರಗಳನ್ನು ಒಪ್ಪಿಸಲು ನಿರಾಕರಿಸಿ ಪ್ರಾಣತ್ಯಾಗ ಮಾಡಿದ ಅವರ ಬಲಿದಾನ ಉತ್ತರ ಕರ್ನಾಟಕದ ಪ್ರತಿರೋಧದ ಅಮರ ಅಧ್ಯಾಯ.



◢ ಶ್ರೀನಿವಾಸರಾವ್ ಕೌಜಲಗಿ

ಉತ್ತರ ಕರ್ನಾಟಕದಲ್ಲಿ ಗಾಂಧೀಜಿಯವರ ಅಸಹಕಾರ ಮತ್ತು ಸತ್ಯಾಗ್ರಹದ ಸಂದೇಶವನ್ನು ಜನರ ಬಳಿಗೆ ಕೊಂಡೊಯ್ದ ಪ್ರಮುಖ ರಾಷ್ಟ್ರೀಯ ನಾಯಕ. ಖಾದಿ, ಸ್ವದೇಶಿ ಮತ್ತು ರಾಷ್ಟ್ರೀಯ ಜಾಗೃತಿಯ ಬೆಳವಣಿಗೆಗೆ ಕೊಡುಗೆ ನೀಡಿದರು.

◢ ಸುಗಂಧಿ ಮುರಿಗಪ್ಪ ಸಿದ್ದಪ್ಪ

ದೇಶಭಕ್ತಿಯ ಜೊತೆಗೆ ಅಸ್ಪೃಶ್ಯತಾ ನಿವಾರಣೆ ಮತ್ತು ಸಾಮಾಜಿಕ ಸುಧಾರಣೆಗೆ ಶ್ರಮಿಸಿದ ಹೋರಾಟಗಾರ. ಹರಿಜನ ಬಾಲಕರ ವಸತಿ ನಿಲಯದ ಕಾರ್ಯದಲ್ಲಿಯೂ ತೊಡಗಿಸಿಕೊಂಡಿದ್ದರು.



◢ ಮುದವೀಡು ಕೃಷ್ಣರಾಯ

ಪತ್ರಿಕೋದ್ಯಮದ ಮೂಲಕ ರಾಷ್ಟ್ರೀಯ ಚಿಂತನೆ ಹರಡಿದ ಬಾಗಲಕೋಟೆಯ ನಾಯಕ. ಕರ್ನಾಟಕ ವೃತ್ತಾಂತ ಸೇರಿದಂತೆ ಪತ್ರಿಕೆಗಳ ಮೂಲಕ ಬ್ರಿಟಿಷ್ ವಿರೋಧಿ ವಿಚಾರ ಮತ್ತು ಕರ್ನಾಟಕ ಏಕೀಕರಣದ ಆಶಯವನ್ನು ಜನರಿಗೆ ತಲುಪಿಸಿದರು.



◢ ಎಸ್.ಆರ್. ಕಂಠಿ


ಕೇರೂರಿನಲ್ಲಿ ಜನಿಸಿ ಮುಂದೆ ನಾಯಕರಾದವರು ರಾಷ್ಟ್ರೀಯ ಕಾರ್ಯಕರ್ತ. ಸ್ವಾತಂತ್ರ್ಯಾನಂತರ ಕರ್ನಾಟಕದ ಮುಖ್ಯಮಂತ್ರಿಯಾಗಿ ಮತ್ತು ಶಿಕ್ಷಣ ಸಚಿವರಾಗಿ ಸೇವೆ ಸಲ್ಲಿಸಿ, ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದರು.

◢ ಇತರೆ ಸ್ಥಳೀಯ ಹೋರಾಟಗಾರರು

ಸಂಘಟನಾ ಚತುರ ಸಖಾರಾಮ/ಸಖಾರಾಯಜ್ಜ ಸೇರಿದಂತೆ ಅನೇಕ ಸ್ಥಳೀಯ ಕಾರ್ಯಕರ್ತರು ಗ್ರಾಮ-ಪಟ್ಟಣಗಳಲ್ಲಿ ರಾಷ್ಟ್ರೀಯ ಚಿಂತನೆ ಹರಡಿದರು. ದೇವಾನ್ಸಾಹೇಬ್ ಜಾನ್ವೇಕರ್ ಮತ್ತು ಖಲೀಲುಲ್ಲಾ ಜಾನ್ವೇಕರ್ ಅವರಂತಹ ಅಲ್ಪಸಂಖ್ಯಾತ ಸಮುದಾಯದ ಹೋರಾಟಗಾರರೂ ರಾಷ್ಟ್ರೀಯ ಚಳವಳಿಯಲ್ಲಿ ಪಾಲ್ಗೊಂಡರು.

ಹೋರಾಟದ ಮುಖಗಳು ಹಲವಾರು, ಗುರಿ ಒಂದೇ

ಸ್ವಾತಂತ್ರ್ಯ ಸ್ವಾಭಿಮಾನ





ಪ್ರಮುಖ ಐತಿಹಾಸಿಕ ಹೋರಾಟಗಳು

ನಗರ ದಂಗೆ – ಮಲೆನಾಡಿಗೂ ತಲುಪಿದ ರೈತ ಪ್ರತಿರೋಧ

1830–31ರ ನಗರ ದಂಗೆಯಲ್ಲಿ ತರೀಕೆರೆಯ ಪಾಳೇಗಾರರಾದ ರಂಗಪ್ಪ ನಾಯಕ ಮತ್ತು ಹನುಮಪ್ಪ ನಾಯಕ ತಮ್ಮ ಪಡೆಗಳೊಂದಿಗೆ ಬ್ರಿಟಿಷರ ವಿರುದ್ಧ ಹೋರಾಡಿದರು. ಈ ದಂಗೆ ತರೀಕೆರೆಯಿಂದ ಕಡೂರು, ಚಿಕ್ಕಮಗಳೂರು ಸೇರಿದಂತೆ ಮಲೆನಾಡಿನ ಹಲವು ಭಾಗಗಳಿಗೆ ವಿಸ್ತರಿಸಿತು.

ಅರಣ್ಯ ಸತ್ಯಾಗ್ರಹ – ಕಾಡಿನ ಹಕ್ಕಿಗಾಗಿ ಹೋರಾಟ

ಕಠಿಣ ಅರಣ್ಯ ಕಾಯ್ದೆಗಳಿಂದ ತಲೆತಲಾಂತರದ ಜೀವನೋಪಾಯ ಕಳೆದುಕೊಂಡ ರೈತರು ಮತ್ತು ಗಿರಿಜನರು ಕೊಪ್ಪ, ಶೃಂಗೇರಿ ಹಾಗೂ ತರೀಕೆರೆಯಲ್ಲಿ ಪ್ರತಿರೋಧಿಸಿದರು. ಅರಣ್ಯ ಪ್ರವೇಶ, ಜಾನುವಾರು ಮೇಯಿಸುವಿಕೆ ಮತ್ತು ಕಾಡಿನ ಉತ್ಪನ್ನಗಳ ಮೇಲಿನ ನಿರ್ಬಂಧಗಳನ್ನು ಧಿಕ್ಕರಿಸಿ ಸತ್ಯಾಗ್ರಹ ನಡೆಸಿದರು.

ಕರನಿರಾಕರಣೆ – ಅನ್ಯಾಯದ ತೆರಿಗೆಗೆ ಸವಾಲು

ಭೂಕಂದಾಯ, ಹುಲ್ಲುಬನ್ನಿ ಮತ್ತು ಅರಣ್ಯ ಉತ್ಪನ್ನಗಳ ಮೇಲಿನ ತೆರಿಗೆಗಳ ವಿರುದ್ಧ ಜನರು ಒಗ್ಗೂಡಿದರು. ತರೀಕೆರೆ ರಾಮಸ್ವಾಮಿ, ಕಡೂರು ಕೃಷ್ಣಮೂರ್ತಿ ಮತ್ತು ಎಚ್.ಜಿ. ಗೋಪಾಲಗೌಡ ಮೊದಲಾದವರು ಹೋರಾಟಕ್ಕೆ ನಾಯಕತ್ವ ನೀಡಿದರು.

ಮಹಿಳೆಯರ ಧೈರ್ಯವೂ ಹೋರಾಟದ ಶಕ್ತಿ

ಜಪ್ತಿ ಕಾರ್ಯಗಳಿಗೆ ಬಂದ ಪೋಲೀಸರನ್ನು ಮಹಿಳೆಯರು ಧೈರ್ಯದಿಂದ ತಡೆದು, ಹೋರಾಟಗಾರರಿಗೆ ಆಹಾರ ಮತ್ತು ನೆರವು ಒದಗಿಸಿದರು.

ಗಾಂಧೀಜಿ ದೇವಾಲಯ – ಶಾಶ್ವತ ಸ್ಮರಣೆ

1948ರಲ್ಲಿ ಗಾಂಧೀಜಿಯವರ ಹತ್ಯೆಯ ನಂತರ ನಿಡಘಟ್ಟದ ಸ್ವಾತಂತ್ರ್ಯ ಹೋರಾಟಗಾರರು ಗ್ರಾಮಸ್ಥರ ಸಹಕಾರದಿಂದ ಗಾಂಧೀಜಿ ದೇವಾಲಯ ನಿರ್ಮಿಸಿದರು. ಇಂದಿಗೂ ರಾಷ್ಟ್ರೀಯ ಹಬ್ಬಗಳಲ್ಲಿ ಈ ಸ್ಥಳ ಸ್ಮರಣೆಯ ಕೇಂದ್ರವಾಗಿದೆ.

ಅವರ ಕನಸಿನ ಭಾರತ – ನಮ್ಮ ಹೊಣೆ

ನಗರ ದಂಗೆಯಿಂದ ಅರಣ್ಯ ಸತ್ಯಾಗ್ರಹದವರೆಗೆ, ಕಂದಾಯ ನಿರಾಕರಣೆಯಿಂದ ಕ್ವಿಟ್ ಇಂಡಿಯಾ ಚಳವಳಿಯವರೆಗೆ — ಚಿಕ್ಕಮಗಳೂರಿನ ಸ್ವಾತಂತ್ರ್ಯ ಹೋರಾಟವು ಜನರ ಹಕ್ಕು, ಆತ್ಮಗೌರವ ಮತ್ತು ಸಾಮಾಜಿಕ ನ್ಯಾಯದ ಹೋರಾಟವೂ ಆಗಿತ್ತು. ರೈತರು, ಕಾರ್ಮಿಕರು, ಆದಿವಾಸಿಗಳು, ಮಹಿಳೆಯರು ಮತ್ತು ಯುವಕರು ತಮ್ಮ ಭೇದಗಳನ್ನು ಮೀರಿ ಸ್ವಾತಂತ್ರ್ಯದ ಒಂದೇ ಗುರಿಗಾಗಿ ಒಂದಾದರು. ಅವರ ತ್ಯಾಗದಿಂದ ದೊರೆತ ಸ್ವಾತಂತ್ರ್ಯವನ್ನು ಕಾಪಾಡುವುದು ನಮ್ಮ ಜವಾಬ್ದಾರಿ. ಸಂವಿಧಾನದ ಸಮಾನತೆ, ನ್ಯಾಯ, ಸ್ವಾತಂತ್ರ್ಯ ಮತ್ತು ಸೌಹಾರ್ದತೆಯ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು, ಅವರು ಕನಸು ಕಂಡ ಭಾರತವನ್ನು ಕಟ್ಟೋಣ.

ಜೈ ಹಿಂದ್

ಜೈ ಕರ್ನಾಟಕ

ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ

ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,

ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com







ಚಿಕ್ಕಮಗಳೂರು

ಮಲೆನಾಡಿನ ಮಣ್ಣಿನಲ್ಲಿ ಹೊತ್ತಿದ ಸ್ವಾತಂತ್ರ್ಯದ ಕಿಚ್ಚು



ಸ್ವಾತಂತ್ರ್ಯ ಹೋರಾಟದಲ್ಲಿ ಜಿಲ್ಲೆಯ ಪಾತ್ರ

ಮಲೆನಾಡು ಮತ್ತು ಅರೆಮಲೆನಾಡಿನ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅರಣ್ಯ ಹಕ್ಕು ಮತ್ತು ಸ್ವಾತಂತ್ರ್ಯ ಹೋರಾಟಗಳು ಪರಸ್ಪರ ಬೆಸೆದುಕೊಂಡಿದ್ದವು. ರೈತರು, ಆದಿವಾಸಿಗಳು, ಕಾರ್ಮಿಕರು, ಮಹಿಳೆಯರು ಮತ್ತು ಯುವಕರು ಬ್ರಿಟಿಷ್ ಹಾಗೂ ಮೈಸೂರು ಸಂಸ್ಥಾನದ ಶೋಷಣಾ ನೀತಿಗಳ ವಿರುದ್ಧ ಸತ್ಯಾಗ್ರಹ ನಡೆಸಿದರು. 1927ರಲ್ಲಿ ಗಾಂಧೀಜಿಯವರ ಕಡೂರು ಮತ್ತು ಚಿಕ್ಕಮಗಳೂರು ಭೇಟಿಯು ಜಿಲ್ಲೆಯಲ್ಲಿ ರಾಷ್ಟ್ರೀಯ ಜಾಗೃತಿಗೆ ಹೊಸ ವೇಗ ನೀಡಿತು. ನಿಡಘಟ್ಟ ಸೇರಿದಂತೆ ಹಲವು ಪ್ರದೇಶಗಳಲ್ಲಿ ಯುವಕರು ಸ್ವಾತಂತ್ರ್ಯ ಚಳವಳಿಗೆ ಧುಮುಕಿ ಜೈಲು ಶಿಕ್ಷೆ ಅನುಭವಿಸಿದರು. 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ತರೀಕೆರೆಯ ವಿದ್ಯಾರ್ಥಿ ಪ್ರತಿಭಟನೆಗಳು ಗಮನಾರ್ಹವಾಗಿದ್ದವು. ಇದೇ ಸಂದರ್ಭದಲ್ಲಿ ಗಾಂಧಿವಾದಿ ಆಶ್ರಮಗಳು ಅಸ್ಪೃಶ್ಯತಾ ನಿವಾರಣೆ ಮತ್ತು ಸಾಮಾಜಿಕ ಜಾಗೃತಿಗೂ ಬಲ ನೀಡಿದವು.

ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರು

ಕಡೂರು ಕೃಷ್ಣಮೂರ್ತಿ

ಉಪ್ಪಿನ ಸತ್ಯಾಗ್ರಹ, ಕರನಿರಾಕರಣೆ, ಕ್ವಿಟ್ ಇಂಡಿಯಾ ಮತ್ತು ಮೈಸೂರು ಚಲೋ ಚಳವಳಿಗಳಲ್ಲಿ ಮುಂಚೂಣಿಯಲ್ಲಿದ್ದ ನಾಯಕ. ಖಾದಿ, ಮದ್ಯವರ್ಜನೆ ಮತ್ತು ಅಸ್ಪೃಶ್ಯತಾ ನಿರ್ಮೂಲನೆಗೆ ಶ್ರಮಿಸಿದರು.

ತರೀಕೆರೆ ರಾಮಸ್ವಾಮಿ

ಅರಣ್ಯ ಸತ್ಯಾಗ್ರಹ ಮತ್ತು ಕಂದಾಯ ವಿರೋಧಿ ಹೋರಾಟಗಳನ್ನು ಸಂಘಟಿಸಿದ ಧೀಮಂತ ನಾಯಕ. 1942ರಲ್ಲಿ ಭೂಗತರಾಗಿ ಕರಪತ್ರಗಳ ಮೂಲಕ ಚಳವಳಿಯನ್ನು ಮುಂದುವರಿಸಿದರು.


ಹೊಸಕೊಪ್ಪ ಕೃಷ್ಣರಾವ್

ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ರಾಜಕೀಯ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ ನಾಯಕ. ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದರು.

ಎಚ್. ಎಂ. ಚನ್ನಬಸಪ್ಪ

ಮಲೆನಾಡಿನ ಗಿರಿಜನರು ಮತ್ತು ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಡಿ, ಅರಣ್ಯ ಕಾಯ್ದೆಗಳ ವಿರುದ್ಧ ಜನರನ್ನು ಸಂಘಟಿಸಿದರು.

ಎಚ್. ಜಿ. ಗೋವಿಂದೇಗೌಡ – 'ಮಲೆನಾಡ ಗಾಂಧಿ'



'ಮಲೆನಾಡ ಗಾಂಧಿ' ಎಂದೇ ಪ್ರಸಿದ್ಧರಾದ ಎಚ್. ಜಿ. ಗೋವಿಂದೇಗೌಡರು ಚಿಕ್ಕಮಗಳೂರು ಜಿಲ್ಲೆಯ ಹಳ್ಳಿಯೊಂದರಲ್ಲಿ ಜನಿಸಿ, ಗಾಂಧೀಜಿಯವರ ಆದರ್ಶಗಳಿಂದ ಪ್ರೇರಿತರಾದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ೧೯೪೨ರ ಭಾರತ ಬಿಟ್ಟು ತೊಲಗಿ ಚಳವಳಿ ಹಾಗೂ ೧೯೪೭ರ ಮೈಸೂರು ಚಲೋ ಚಳವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸೆರೆವಾಸ ಅನುಭವಿಸಿದರು. ಸ್ವಾತಂತ್ರ್ಯಾನಂತರ ಕರ್ನಾಟಕ ವಿಧಾನಸಭೆಯ ಸದಸ್ಯರಾಗಿ ಹಾಗೂ ಶಿಕ್ಷಣ ಸಚಿವರಾಗಿ ಸೇವೆ ಸಲ್ಲಿಸಿದರು. ಗ್ರಾಮೀಣ ಶಿಕ್ಷಣ, ವಯಸ್ಕರ ಶಿಕ್ಷಣ, ಸಹಕಾರ ಚಳವಳಿ ಹಾಗೂ ಹಿಂದುಳಿದ ವರ್ಗಗಳ ಶೈಕ್ಷಣಿಕ ಪ್ರಗತಿಗೆ ವಿಶೇಷ ಒತ್ತು ನೀಡಿದರು. ಶಿಕ್ಷಣವನ್ನು ಗ್ರಾಮೀಣ ಜನರ ಬದುಕಿನ ಪರಿವರ್ತನೆಯ ಸಾಧನವನ್ನಾಗಿ ರೂಪಿಸುವಲ್ಲಿ ಅವರ ಕೊಡುಗೆ ಗಮನಾರ್ಹವಾಗಿತ್ತು. ಸ್ವಾತಂತ್ರ್ಯ ಹೋರಾಟದ ತ್ಯಾಗ ಮತ್ತು ಸಾರ್ವಜನಿಕ ಶಿಕ್ಷಣ ಸೇವೆಯನ್ನು ಒಟ್ಟುಗೂಡಿಸಿದ ಕಾರಣ, ಅವರು ಜನಮನದಲ್ಲಿ 'ಮಲೆನಾಡ ಗಾಂಧಿ'ಯಾಗಿ ಇಂದಿಗೂ ಸ್ಮರಿಸಲ್ಪಡುತ್ತಾರೆ.





ಪ್ರಮುಖ ಐತಿಹಾಸಿಕ ಸಂಗತಿಗಳು

1939ರ ಅರಣ್ಯ ಸತ್ಯಾಗ್ರಹ – ಕಾಡಿನ ಹಕ್ಕಿಗಾಗಿ ಕಹಳೆ

ಚಿತ್ರದುರ್ಗ ಜಿಲ್ಲೆಯ ತುರುವನೂರಿನಲ್ಲಿ 1939ರಲ್ಲಿ ಅರಣ್ಯ ಸತ್ಯಾಗ್ರಹಕ್ಕೆ ಚಾಲನೆ ದೊರೆಯಿತು. ರೈತರು, ದಲಿತರು ಮತ್ತು ನಾಯಕ/ಬೇಡ ಸಮುದಾಯದ ಜನರು ಬ್ರಿಟಿಷರ ಅರಣ್ಯ ನಿಯಮಗಳಿಗೆ ಸವಾಲು ಹಾಕಿ ತಮ್ಮ ಸಾಂಪ್ರದಾಯಿಕ ಹಕ್ಕುಗಳನ್ನು ಪ್ರತಿಪಾದಿಸಿದರು. ಕಾಡಿನ ಹಕ್ಕು ಮತ್ತು ಸ್ವರಾಜ್ಯದ ಹಕ್ಕು ಒಂದೇ ಹೋರಾಟದ ಎರಡು ಮುಖಗಳಾದವು.

1942ರ ದಾವಣಗೆರೆ ಗೋಲಿಬಾರ್ – ರಕ್ತದಲ್ಲಿ ಬರೆದ ಸ್ವಾತಂತ್ರ್ಯದ ಅಧ್ಯಾಯ

ಭಾರತ ಬಿಟ್ಟು ತೊಲಗಿ ಚಳವಳಿಯ ಸಂದರ್ಭದಲ್ಲಿ ದಾವಣಗೆರೆಯಲ್ಲಿ ಸಾವಿರಾರು ಜನರು ಪ್ರತಿಭಟನೆ ನಡೆಸಿದರು. ಸೆಪ್ಟೆಂಬರ್ 8ರಂದು ನಡೆದ ಬೃಹತ್ ಸಮಾವೇಶದ ಬಳಿಕ ಹೋರಾಟಗಾರರು ತಾಲೂಕು ಕಚೇರಿಯ ಖಜಾನೆಗೆ ಮುತ್ತಿಗೆ ಹಾಕಿದರು. ಪೊಲೀಸರು ಗುಂಡಿನ ದಾಳಿ ನಡೆಸಿದಾಗ ಹಳ್ಳೂರು ನಾಗಪ್ಪ 'Free India' ಧ್ವಜ ಹಿಡಿದು ಎದೆಗುಂದದೆ ನಿಂತರು. ಅವರು ಸೇರಿದಂತೆ ಅಕ್ಕಾಲೆ ವಿರೂಪಾಕ್ಷಪ್ಪ, ಹಮಾಲಿ ತಿಮ್ಮಣ್ಣ, ಹದಡಿ ನಿಂಗಪ್ಪ, ಬಿದರಕುಂದಿ ನಿಂಗಪ್ಪ ಮತ್ತು ಮಾಗಾನಹಳ್ಳಿ ಹನುಮಂತಪ್ಪ ಹುತಾತ್ಮರಾದರು. ಇಂದು ದಾವಣಗೆರೆ ಮಹಾನಗರ ಪಾಲಿಕೆ ಆವರಣದಲ್ಲಿರುವ ಹುತಾತ್ಮರ ಸ್ಮಾರಕವು ಆ ಬಲಿದಾನದ ನೆನಪನ್ನು ಜೀವಂತವಾಗಿರಿಸಿದೆ. ಆ ದಿನ ಗುಂಡುಗಳು ದೇಹಗಳನ್ನು ನಿಲ್ಲಿಸಿದವು; ಸ್ವಾತಂತ್ರ್ಯದ ಹೆಜ್ಜೆಯನ್ನು ಅಲ್ಲ.

ಅವರ ಕನಸಿನ ಭಾರತ ನಮ್ಮ ಹೊಣೆ

ಚಿತ್ರದುರ್ಗದ ಅರಣ್ಯ-ಧ್ವಜ ಸತ್ಯಾಗ್ರಹಗಳಿಂದ ದಾವಣಗೆರೆಯ ಕಾರ್ಮಿಕ-ರೈತರ ಪ್ರತಿರೋಧದವರೆಗೆ, ಈ ನೆಲದ ಹೋರಾಟವು ಸ್ವರಾಜ್ಯವೆಂದರೆ ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಸಾಮಾಜಿಕ ಸಮಾನತೆಯೂ ಹೌದು ಎಂಬುದನ್ನು ಸಾರಿತು. ರೈತರು, ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿಗಳು ಮತ್ತು ವಿವಿಧ ಸಮುದಾಯಗಳ ಜನರು ತಮ್ಮ ಭೇದಗಳನ್ನು ಮೀರಿ ಒಂದಾಗಿ ನಿಂತರು. ಅವರ ತ್ಯಾಗದಿಂದ ದೊರೆತ ಸ್ವಾತಂತ್ರ್ಯವೇ ನಮ್ಮ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಅಡಿಪಾಯ. ಅವರ ಹೋರಾಟವನ್ನು ನೆನಪಿಸಿಕೊಳ್ಳುವುದಷ್ಟೇ ಅಲ್ಲ — ಅವರು ಕನಸು ಕಂಡ ಸಮಾನತೆ, ನ್ಯಾಯ ಮತ್ತು ಸೌಹಾರ್ದತೆಯ ಭಾರತವನ್ನು ನಿರ್ಮಿಸುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ.


ಜೈ ಹಿಂದ್

ಜೈ ಕರ್ನಾಟಕ

ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ

ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,

ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com




ಚಿತ್ರದುರ್ಗ

ಸ್ವರಾಜ್ಯ, ಸಾಮಾಜಿಕ ಸಮಾನತೆ ಮತ್ತು ಐಕ್ಯತೆಯ ಹೆಜ್ಜೆಗುರುತು

ಸ್ವಾತಂತ್ರ್ಯ ಹೋರಾಟದಲ್ಲಿ ಜಿಲ್ಲೆಯ ಪಾತ್ರ

ಹಳೆಯ ಚಿತ್ರದುರ್ಗ ಜಿಲ್ಲೆಯಾದ್ಯಂತ (ಇಂದಿನ ಚಿತ್ರದುರ್ಗ–ದಾವಣಗೆರೆ) ಸ್ವಾತಂತ್ರ್ಯದ ಕಿಚ್ಚು 1857ಕ್ಕೂ ಮುನ್ನವೇ ಹೊತ್ತಿತ್ತು. 1849ರ ಬೇಡರ ದಂಗೆ ಬ್ರಿಟಿಷರ ಅಧಿಕಾರಕ್ಕೆ ಎದುರಾದ ಆರಂಭಿಕ ಸವಾಲುಗಳಲ್ಲಿ ಒಂದಾಗಿತ್ತು. 1939ರಲ್ಲಿ ತುರುವನೂರಿನಲ್ಲಿ ಅಖಿಲ ಮೈಸೂರು ರಾಜ್ಯದ ಮೊದಲ ಅರಣ್ಯ ಸತ್ಯಾಗ್ರಹಕ್ಕೆ ಚಾಲನೆ ದೊರೆಯಿತು. ರೈತರು, ದಲಿತರು ಮತ್ತು ಅರಣ್ಯಾಧಾರಿತ ಸಮುದಾಯಗಳು ಅರಣ್ಯ ಕಾಯ್ದೆ ಹಾಗೂ ತೆರಿಗೆಗಳ ವಿರುದ್ಧ ಧ್ವನಿ ಎತ್ತಿದರು. ‘ಕರ್ನಾಟಕದ ಮಾಂಚೆಸ್ಟರ್’ ಎಂದೇ ಪ್ರಸಿದ್ಧವಾಗಿದ್ದ ದಾವಣಗೆರೆಯ ಜವಳಿ ಕಾರ್ಮಿಕರು ಸ್ವದೇಶಿ, ಬಹಿಷ್ಕಾರ ಮತ್ತು ರಾಷ್ಟ್ರೀಯ ಚಳವಳಿಗೆ ತಮ್ಮ ಶಕ್ತಿಯನ್ನು ಧಾರೆ ಎರೆದರು. 1942ರ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ದಾವಣಗೆರೆ–ಹರಿಹರ ಭಾಗದಲ್ಲಿ ಜನಪ್ರತಿರೋಧ ತೀವ್ರಗೊಂಡಿತು. ಪೊಲೀಸ್ ಗುಂಡಿನ ದಾಳಿಯಲ್ಲಿ ಹಳ್ಳೂರು ನಾಗಪ್ಪ ಸೇರಿದಂತೆ ಆರು ಮಂದಿ ಹುತಾತ್ಮರಾದರು. ರೈತರು, ಕಾರ್ಮಿಕರು, ಮಹಿಳೆಯರು ಮತ್ತು ಯುವಕರ ಒಗ್ಗಟ್ಟಿನ ಹೋರಾಟ ಈ ನೆಲದ ಸ್ವಾತಂತ್ರ್ಯಗಾಥೆಯ ಹಿರಿಮೆ.



ಹೋರಾಟದ ಮುಂಚೂಣಿಯ ನಾಯಕರು



ಎಸ್. ನಿಜಲಿಂಗಪ್ಪ – ರಾಷ್ಟ್ರೀಯ ನಾಯಕ

ಗಾಂಧೀಜಿಯವರ ಪ್ರಭಾವದಿಂದ ವಕೀಲ ವೃತ್ತಿ ತೊರೆದು ಸ್ವಾತಂತ್ರ್ಯ ಚಳವಳಿಗೆ ಧುಮುಕಿದರು. 1939ರ ಅರಣ್ಯ ಸತ್ಯಾಗ್ರಹ ಮತ್ತು ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಸೆರೆವಾಸ ಅನುಭವಿಸಿದರು. ಮುಂದೆ ಏಕೀಕೃತ ಕರ್ನಾಟಕದ ಮೊದಲ ಮುಖ್ಯಮಂತ್ರಿಯಾಗಿ ರಾಜ್ಯ ನಿರ್ಮಾಣಕ್ಕೆ ಮಹತ್ವದ ಕೊಡುಗೆ ನೀಡಿದರು.



ಕೊಂಡಜ್ಜಿ ಬಸಪ್ಪ – ಶಿಸ್ತು ಮತ್ತು ಸ್ವಯಂಸೇವೆಯ ರೂಪಕ

1942ರ ಚಳವಳಿ ಮತ್ತು 1947ರ ಮೈಸೂರು ಚಲೋದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಯುವಕರ ಸಂಘಟನೆ, ಖಾದಿ, ಅಸ್ಪೃಶ್ಯತಾ ನಿವಾರಣೆ ಮತ್ತು ರೈತರ ಹಕ್ಕುಗಳಿಗಾಗಿ ದುಡಿದರು. ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಗೆ ದೃಢವಾದ ಅಡಿಪಾಯ ಹಾಕಿದರು.

ಸಾಹುಕಾರ್ ಚನ್ನಯ್ಯ
ಸಾಮಾಜಿಕ ಸಮಾನತೆಯ ಹೋರಾಟಗಾರ

ಸ್ವದೇಶಿ ಪ್ರಚಾರದ ಜೊತೆಗೆ ದಲಿತೋದ್ಧಾರ ಮತ್ತು ಶಿಕ್ಷಣಕ್ಕೆ ಒತ್ತು ನೀಡಿ, ರಾಷ್ಟ್ರೀಯ ಸ್ವಾತಂತ್ರ್ಯದ ಆಶಯವನ್ನು ಸಾಮಾಜಿಕ ನ್ಯಾಯದೊಂದಿಗೆ ಬೆಸೆದರು.

ಬಳ್ಳಾರಿ ಸಿದ್ಧಮ್ಮ – ಧೀರ ಮಹಿಳಾ ಹೋರಾಟಗಾರ್ತಿ

ಶಿವಪುರ ಧ್ವಜ ಸತ್ಯಾಗ್ರಹ, ಚಿತ್ರದುರ್ಗದ ಅರಣ್ಯ ಸತ್ಯಾಗ್ರಹ ಮತ್ತು ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಭಾಗವಹಿಸಿ ಸೆರೆವಾಸ ಅನುಭವಿಸಿದರು. ಮಹಿಳೆಯರನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರವಹಿಸಿದರು.

ಮುರುಗಯ್ಯ – ಕಾರ್ಮಿಕರ ಧ್ವನಿ


ದಾವಣಗೆರೆಯ ಜವಳಿ ಕಾರ್ಮಿಕರನ್ನು ಸಂಘಟಿಸಿ, ಸ್ವಾತಂತ್ರ್ಯ ಹೋರಾಟವನ್ನು ಶ್ರಮಿಕ ವರ್ಗದ ಹಕ್ಕುಗಳ ಹೋರಾಟದೊಂದಿಗೆ ಜೋಡಿಸಿದ ಪ್ರಮುಖ ನಾಯಕ.



ಅಬ್ಬಕ್ಕನ ಕತ್ತಿಯಿಂದ ಅಮರ ಸುಳ್ಯದ ಬಂಡಾಯದವರೆಗೆ

ರಾಣಿ ಅಬ್ಬಕ್ಕ – "ಅಭಯರಾಣಿ"

ಬ್ರಿಟಿಷರು ಭಾರತಕ್ಕೆ ಬರುವ ಹಲವು ಶತಮಾನಗಳ ಮುನ್ನವೇ ಉಳ್ಳಾಲದ ರಾಣಿ ಅಬ್ಬಕ್ಕದೇವಿ ಪೋರ್ಚುಗೀಸ್ ವಸಾಹತುಶಾಹಿಗೆ ಸವಾಲು ಹಾಕಿದ್ದರು. ತನ್ನ ನಾಡಿನ ಸಾರ್ವಭೌಮತ್ವಕ್ಕಾಗಿ ದಶಕಗಳ ಕಾಲ ಹೋರಾಡಿದ ಅಬ್ಬಕ್ಕ , ಮಾಪಿಳ್ಳೆ, ಮೊಗವೀರ, ಬಿಲ್ಲವ, ಜೈನ ಸೇರಿದಂತೆ ವಿವಿಧ ಸಮುದಾಯಗಳನ್ನು ಒಗ್ಗೂಡಿಸಿದರು. ಸಮುದ್ರದ ದೋಣಿಗಳಿಂದ ರಾತ್ರಿ ದಾಳಿಗಳವರೆಗೆ, ಅಬ್ಬಕ್ಕನ ರಣತಂತ್ರ ಪೋರ್ಚುಗೀಸರ ಬೃಹತ್ ನೌಕಾಪಡೆಗೆ ಸವಾಲಾಯಿತು.



1837 — ಅಮರ ಸುಳ್ಯದ ಬಂಡಾಯ

ಬ್ರಿಟಿಷರ ಅತಿಯಾದ ತೆರಿಗೆ ಮತ್ತು ಕಂದಾಯ ದಬ್ಬಾಳಿಕೆ ವಿರುದ್ಧ ಸುಳ್ಯ ಮತ್ತು ಕೊಡಗು ಭಾಗದಲ್ಲಿ ರೈತರು ಮತ್ತು ಸ್ಥಳೀಯ ನಾಯಕರು ಸಶಸ್ತ್ರವಾಗಿ ಎದ್ದರು. ಸ್ವಾಮಿ ಅಪರಂಪಾರ, ಕಲ್ಯಾಣಸ್ವಾಮಿ, ಸ್ಥಳೀಯ ವೀರರ ಸಂಘಟನೆ, ಈ ಹೋರಾಟದ ಕಿಡಿ ಸುಳ್ಯದಿಂದ ಪುತ್ತೂರು, ಬೆಳ್ಳಾರೆ ಮತ್ತು ಮಂಗಳೂರಿನವರೆಗೆ ಹರಡಿತು. ಕೆದಂಬಾಡಿ ರಾಮಯ್ಯ ಗೌಡ, ಲಕ್ಷ್ಮಪ್ಪ ಬಂಗರಸ, ಗುಡ್ಡೆಮನೆ ಅಪ್ಪಯ್ಯ ಗೌಡ ಸೇರಿದಂತೆ ಅನೇಕ ನಾಯಕರು ಬ್ರಿಟಿಷರ ಆಡಳಿತಕ್ಕೆ ಸವಾಲು ಹಾಕಿದರು. ಬಂಡಾಯಗಾರರು ಕೆಲವು ಪ್ರದೇಶಗಳನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡು, ಮಂಗಳೂರಿನ ಬಾವುಟಗುಡ್ಡೆಯಲ್ಲಿ ಬ್ರಿಟಿಷರ ಧ್ವಜವನ್ನು ಕೆಳಗಿಳಿಸಿ ತಮ್ಮ ಬಂಡಾಯದ ಧ್ವಜ ಹಾರಿಸಿದರು. ಕೊನೆಗೆ ಬ್ರಿಟಿಷರು ಬೃಹತ್ ಸೈನ್ಯದಿಂದ ಬಂಡಾಯವನ್ನು ಹತ್ತಿಕ್ಕಿದರು. ಅನೇಕ ಹೋರಾಟಗಾರರಿಗೆ ಮರಣದಂಡನೆ ಮತ್ತು ಗಡೀಪಾರು ಶಿಕ್ಷೆ ವಿಧಿಸಲಾಯಿತು.

ಸ್ವಾತಂತ್ರ್ಯದ ಸೌಹಾರ್ದ ಪರಂಪರೆ

ದಕ್ಷಿಣ ಕನ್ನಡದ ಇತಿಹಾಸವು ಅಬ್ಬಕ್ಕನ ಪ್ರತಿರೋಧದಿಂದ ಅಮರ ಸುಳ್ಯದ ಬಂಡಾಯದವರೆಗೆ, ಗಾಂಧೀಜಿಯವರ ಸತ್ಯಾಗ್ರಹದಿಂದ ಕರಾವಳಿಯ ಜನಪರ ಹೋರಾಟದವರೆಗೆ ಸಾಗಿದ ಶೌರ್ಯದ ಕಥೆ. ಈ ನೆಲದ ಹೋರಾಟದ ಮತ್ತೊಂದು ದೊಡ್ಡ ಶಕ್ತಿ — ಸೌಹಾರ್ದತೆ. ಜಾತಿ, ಧರ್ಮ ಮತ್ತು ಭಾಷೆಯ ಗಡಿಗಳನ್ನು ಮೀರಿ ವಿವಿಧ ಸಮುದಾಯಗಳು ಒಂದಾಗಿ ಹೋರಾಡಿದ ಪರಂಪರೆ ಕರಾವಳಿಯ ಇತಿಹಾಸದ ಹೆಮ್ಮೆ. ಇಂದು ನಾವು ಅನುಭವಿಸುವ ಸ್ವಾತಂತ್ರ್ಯ ಮತ್ತು ಹಕ್ಕುಗಳು ಅವರ ತ್ಯಾಗ, ಧೈರ್ಯ ಮತ್ತು ಒಗ್ಗಟ್ಟಿನ ಫಲ.


ಅವರ ಹೋರಾಟವನ್ನು ನೆನಪಿಸಿಕೊಳ್ಳೋಣ.
ಅವರ ಸೌಹಾರ್ದತೆಯನ್ನು ಉಳಿಸಿಕೊಳ್ಳೋಣ.
ಸಮಾನತೆ ಮತ್ತು ಸಹೋದರತ್ವದ ಭಾರತವನ್ನು ಕಟ್ಟೋಣ

ಜೈ ಹಿಂದ್ ಜೈ ಕರ್ನಾಟಕ

ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ

ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,

ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com



ದಕ್ಷಿಣ ಕನ್ನಡ

ಉಪ್ಪಿನಲೆಯಿಂದ ಸ್ವಾತಂತ್ರ್ಯದ ಜ್ವಾಲೆಯವರೆಗೆ

ಸ್ವಾತಂತ್ರ್ಯ ಚಳವಳಿಯಲ್ಲಿ ದಕ್ಷಿಣ ಕನ್ನಡ: ಉಪ್ಪಿನಲೆಯಿಂದ ಸ್ವಾತಂತ್ರ್ಯದ ಜ್ವಾಲೆಯವರೆಗೆ

ದಕ್ಷಿಣ ಕನ್ನಡದ ಸ್ವಾತಂತ್ರ್ಯ ಹೋರಾಟದ ಇತಿಹಾಸ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೂ ಮುನ್ನವೇ ಆರಂಭವಾಗಿತ್ತು.
'ಅಭಯರಾಣಿ'ಯೆಂದೇ ಖ್ಯಾತಳಾಗಿದ್ದ ರಾಣಿ ಅಬ್ಬಕ್ಕ, ಭಾರತದ ನೆಲ ಬ್ರಿಟೀಷರ ವಿರುದ್ಧ ಬಂಡಾಯ ಹೂಡುವುದಕ್ಕೆ ಎರಡು ಶತಮಾನಗಳ ಮೊದಲೇ ತುಳುನಾಡಿನ ಉಳ್ಳಾಲದಲ್ಲಿ ಪೋರ್ಚುಗೀಸರ ವಿರುದ್ಧ ಸಮರದ ಕಹಳೆ ಮೊಳಗಿಸಿದ್ದಳು.

1837 — ಅಮರ ಸುಳ್ಯದ ಬಂಡಾಯ

ಬ್ರಿಟಿಷರ ಅನ್ಯಾಯದ ತೆರಿಗೆ ಮತ್ತು ಕಂದಾಯ ನೀತಿಯ ವಿರುದ್ಧ 1837ರ ಅಮರ ಸುಳ್ಯ ಬಂಡಾಯದಲ್ಲಿ ರೈತರು ಮತ್ತು ಸ್ಥಳೀಯ ನಾಯಕರು ಸಶಸ್ತ್ರವಾಗಿ ಎದ್ದರು. ಕೆದಂಬಾಡಿ ರಾಮಯ್ಯ ಗೌಡ, ಕಲ್ಯಾಣಸ್ವಾಮಿ, ಲಕ್ಷ್ಮಪ್ಪ ಬಂಗರಸ, ಪುಟ್ಟಬಸಪ್ಪ ಸೇರಿದಂತೆ ಅನೇಕ ವೀರರು ಈ ಹೋರಾಟಕ್ಕೆ ಮುನ್ನಡೆ ನೀಡಿದರು.

ಗಾಂಧೀಜಿಯವರ ಹಾದಿಯಲ್ಲಿ ಕರಾವಳಿ

ಮುಂದಿನ ದಿನಗಳಲ್ಲಿ ಮಂಗಳೂರು, ಉಡುಪಿ ಮತ್ತು ಕುಂದಾಪುರ ಭಾಗಗಳು ಅಸಹಕಾರ, ವಿದೇಶಿ ಬಟ್ಟೆ ಬಹಿಷ್ಕಾರ, ಖಾದಿ ಮತ್ತು ಉಪ್ಪಿನ ಸತ್ಯಾಗ್ರಹಗಳ ಪ್ರಮುಖ ಕೇಂದ್ರಗಳಾದವು. 1930ರಲ್ಲಿ ಕುಂದಾಪುರ ಮತ್ತು ಉಡುಪಿಯ ಕಡಲತೀರಗಳಲ್ಲಿ ನಡೆದ ಉಪ್ಪಿನ ಸತ್ಯಾಗ್ರಹ ಬ್ರಿಟಿಷ್ ಆಡಳಿತಕ್ಕೆ ಸವಾಲೆಸೆದಿತ್ತು. ಸ್ವಾತಂತ್ರ್ಯ ಹೋರಾಟಗಾರರು ಉಪ್ಪಿನ ಕಾನೂನು ಉಲ್ಲಂಘಿಸಿ, ಬ್ರಿಟಿಷರ ವಿರುದ್ಧ ಸತ್ಯಾಗ್ರಹ ನಡೆಸಿದರು; ಇದರಲ್ಲಿ ಸ್ಥಳೀಯರು, ವಿಶೇಷವಾಗಿ ಮಹಿಳೆಯರೂ ಸಕ್ರಿಯವಾಗಿ ಪಾಲ್ಗೊಂಡರು..

ಮಹಿಳೆಯರ ಮುಂಚೂಣಿ ಹೆಜ್ಜೆ

ಕಮಲಾದೇವಿ ಚಟ್ಟೋಪಾಧ್ಯಾಯ, ಉಮಾಬಾಯಿ ಕುಂದಾಪುರ, ರಾಧಾಬಾಯಿ ಕುದ್ಮುಲ್, ಸುಶೀಲಮ್ಮ ಬೆಳ್ಳಾರೆ, ನಾಗಮ್ಮ ಪಾಟೀಲ ಮತ್ತು ಕೃಷ್ಣಾಬಾಯಿ ಪಣಜೀಕರ ಮೊದಲಾದ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಸತ್ಯಾಗ್ರಹ, ವಿದೇಶಿ ವಸ್ತುಗಳ ಬಹಿಷ್ಕಾರ ಮತ್ತು ಪಿಕೆಟಿಂಗ್‌ಗಳಲ್ಲಿ ಭಾಗವಹಿಸಿದರು. ಪತ್ರಿಕೋದ್ಯಮ, ಸಾಹಿತ್ಯ, ಮಹಿಳಾ ಜಾಗೃತಿ, ಸಾಮಾಜಿಕ ಸಮಾನತೆ ಇವೆಲ್ಲವೂ ಕರಾವಳಿಯಲ್ಲಿ ರಾಷ್ಟ್ರೀಯತೆಯ ಕಿಚ್ಚನ್ನು ಮತ್ತಷ್ಟು ಹರಡಿದವು.

ಕರಾವಳಿಯ ಸ್ವಾತಂತ್ರ್ಯದ ಮುಂಚೂಣಿಯವರು

ರಾಣಿ ಅಬ್ಬಕ್ಕದೇವಿ



"ಅಭಯರಾಣಿ" ವಿದೇಶಿ ಆಕ್ರಮಣದ ವಿರುದ್ಧದ ಧೀರ ಪ್ರತಿರೋಧದ ಪ್ರತೀಕ.
16ನೇ ಶತಮಾನದಲ್ಲೇ ಪೋರ್ಚುಗೀಸರ ವಿರುದ್ಧ ಉಳ್ಳಾಲದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ವಿವಿಧ ಸಮುದಾಯಗಳನ್ನು ಒಗ್ಗೂಡಿಸಿ ವಿದೇಶಿ ಶಕ್ತಿಗೆ ಸವಾಲೆಸೆದ ಅವರ ಧೈರ್ಯ ಕರಾವಳಿಯ ಶೌರ್ಯದ ಶಾಶ್ವತ ಸಂಕೇತ.

ಅಮರ ಸುಳ್ಯದ ವೀರರು

1837ರ ಜನಬಂಡಾಯದ ಧೀರರು.
ಕಲ್ಯಾಣಸ್ವಾಮಿ, ಕೆದಂಬಾಡಿ ರಾಮಯ್ಯ ಗೌಡ, ಲಕ್ಷ್ಮಪ್ಪ ಬಂಗರಸ, ಪುಟ್ಟಬಸಪ್ಪ, ಗುಡ್ಡೆಮನೆ ಅಪ್ಪಯ್ಯ ಗೌಡ ಸೇರಿದಂತೆ ಅನೇಕರು ಬ್ರಿಟಿಷರ ತೆರಿಗೆ ದಬ್ಬಾಳಿಕೆಯ ವಿರುದ್ಧ ಸಶಸ್ತ್ರ ಹೋರಾಟ ನಡೆಸಿದರು.



ಕೆದಂಬಾಡಿ ರಾಮಯ್ಯ ಗೌಡ

ಅಮರ ಸುಳ್ಯದ ಬಂಡಾಯದ ಧೀರ ಸೇನಾನಿ.
ಬೆಳ್ಳಾರೆಯಿಂದ ಮಂಗಳೂರಿನವರೆಗೆ ಹೋರಾಟಗಾರರನ್ನು ಸಂಘಟಿಸಿ ಬ್ರಿಟಿಷರ ಆಡಳಿತಕ್ಕೆ ಸವಾಲು ಹಾಕಿದರು. ಮಂಗಳೂರಿನಲ್ಲಿ ಬ್ರಿಟಿಷರ ಧ್ವಜವನ್ನು ಕೆಳಗಿಳಿಸಿ ಬಂಡಾಯದ ಧ್ವಜ ಹಾರಿಸಿದ ಹೋರಾಟದ ಪ್ರತೀಕವಾದರು.

ಕರ್ನಾಡ್ ಸದಾಶಿವ ರಾವ್



ತ್ಯಾಗದ ಮೂಲಕ ದೇಶಸೇವೆ ಮಾಡಿದ ನಾಯಕ.
ಅಸಹಕಾರ ಮತ್ತು ಉಪ್ಪಿನ ಸತ್ಯಾಗ್ರಹಗಳಲ್ಲಿ ಭಾಗವಹಿಸಿ, ಮಹಿಳೆಯರು ಮತ್ತು ಹಿಂದುಳಿದ ವರ್ಗಗಳ ಏಳಿಗೆಗೆ ಶ್ರಮಿಸಿದರು. ತಮ್ಮ ಆಸ್ತಿಪಾಸ್ತಿಯನ್ನೂ ದೇಶಸೇವೆ ಮತ್ತು ಬಡವರ ಕಲ್ಯಾಣಕ್ಕಾಗಿ ಅರ್ಪಿಸಿದರು.

ಕೆ. ಕೆ. ಶೆಟ್ಟಿ

ಕಾರ್ಮಿಕರು ಮತ್ತು ಬಡವರ ಹಕ್ಕುಗಳ ಧ್ವನಿ.
ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ಜೈಲುವಾಸ ಅನುಭವಿಸಿದರು. ನಂತರವೂ ಶ್ರಮಿಕರು ಮತ್ತು ಬಡವರ ಹಕ್ಕುಗಳಿಗಾಗಿ ಹೋರಾಡಿದರು.

ಕಮಲಾದೇವಿ ಚಟ್ಟೋಪಾಧ್ಯಾಯ




ಸ್ವಾತಂತ್ರ್ಯ ಹೋರಾಟದಿಂದ ಸಾಂಸ್ಕೃತಿಕ ಪುನರುಜ್ಜೀವನದವರೆಗೆ.
ಮಂಗಳೂರಿನಲ್ಲಿ ಜನಿಸಿದ ಕಮಲಾದೇವಿ ಉಪ್ಪಿನ ಸತ್ಯಾಗ್ರಹದಲ್ಲಿ ಮುಂಚೂಣಿಯಲ್ಲಿದ್ದು ಮಹಿಳೆಯರನ್ನು ಸಂಘಟಿಸಿದರು. ಸ್ವಾತಂತ್ರ್ಯಾ ನಂತರ ಭಾರತೀಯ ಕರಕುಶಲ, ಕೈಮಗ್ಗ ಮತ್ತು ರಂಗಭೂಮಿಯ ಪುನರುಜ್ಜೀವನಕ್ಕೆ ಮಹತ್ವದ ಕೊಡುಗೆ ನೀಡಿದರು.



ಬಿ. ಎಂ. ಇದಿನಬ್ಬ

ಸಾಹಿತ್ಯದ ಮೂಲಕ ಸೌಹಾರ್ದತೆಯ ಸಂದೇಶ ಸಾರಿದ ಹೋರಾಟಗಾರ.
ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಅವರು ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಮಾಜಿಕ ಸಾಮರಸ್ಯಕ್ಕಾಗಿ ದುಡಿದರು.

ಅಮ್ಮೆಂಬಳ ಬಾಳಪ್ಪ



ಸಮಾಜವಾದಿ ಚಿಂತನೆಯ ಹೋರಾಟಗಾರ.
ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿದರು. ನಂತರ ಕಾರ್ಮಿಕರು, ಬಡವರು ಮತ್ತು ಹಿಂದುಳಿದ ವರ್ಗಗಳ ಹಕ್ಕುಗಳಿಗಾಗಿ ಹೋರಾಡಿದರು.




ಗುಂಡಿನ ದಾಳಿ, ರಾಣಿಯ ನೆನಪು & ಸ್ವಾತಂತ್ರ್ಯದ ಸಂದೇಶ

1921ರ ಜುಲೈ 1 — ಧಾರವಾಡದ ಕರಾಳ ದಿನ

ಅಸಹಕಾರ ಮತ್ತು ಖಿಲಾಫತ್ ಚಳವಳಿಯ ಕರೆಗೆ ಓಗೊಟ್ಟು, ಧಾರವಾಡದಲ್ಲೂ ವಿದೇಶಿ ಬಟ್ಟೆ ಹಾಗೂ ಮದ್ಯದ ಅಂಗಡಿಗಳ ವಿರುದ್ಧ ಸತ್ಯಾಗ್ರಹ ತೀವ್ರಗೊಂಡಿತ್ತು.
1921ರ ಜುಲೈ 1ರಂದು ಜಕಣಿ ಬಾವಿ (ಇಂದಿನ ಹುತಾತ್ಮ ವೃತ್ತ)ದ ಬಳಿ ಮುದವೀಡು ಕೃಷ್ಣರಾವ್ ಮತ್ತು ಅಬ್ದುಲ್ ಮಜೀದ್ ಖಾನ್ ನೇತೃತ್ವದಲ್ಲಿ ನೂರಾರು ಸತ್ಯಾಗ್ರಹಿಗಳು ಶಾಂತಿಯುತ ಧರಣಿ ನಡೆಸುತ್ತಿದ್ದರು.
ಬ್ರಿಟಿಷ್ ಆಡಳಿತದ ಆದೇಶದ ಮೇರೆಗೆ ನಡೆದ ಗುಂಡಿನ ದಾಳಿಯಲ್ಲಿ ಮಲ್ಲಿಕ್ ಸಾಬ್, ಗೌಸ್ ಸಾಬ್ ಮತ್ತು ಅಬ್ದುಲ್ ಗಫಾರ್ ಚೌಕಟಾಯಿ ಹುತಾತ್ಮರಾದರು. ಅನೇಕರು ಗಾಯಗೊಂಡರು. 29 ಪ್ರಮುಖ ನಾಯಕರನ್ನು ಬಂಧಿಸಿ ಕಠಿಣ ಶಿಕ್ಷೆಗೆ ಗುರಿಪಡಿಸಲಾಯಿತು.

ಒಂದು ಗುಂಡಿನ ದಾಳಿ... ಸಾವಿರಾರು ಹೃದಯಗಳಲ್ಲಿ ಸ್ವಾತಂತ್ರ್ಯದ ಕಿಡಿ.

ಈ ಘಟನೆ ಕರ್ನಾಟಕದಾದ್ಯಂತ ಆಕ್ರೋಶ ಮೂಡಿಸಿತು. ಮಹಾತ್ಮ ಗಾಂಧೀಜಿಯವರ Young India ಪತ್ರಿಕೆಯಲ್ಲೂ ಧಾರವಾಡದ ಸತ್ಯಾಗ್ರಹಿಗಳ ಬಲಿದಾನವನ್ನು ಪ್ರಶಂಸಿಸಲಾಯಿತು.







ರಾಣಿ ಚೆನ್ನಮ್ಮನ ನೆನಪು — "ದಿ ಕ್ವೀನ್ಸ್ ರೂಮ್"

1824ರ ಕಿತ್ತೂರು ಹೋರಾಟದ ನಂತರ, ಬ್ರಿಟಿಷರಿಂದ ಬಂಧಿಸಲ್ಪಟ್ಟ ರಾಣಿ ಚೆನ್ನಮ್ಮರನ್ನು ಧಾರವಾಡದ ಕಲೆಕ್ಟರ್ ಬಂಗಲೆಯ ಒಂದು ಸಣ್ಣ ಕೊಠಡಿಯಲ್ಲಿ ಕೆಲಕಾಲ ಗೃಹಬಂಧನದಲ್ಲಿರಿಸಲಾಗಿತ್ತು.
ಇಂದು ಜಿಲ್ಲಾಧಿಕಾರಿಗಳ ನಿವಾಸದಲ್ಲಿರುವ ಆ ಕೊಠಡಿ, ಎರಡು ಶತಮಾನಗಳ ಹಿಂದಿನ ಇತಿಹಾಸದ ಮೌನ ಸಾಕ್ಷಿಯಾಗಿದೆ.
ರಾಣಿ ಚೆನ್ನಮ್ಮನ ಭಾವಚಿತ್ರವಿರುವ ಈ ಕೊಠಡಿಗೆ ಪ್ರತಿವರ್ಷ ಆಗಸ್ಟ್ 15 ಮತ್ತು ಅಕ್ಟೋಬರ್ 26ರಂದು ಗೌರವ ಸಲ್ಲಿಸುವ ಪರಂಪರೆ ಮುಂದುವರಿದಿದೆ.
ಒಂದು ಕೊಠಡಿ... ಒಬ್ಬರು ರಾಣಿ... ಒಂದು ಅಮರ ಹೋರಾಟ.

ನಮ್ಮ ಸ್ವಾತಂತ್ರ್ಯ — ಅವರ ತ್ಯಾಗದ ಫಲ

ಸ್ವಾತಂತ್ರ್ಯವೆಂದರೆ ಕೇವಲ ಆಗಸ್ಟ್ 15ರ ಸಂಭ್ರಮವಲ್ಲ.
ಅದು ಮುಂಡರಗಿ ಭೀಮರಾಯರ ಶೌರ್ಯ, ಮೈಲಾರ ಮಹಾದೇವಪ್ಪರ ತ್ಯಾಗ, ಸಿದ್ಧಮ್ಮ ಮೈಲಾರರ ಧೈರ್ಯ ಮತ್ತು ಸಾವಿರಾರು ಹೆಸರಿಲ್ಲದ ಹೋರಾಟಗಾರರ ಕನಸು. ಅವರು ಜಾತಿ, ಧರ್ಮ, ಭಾಷೆಯ ಭೇದ ಮರೆತು "ನಾವು ಭಾರತೀಯರು" ಎಂಬ ಒಂದೇ ಭಾವನೆಯೊಂದಿಗೆ ಹೋರಾಡಿದರು. ಇಂದು ನಾವು ಅನುಭವಿಸುವ ಸ್ವಾತಂತ್ರ್ಯ, ಸಮಾನತೆ ಮತ್ತು ಪ್ರಜಾಪ್ರಭುತ್ವ ಅವರ ತ್ಯಾಗದ ಮೇಲೆ ನಿರ್ಮಿಸಿದ ಭಾರತದ ಫಲ. ಅವರ ಹೋರಾಟವನ್ನು ನೆನಪಿಸಿಕೊಳ್ಳೋಣ. ಅವರ ಮೌಲ್ಯಗಳನ್ನು ಬದುಕೋಣ.


ಸಮಾನತೆ ಮತ್ತು ಸೌಹಾರ್ದತೆಯ ಭಾರತವನ್ನು ಕಟ್ಟೋಣ.

ಜೈ ಹಿಂದ್! ಜೈ ಕರ್ನಾಟಕ!

ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ

ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,

ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com




ಧಾರವಾಡ ಜಿಲ್ಲೆ

ಸ್ವಾತಂತ್ರ್ಯ ಹೋರಾಟದ ನರಮಂಡಲ

ಸ್ವಾತಂತ್ರ್ಯ ಹೋರಾಟದಲ್ಲಿ ಜಿಲ್ಲೆಯ ಪಾತ್ರ:

ಧಾರವಾಡ ಜಿಲ್ಲೆ ಕರ್ನಾಟಕದ ಸ್ವಾತಂತ್ರ್ಯ ಹೋರಾಟಕ್ಕೆ ಚಿಂತನೆ, ಚಳವಳಿ ಮತ್ತು ಧೈರ್ಯದ ಕೇಂದ್ರವಾಗಿತ್ತು. 1920ರ ಅಸಹಕಾರ ಚಳವಳಿಯಲ್ಲಿ ಧಾರವಾಡದಲ್ಲಿ ನಡೆದ ಬ್ರಿಟಿಷರ ಗುಂಡಿನ ದಾಳಿಯಲ್ಲಿ ಮೂವರು ಸತ್ಯಾಗ್ರಹಿಗಳು ಹುತಾತ್ಮರಾದರು. ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಸ್ಥಳೀಯ ಪತ್ರಿಕೆಗಳು ಜನರಲ್ಲಿ ರಾಷ್ಟ್ರೀಯ ಪ್ರಜ್ಞೆ ಮೂಡಿಸಿ, ದಾಸ್ಯ ಮನೋಭಾವದ ವಿರುದ್ಧ ಹೋರಾಟದ ಕಿಡಿ ಹಚ್ಚಿದವು.
1857ರಲ್ಲೇ ನರಗುಂದದ ಬಾಬಾಸಾಹೇಬ (ಭಾಸ್ಕರರಾವ್ ಭಾವೆ) ಬ್ರಿಟಿಷರ ವಿರುದ್ಧ ಶಸ್ತ್ರ ಹಿಡಿದು ಹೋರಾಡಿ, ಸ್ವಾತಂತ್ರ್ಯದ ಕಿಡಿಗೆ ಮುನ್ನುಡಿ ಬರೆದಿದ್ದರು. ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಧಾರವಾಡದ ವಿದ್ಯಾರ್ಥಿಗಳು, ಹುಬ್ಬಳ್ಳಿಯ ನೇಕಾರರು ಮತ್ತು ಕಾರ್ಮಿಕರು ಬ್ರಿಟಿಷರ ವಿರುದ್ಧ ಧೈರ್ಯಶಾಲಿ ಪ್ರತಿಭಟನೆ ನಡೆಸಿದರು. ಇಂದಿನ ಹಾವೇರಿ ಮತ್ತು ಗದಗ ಜಿಲ್ಲೆಗಳ ಪ್ರದೇಶಗಳಲ್ಲೂ ಹೋರಾಟದ ಜ್ವಾಲೆ ತೀವ್ರವಾಗಿತ್ತು. ಬ್ಯಾಡಗಿ ರೈಲ್ವೇ ನಿಲ್ದಾಣದ ಧ್ವಂಸ, ಕಂದಾಯ ಕಚೇರಿಗಳ ಮೇಲಿನ ದಾಳಿಗಳು ಹಾಗೂ ಮುಂಡರಗಿ ಭೀಮರಾಯರ 1857ರ ಸಶಸ್ತ್ರ ದಂಗೆ ಈ ನೆಲದ ಹೋರಾಟದ ಶೌರ್ಯಕ್ಕೆ ಸಾಕ್ಷಿ.
ನೇಕಾರರು, ರೈತರು, ವಿದ್ಯಾರ್ಥಿಗಳು, ವ್ಯಾಪಾರಿಗಳು, ಪತ್ರಕರ್ತರು—ಎಲ್ಲರೂ ಒಂದಾಗಿ ನಿಂತಾಗ ಧಾರವಾಡದ ನೆಲ ಸ್ವಾತಂತ್ರ್ಯದ ಹೋರಾಟದ ಶಕ್ತಿಕೇಂದ್ರವಾಯಿತು.

ಪ್ರಮುಖ ಹೋರಾಟಗಾರರು:



ಮುಂಡರಗಿ ಭೀಮರಾಯ

1857ರ ಬಂಡಾಯದ ವೀರ.
ಕೊಪ್ಪಳ ಕೋಟೆಯನ್ನು ವಶಪಡಿಸಿಕೊಂಡು ಬ್ರಿಟಿಷರ ವಿರುದ್ಧ ಸಶಸ್ತ್ರ ಹೋರಾಟ ನಡೆಸಿದ ಭೀಮರಾಯರು, ಯುದ್ಧಭೂಮಿಯಲ್ಲೇ ವೀರಮರಣ ಅಪ್ಪಿದರು. ಅವರ ಸಾಹಸ ಉತ್ತರ ಕರ್ನಾಟಕದ ಜನರಲ್ಲಿ ಸ್ವಾತಂತ್ರ್ಯದ ಕಿಡಿ ಹೊತ್ತಿಸಿತು.



ಆಲೂರು ವೆಂಕಟರಾವ್

"ಕರ್ನಾಟಕ ಕುಲಪುರೋಹಿತ" — ಕನ್ನಡ ಏಕೀಕರಣದ ಹರಿಕಾರ.
ಸ್ವದೇಶಿ ಚಳವಳಿಯ ಸಂದರ್ಭದಲ್ಲಿ ಜಯಕರ್ನಾಟಕ ಪತ್ರಿಕೆಯ ಮೂಲಕ ರಾಷ್ಟ್ರೀಯ ಜಾಗೃತಿ ಮೂಡಿಸಿದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಮೂಲಕ ಕನ್ನಡಿಗರನ್ನು ಒಗ್ಗೂಡಿಸುವ ಮಹತ್ವದ ಕಾರ್ಯಕ್ಕೆ ಮುನ್ನಡೆ ನೀಡಿದರು.



ಸಿದ್ದಪ್ಪ ಕಂಬಳಿ

ಶಿಕ್ಷಣ ಮತ್ತು ಸಾಮಾಜಿಕ ನ್ಯಾಯದ ಹೋರಾಟಗಾರ.
ಶಿಕ್ಷಣ ಸಚಿವರಾಗಿ ಹಿಂದುಳಿದ ವರ್ಗಗಳಿಗೆ ಉಚಿತ ಶಿಕ್ಷಣದ ಅವಕಾಶ ಕಲ್ಪಿಸಿದರು. ಸ್ವದೇಶಿ ಹೋರಾಟಗಾರರಿಗೆ ಬೆಂಬಲ ನೀಡುವುದರ ಜೊತೆಗೆ ಶೋಷಿತ ಸಮುದಾಯಗಳ ಹಕ್ಕುಗಳಿಗಾಗಿ ಧ್ವನಿಯೆತ್ತಿದ್ದರು.

ಕೃಷ್ಣರಾವ್ ಮುದ್ವೇದಕರ್

ಪತ್ರಿಕೆಯನ್ನು ಹೋರಾಟದ ಅಸ್ತ್ರವನ್ನಾಗಿಸಿದ ನಾಯಕ.
1921ರ ಧಾರವಾಡ ಸತ್ಯಾಗ್ರಹಗಳಲ್ಲಿ ಮುಂಚೂಣಿಯಲ್ಲಿದ್ದರು. ಧನಂಜಯ ಪತ್ರಿಕೆಯ ಮೂಲಕ ಬ್ರಿಟಿಷರ ದಬ್ಬಾಳಿಕೆಯನ್ನು ಖಂಡಿಸಿ, ಜೈಲು ಶಿಕ್ಷೆಯನ್ನೂ ಎದುರಿಸಿದರು.



ಮೈಲಾರ ಮಹಾದೇವಪ್ಪ

ಗಾಂಧೀಜಿಯವರೊಂದಿಗೆ ದಂಡಿ ಯಾತ್ರೆಯಲ್ಲಿ ಹೆಜ್ಜೆ ಹಾಕಿದ ಕನ್ನಡಿಗ.
ಹೊಸರಿತ್ತಿ ಸೇವಾ ಆಶ್ರಮದ ಮೂಲಕ ಖಾದಿ ಮತ್ತು ಗ್ರಾಮ ಸ್ವರಾಜ್ಯವನ್ನು ಪ್ರಚಾರ ಮಾಡಿದರು. 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ರಹಸ್ಯ ಪಡೆ ಸಂಘಟಿಸಿ ಹೋರಾಡಿ, 1943ರಲ್ಲಿ ಬ್ರಿಟಿಷರ ಗುಂಡಿಗೆ ಎದೆಕೊಟ್ಟು ಹುತಾತ್ಮರಾದರು.



ಸಿದ್ಧಮ್ಮ ಮೈಲಾರ

ಸ್ವಾತಂತ್ರ್ಯ ಹೋರಾಟದ ಧೀರ ಮಹಿಳಾ ಶಕ್ತಿ. ಮೈಲಾರ ಮಹದೇವರ ಪತ್ನಿ.
ಸಬರಮತಿ ಆಶ್ರಮದಲ್ಲಿ ತರಬೇತಿ ಪಡೆದು, ಮೈಲಾರ ಮಹಾದೇವಪ್ಪರೊಂದಿಗೆ ಹೊಸರಿತ್ತಿ ಆಶ್ರಮದ ಕಾರ್ಯದಲ್ಲಿ ತೊಡಗಿದರು. ಪತಿಯ ಬಲಿದಾನದ ನಂತರವೂ ಮಹಿಳೆಯರನ್ನು ಸಂಘಟಿಸಿ ಚಳವಳಿಯನ್ನು ಮುಂದುವರಿಸಿದರು.

ಗಾಢಗೂಳಿ ಮಲ್ಲಯ್ಯ

ಸ್ವಾತಂತ್ರ್ಯ ಹೋರಾಟದ ಜೊತೆಗೆ ಸಾಮಾಜಿಕ ಸಮಾನತೆಯ ಹೋರಾಟಗಾರ.
ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯದ ವಿರುದ್ಧ ಗ್ರಾಮೀಣ ಪ್ರದೇಶಗಳಲ್ಲಿ ಜಾಗೃತಿ ಮೂಡಿಸಿದರು. ಕ್ವಿಟ್ ಇಂಡಿಯಾ ಚಳವಳಿಯಲ್ಲೂ ಸಕ್ರಿಯವಾಗಿ ಪಾಲ್ಗೊಂಡು ಬ್ರಿಟಿಷರ ದೌರ್ಜನ್ಯ ಹಾಗೂ ಜೈಲು ಶಿಕ್ಷೆ ಎದುರಿಸಿದರು.



ಹುಯಿಲಗೋಳ ನಾರಾಯಣರಾವ್

"ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" — ನಾಡು ಮತ್ತು ರಾಷ್ಟ್ರಭಕ್ತಿಯ ಕವಿ.
1924ರ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿಯವರ ಸಮ್ಮುಖದಲ್ಲಿ ಈ ಗೀತೆಯನ್ನು ಹಾಡಿದರು. ಸಾಹಿತ್ಯ, ನಾಟಕ ಮತ್ತು ಸಂಗೀತದ ಮೂಲಕ ಜನರಲ್ಲಿ ದೇಶಭಕ್ತಿ ಹಾಗೂ ಕನ್ನಡದ ಅಭಿಮಾನವನ್ನು ಬೆಳೆಸಿದರು.

ಅಂದಾನಪ್ಪ ದೊಡ್ಡಮೇಟಿ

ರೈತರ ಕರ ನಿರಾಕರಣೆ ಹೋರಾಟದ ನಾಯಕ.
ಗದಗ–ಜಕಲಿ ಭಾಗದಲ್ಲಿ ಬ್ರಿಟಿಷರ ಅತಿಯಾದ ಕಂದಾಯದ ವಿರುದ್ಧ ರೈತರನ್ನು ಸಂಘಟಿಸಿದರು. ಶಾಸನಸಭೆಯಲ್ಲೂ ಕನ್ನಡ ಮತ್ತು ರೈತರ ಹಕ್ಕುಗಳ ಪರವಾಗಿ ಧ್ವನಿಯೆತ್ತಿದ್ದರು.



ಸರೋಜಿನಿ ಮಹಿಷಿ

ಸ್ವಾತಂತ್ರ್ಯ ಹೋರಾಟದ ಧೀರ ಮಹಿಳಾ ನಾಯಕಿ.
ವಿದ್ಯಾರ್ಥಿ ದೆಸೆಯಲ್ಲೇ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ರಹಸ್ಯವಾಗಿ ಕರಪತ್ರಗಳನ್ನು ಹಂಚಿದರು. ಸ್ವಾತಂತ್ರ್ಯಾನಂತರವೂ ಮಹಿಳೆಯರು ಮತ್ತು ಕನ್ನಡಿಗರ ಹಕ್ಕುಗಳಿಗಾಗಿ ತಮ್ಮ ಧ್ವನಿಯನ್ನು ಮುಂದುವರಿಸಿದರು.

ಇವರ ಹೋರಾಟವೇ ನಮ್ಮ ಸ್ವಾತಂತ್ರ್ಯದ ಶಕ್ತಿ.

ಧೈರ್ಯ • ತ್ಯಾಗ • ದೇಶಭಕ್ತಿ • ಸಮಾನತೆ



ಗಾಂಧೀಜಿಯವರ ಹಾಸನ ಪ್ರವಾಸ ರಾಷ್ಟ್ರೀಯ ಜಾಗೃತಿಗೆ ಹೊಸ ವೇಗ

1927ರ ಆಗಸ್ಟ್‌ನಲ್ಲಿ ಮಹಾತ್ಮ ಗಾಂಧೀಜಿಯವರು ಹಾಸನ ಜಿಲ್ಲೆಗೆ ಭೇಟಿ ನೀಡಿ ಅರಸೀಕೆರೆ, ಹಾಸನ, ಹೊಳೆನರಸೀಪುರ, ಬೇಲೂರು ಮತ್ತು ಹಳೇಬೀಡುಗಳಲ್ಲಿ ಜನರನ್ನುದ್ದೇಶಿಸಿ ಮಾತನಾಡಿದರು. ಆಗಸ್ಟ್ 3ರಂದು ಹಾಸನ ಟೌನ್‌ಹಾಲ್‌ನಲ್ಲಿ ಮತ್ತು ಆಗಸ್ಟ್ 20ರಂದು ಬೇಲೂರಿನಲ್ಲಿ ನಡೆದ ಸಭೆಗಳು ಖಾದಿ, ಅಸಹಕಾರ, ಅಸ್ಪೃಶ್ಯತೆ ನಿವಾರಣೆ ಮತ್ತು ರಾಷ್ಟ್ರೀಯ ಏಕತೆಯ ಸಂದೇಶವನ್ನು ಜನರಿಗೆ ತಲುಪಿಸಿದವು.

> “
> **ಸ್ವಾತಂತ್ರ್ಯದ ಹೋರಾಟದ ಜೊತೆಗೆ**
> **ಉತ್ತಮ ಸಮಾಜದ ನಿರ್ಮಾಣವೂ**
> **ಇಲ್ಲಿ ಸಮಾನವಾಗಿ ನಡೆದಿತ್ತು.**



ಶ್ರವಣಬೆಳಗೊಳದ ಗೋಲಿಬಾರ್ 1942ರ ರಕ್ತಸಾಕ್ಷಿ

ಭಾರತ ಬಿಟ್ಟು ತೊಲಗಿ ಚಳವಳಿಯ ಸಂದರ್ಭದಲ್ಲಿ 6 ಅಕ್ಟೋಬರ್ 1942ರಂದು ಶ್ರವಣಬೆಳಗೊಳದಲ್ಲಿ ಪ್ರತಿಭಟನಾಕಾರರು ಮತ್ತು ಪೊಲೀಸರ ನಡುವೆ ಘರ್ಷಣೆ ನಡೆಯಿತು. ಪೊಲೀಸರು 118 ಸುತ್ತು ಗುಂಡು ಹಾರಿಸಿದರು.

ಈ ಘಟನೆಯಲ್ಲಿ ದ್ಯಾವಯ್ಯ, ಶಿವನಂಜೇಗೌಡ, ವೆಂಕಟೇಗೌಡ, ನಂಜೇಗೌಡ, ಬೋರಣ್ಣ ಮತ್ತು ಮುದ್ದೇಗೌಡರು ಹುತಾತ್ಮರಾದರು. ಮತ್ತೊಬ್ಬ ಗಾಯಾಳು ಅಕ್ಟೋಬರ್ 13ರಂದು ನಿಧನರಾದರು.

ಇತಿಹಾಸದ ಬೆಳಕಿನಲ್ಲಿ ಭವಿಷ್ಯದ ಭಾರತ!

ಹಾಸನದ ಸ್ವಾತಂತ್ರ್ಯ ಹೋರಾಟವು ಕೇವಲ ಬ್ರಿಟಿಷರ ವಿರುದ್ಧದ ಹೋರಾಟವಾಗಿರಲಿಲ್ಲ. ಖಾದಿ, ಮದ್ಯವರ್ಜನೆ, ಅಸ್ಪೃಶ್ಯತೆ ನಿವಾರಣೆ, ಶಿಕ್ಷಣ ಮತ್ತು ಸಾಮಾಜಿಕ ಸಮಾನತೆಗಳ ಮೂಲಕ ಉತ್ತಮ ಸಮಾಜದ ಕನಸನ್ನೂ ಅದು ಕಟ್ಟಿತು. ಗಾಂಧೀಜಿಯವರ ಭೇಟಿಯಿಂದ ಪ್ರೇರಣೆ ಪಡೆದ ಹಾಸನದ ಜನರು ಗ್ರಾಮೀಣ ಪ್ರದೇಶಗಳವರೆಗೂ ರಾಷ್ಟ್ರೀಯತೆಯ ಕಿಚ್ಚು ಹಚ್ಚಿದರು. ಪುರುಷರು, ಮಹಿಳೆಯರು ಮತ್ತು ವಿವಿಧ ಸಮುದಾಯಗಳ ತ್ಯಾಗದಿಂದ ಈ ಹೋರಾಟ ಬಲಗೊಂಡಿತು.

ಅವರ ತ್ಯಾಗವನ್ನು ನೆನಪಿಸುವುದಷ್ಟೇ ಅಲ್ಲ
ಅವರು ಕನಸು ಕಂಡ ಸಮಾನತೆ, ಸೌಹಾರ್ದತೆ ಮತ್ತು
ನ್ಯಾಯದ ಭಾರತವನ್ನು ಕಟ್ಟುವುದು ನಮ್ಮ ಹೊಣೆ.



ಜೈ ಹಿಂದ್! ಜೈ ಕರ್ನಾಟಕ!

ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ

ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,

ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com

ಹಾಸನ

ಗಾಂಧಿವಾದಿ ಚಳವಳಿಯ ಗಟ್ಟಿನೆಲೆ





ಸ್ವಾತಂತ್ರ್ಯ ಹೋರಾಟದಲ್ಲಿ ಹಾಸನ

ಮಲೆನಾಡು-ಬಯಲುಸೀಮೆಯ ಸಂಗಮವಾದ ಹಾಸನ, ಗಾಂಧಿವಾದಿ ಚಿಂತನೆ, ಸಾಮಾಜಿಕ ಸುಧಾರಣೆ ಮತ್ತು ಜನಪರ ಹೋರಾಟಗಳ ಪ್ರಮುಖ ಕೇಂದ್ರವಾಗಿತ್ತು. ಅಸಹಕಾರ, ಅರಣ್ಯ ಸತ್ಯಾಗ್ರಹ, ಕರನಿರಾಕರಣೆ, ಮದ್ಯವರ್ಜನೆ, ಪಿಕೆಟಿಂಗ್ ಹಾಗೂ 1942ರ ಭಾರತ ಬಿಟ್ಟು ತೊಲಗಿ ಚಳವಳಿಗಳಲ್ಲಿ ಜಿಲ್ಲೆಯ ಜನರು ಸಕ್ರಿಯವಾಗಿ ಪಾಲ್ಗೊಂಡರು.

ಗೊರೂರು, ಹಾಸನ, ಅರಸೀಕೆರೆ, ಚನ್ನರಾಯಪಟ್ಟಣ, ಶ್ರವಣಬೆಳಗೊಳ ಮತ್ತು ಹೊಳೆನರಸೀಪುರ ರಾಷ್ಟ್ರೀಯ ಚಳವಳಿಯ ಪ್ರಮುಖ ಕೇಂದ್ರಗಳಾದವು. ವಿಶೇಷವಾಗಿ ಗೊರೂರು, ಖಾದಿ, ಗ್ರಾಮೋದ್ಯೋಗ, ಅಸ್ಪೃಶ್ಯತೆ ನಿವಾರಣೆ ಮತ್ತು ಸಾಮಾಜಿಕ ಸಮಾನತೆಯ ಹೋರಾಟಗಳೊಂದಿಗೆ ಸ್ವಾತಂತ್ರ್ಯ ಚಳವಳಿಯನ್ನು ಜನಜೀವನಕ್ಕೆ ಹತ್ತಿರ ತಂದಿತು.

“ ಸ್ವಾತಂತ್ರ್ಯದ ಹೋರಾಟದ ಜೊತೆಗೆ ಉತ್ತಮ ಸಮಾಜದ ನಿರ್ಮಾಣವೂ ಇಲ್ಲಿ ಸಮಾನವಾಗಿ ನಡೆದಿತ್ತು.

ಪ್ರಮುಖ ಹೋರಾಟಗಾರರು

◢ ಎಂ. ನಂಜಪ್ಪ

ಶಿಕ್ಷಣ ಮತ್ತು ಸಮಾಜಸೇವೆಯನ್ನು ರಾಷ್ಟ್ರೀಯ ಜಾಗೃತಿಯೊಂದಿಗೆ ಬೆಸೆದ ನಾಯಕ. 1921ರಲ್ಲಿ ಅಸಹಕಾರ ಚಳವಳಿಗೆ ಸೇರಿ, ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಶಾಲೆ ಸ್ಥಾಪಿಸಿದರು.

◢ ಬಿ. ಎಲ್. ತಿಮ್ಮೇಗೌಡ

ಮದ್ಯವರ್ಜನೆ, ಪಿಕೆಟಿಂಗ್ ಮತ್ತು ಕರನಿರಾಕರಣೆ ಚಳವಳಿಗಳಲ್ಲಿ ಸಕ್ರಿಯರು. 1942ರ ಶ್ರವಣಬೆಳಗೊಳದ ಗೋಲಿಬಾರ್ ಪ್ರಕರಣದಲ್ಲಿ ಬಂಧಿತರಾಗಿ ಆರು ತಿಂಗಳು ಜೈಲು ಅನುಭವಿಸಿದರು.

◢ ಎಚ್. ಬಿ. ಗುಂಡಪ್ಪ ಗೌಡ

ಮೈಸೂರು ಪೀಪಲ್ಸ್ ಫೆಡರೇಶನ್ ಮತ್ತು ಮೈಸೂರು ಕಾಂಗ್ರೆಸ್ ಚಟುವಟಿಕೆಗಳ ಪ್ರಮುಖ ಸಂಘಟಕರು. 1942ರ ಹೋರಾಟದಲ್ಲೂ ನಾಯಕತ್ವ ವಹಿಸಿದರು.

◢ ಜೆ. ಎಲ್. ಜವರೇಗೌಡ

ಕೇವಲ 18ನೇ ವಯಸ್ಸಿನಲ್ಲೇ ಸ್ವಾತಂತ್ರ್ಯ ಚಳವಳಿಗೆ ಧುಮುಕಿದ ಯುವ ಸತ್ಯಾಗ್ರಹಿ. ಪಿಕೆಟಿಂಗ್ ಮತ್ತು ಬ್ರಿಟಿಷ್ ವಿರೋಧಿ ಚಟುವಟಿಕೆಗಳಲ್ಲಿ ಭಾಗವಹಿಸಿದರು.

◢ ಎ. ಜಿ. ರಾಮಚಂದ್ರರಾವ್

ವಕೀಲರಾಗಿದ್ದರೂ ರಾಷ್ಟ್ರೀಯ ಚಳವಳಿಗೆ ತಮ್ಮನ್ನು ಅರ್ಪಿಸಿಕೊಂಡವರು. ವಿವಿಧ ಹೋರಾಟಗಳಲ್ಲಿ ಭಾಗವಹಿಸಿ ಹಲವು ಬಾರಿ ಬಂಧನಕ್ಕೊಳಗಾದರು.

◢ ಸಂಪತ್ ಅಯ್ಯಂಗಾರ್ ಮತ್ತು ಗಾರುಡ ಅಯ್ಯಂಗಾರ್


ಗೊರೂರಿನಲ್ಲಿ ಪಿಕೆಟಿಂಗ್, ರಾಷ್ಟ್ರೀಯ ಜಾಗೃತಿ ಮತ್ತು ಸಾಮಾಜಿಕ ಸುಧಾರಣಾ ಚಟುವಟಿಕೆಗಳನ್ನು ಜನರ ನಡುವೆ ಬಲಪಡಿಸಿದ ಸ್ಥಳೀಯ ಹೋರಾಟಗಾರರು.





◢ ಗೊರೂರು ರಾಮಸ್ವಾಮಿ ಅಯ್ಯಂಗಾರ್

ಗಾಂಧೀಜಿಯವರ ಪ್ರಭಾವದಿಂದ ವಿದ್ಯಾರ್ಥಿ ದೆಸೆಯಲ್ಲೇ ಅಸಹಕಾರ ಚಳವಳಿಗೆ ಧುಮುಕಿದವರು. ಖಾದಿ, ಗ್ರಾಮೋದ್ಯೋಗ, ಸಾಮಾಜಿಕ ಸಮಾನತೆಗಾಗಿ ದುಡಿದು ಗೊರೂರನ್ನು ರಾಷ್ಟ್ರೀಯ ಚಟುವಟಿಕೆಗಳ ಕೇಂದ್ರವನ್ನಾಗಿ ರೂಪಿಸಿದರು. 1942ರ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲೂ ಬಂಧನಕ್ಕೊಳಗಾದರು.





ಪ್ರಮುಖ ಐತಿಹಾಸಿಕ ಸಂಗತಿಗಳು

ವಾಡಿಯಲ್ಲಿ ಅಂಬೇಡ್ಕರ್ – ಸಮಾನತೆಯ ಚಿಂತನೆಗೆ ಚೈತನ್ಯ

1945 ಮತ್ತು 1952ರಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ವಾಡಿಗೆ ಭೇಟಿ ನೀಡಿದರು. ಸ್ಥಳೀಯ ಜನರನ್ನುದ್ದೇಶಿಸಿ ಮಾತನಾಡಿ, ಶಿಕ್ಷಣ, ಸಂಘಟನೆ ಮತ್ತು ಆತ್ಮಗೌರವದ ಮಹತ್ವವನ್ನು ಸಾರಿದರು. ಅವರ ಚಿಂತನೆಯ ಪ್ರಭಾವದಿಂದ ವಾಡಿಯಲ್ಲಿ ದಲಿತ ಸಮುದಾಯದ ಸಂಘಟನೆ, ಶಿಕ್ಷಣ ಮತ್ತು ಸಾಮಾಜಿಕ ಸಮಾನತೆಯ ಚಟುವಟಿಕೆಗಳಿಗೆ ಹೊಸ ಬಲ ದೊರೆಯಿತು.

ಸುರಪುರ ಬಂಡಾಯ – 1857ರ ರಣಕಹಳೆ

1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ರಾಜಾ ವೆಂಕಟಪ್ಪ ನಾಯಕರು ಬ್ರಿಟಿಷರ ಸಾರ್ವಭೌಮತ್ವವನ್ನು ತಿರಸ್ಕರಿಸಿ ಸುರಪುರದಲ್ಲಿ ಸಶಸ್ತ್ರ ಪ್ರತಿರೋಧ ಕಟ್ಟಿದರು. ವಿವಿಧ ಸಮುದಾಯಗಳ ಸೈನಿಕರನ್ನು ಸಂಘಟಿಸಿ ಬ್ರಿಟಿಷ್ ಪಡೆಗಳಿಗೆ ಸವಾಲು ಹಾಕಿದರು. ಅಂತಿಮವಾಗಿ ಸುರಪುರದ ಕೋಟೆ ವಶವಾದರೂ, ವೆಂಕಟಪ್ಪ ನಾಯಕರು ಮತ್ತು ಅವರ ಸಹಚರರ ತ್ಯಾಗವು ಕರ್ನಾಟಕದಲ್ಲೂ 1857ರ ಬಂಡಾಯದ ಕಿಡಿ ಹೊತ್ತಿತ್ತು ಎಂಬುದಕ್ಕೆ ಸಾಕ್ಷಿಯಾಯಿತು.


ಒಂದು ಹೋರಾಟ – ಎರಡು ಆಯಾಮಗಳು

ಕಲಬುರ್ಗಿ-ಯಾದಗಿರಿಯ ಇತಿಹಾಸದಲ್ಲಿ ರಾಜಕೀಯ ಸ್ವಾತಂತ್ರ್ಯ ಮತ್ತು ಸಾಮಾಜಿಕ ಮುಕ್ತಿ ಪರಸ್ಪರ ಬೇರ್ಪಟ್ಟಿರಲಿಲ್ಲ. ಸುರಪುರದ ಬಂಡಾಯದಿಂದ ಹೈದರಾಬಾದ್ ವಿಮೋಚನೆಯವರೆಗೆ, ಜನರು ಸ್ವರಾಜ್ಯ, ಸಮಾನತೆ ಮತ್ತು ಆತ್ಮಗೌರವಕ್ಕಾಗಿ ಹೋರಾಡಿದರು.

ವಿಮೋಚನೆಯ ಬೆಳಕಿನಿಂದ ಸಂವಿಧಾನದ ಭಾರತದೆಡೆಗೆ

ಸುರಪುರದ ಬಂಡಾಯದಿಂದ ಹೈದರಾಬಾದ್ ವಿಮೋಚನೆಯವರೆಗೆ, ಕಲಬುರ್ಗಿ-ಯಾದಗಿರಿಯ ಜನರು ಸ್ವಾತಂತ್ರ್ಯ, ಸ್ವಾಭಿಮಾನ ಮತ್ತು ಸಮಾನತೆಗಾಗಿ ಹೋರಾಡಿದರು. ಬ್ರಿಟಿಷರು, ನಿಜಾಮ ಮತ್ತು ರಜಾಕಾರರ ದಮನವನ್ನು ಎದುರಿಸಿದ ಹೋರಾಟಗಾರರು ತಮ್ಮ ವೈಯಕ್ತಿಕ ಬದುಕಿಗಿಂತ ದೇಶದ ಭವಿಷ್ಯವನ್ನು ದೊಡ್ಡದಾಗಿ ಕಂಡರು. ವಿವಿಧ ಜಾತಿ, ಧರ್ಮ ಮತ್ತು ಸಮುದಾಯಗಳ ಜನರು ಒಂದಾಗಿ ನಿಂತದ್ದು ಈ ಹೋರಾಟದ ದೊಡ್ಡ ಶಕ್ತಿ. ಅವರ ತ್ಯಾಗದಿಂದ ದೊರೆತ ಸ್ವಾತಂತ್ರ್ಯವನ್ನು ಉಳಿಸುವುದು ನಮ್ಮ ಹೊಣೆ. ಸಂವಿಧಾನದ ಸಮಾನತೆ, ನ್ಯಾಯ, ಸ್ವಾತಂತ್ರ್ಯ ಮತ್ತು ಸೌಹಾರ್ದತೆಯ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು, ಎಲ್ಲರಿಗೂ ಗೌರವ ಮತ್ತು ಸಮಾನ ಅವಕಾಶ ದೊರೆಯುವ ಭಾರತವನ್ನು ಕಟ್ಟೋಣ. ಅವರ ಹೋರಾಟ ನಮಗೆ ಸ್ವಾತಂತ್ರ್ಯ ನೀಡಿತು, ನಮ್ಮ ಹೊಣೆಗಾರಿಕೆ ಆ ಸ್ವಾತಂತ್ರ್ಯಕ್ಕೆ ಅರ್ಥ ನೀಡುವುದು.

ಜೈ ಹಿಂದ್
ಜೈ ಕರ್ನಾಟಕ



ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ

ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,

ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com

ಕಲಬುರಗಿ

ಸ್ವರಾಜ್ಯದ ಕಹಳೆಯಿಂದ ಹೈದರಾಬಾದ್ - ಕರ್ನಾಟಕ ವಿಮೋಚನೆಯವರೆಗೆ



ಸ್ವಾತಂತ್ರ್ಯ ಹೋರಾಟದಲ್ಲಿ ಜಿಲ್ಲೆಯ ಪಾತ್ರ

ಹಳೆಯ ಕಲಬುರ್ಗಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟವು ಬ್ರಿಟಿಷರ ವಸಾಹತುಶಾಹಿ ಮತ್ತು ನಿಜಾಮನ ನಿರಂಕುಶ ಆಡಳಿತ ಎರಡು ಬಗೆಯ ದಾಸ್ಯಗಳ ವಿರುದ್ಧದ ಜನಹೋರಾಟವಾಗಿತ್ತು. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಸುರಪುರದ ರಾಜಾ ವೆಂಕಟಪ್ಪ ನಾಯಕರು ಬ್ರಿಟಿಷರ ವಿರುದ್ಧ ಬಂಡೆದ್ದು ಕರ್ನಾಟಕದ ಪ್ರತಿರೋಧದ ಇತಿಹಾಸದಲ್ಲಿ ಅಚ್ಚಳಿಯದ ಗುರುತು ಮೂಡಿಸಿದರು. 1927ರಲ್ಲಿ ಗಾಂಧೀಜಿಯವರ ಗುಲ್ಬರ್ಗಾ ಭೇಟಿ ಖಾದಿ ಮತ್ತು ರಾಷ್ಟ್ರೀಯ ಚಳವಳಿಗೆ ಹೊಸ ಚೈತನ್ಯ ನೀಡಿತು. ಆರ್ಯ ಸಮಾಜ, ರಾಷ್ಟ್ರೀಯ ಶಿಕ್ಷಣ ಮತ್ತು ಸಾಮಾಜಿಕ ಜಾಗೃತಿ ಚಟುವಟಿಕೆಗಳು ಜನರಲ್ಲಿ ಸ್ವಾಭಿಮಾನ ಬೆಳೆಸಿದವು. ಡಾ. ಬಿ.ಆರ್. ಅಂಬೇಡ್ಕರ್ ಅವರ ವಾಡಿ ಭೇಟಿಗಳು ಸಮಾನತೆ, ಶಿಕ್ಷಣ ಮತ್ತು ಆತ್ಮಗೌರವದ ಸಂದೇಶಕ್ಕೆ ಮತ್ತಷ್ಟು ಬಲ ನೀಡಿದವು. 1938ರ ಹೈದರಾಬಾದ್ ಸ್ಟೇಟ್ ಕಾಂಗ್ರೆಸ್ ಚಳವಳಿಯಿಂದ 1947–48ರ ಹೈದರಾಬಾದ್ ವಿಮೋಚನಾ ಹೋರಾಟದವರೆಗೆ, ಕಲಬುರ್ಗಿ-ಯಾದಗಿರಿ ಜನರು ಸ್ವರಾಜ್ಯ, ಸಾಮಾಜಿಕ ನ್ಯಾಯ ಮತ್ತು ಭಾರತದೊಂದಿಗೆ ಏಕೀಕರಣಕ್ಕಾಗಿ ನಿರಂತರವಾಗಿ ಹೋರಾಡಿದರು. ಈ ನೆಲದ ಹೋರಾಟದ ಸಾರ: ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಸಾಮಾಜಿಕ ಸ್ವಾಭಿಮಾನ ಮತ್ತು ಸಮಾನತೆಯ ಹಕ್ಕಿಗಾಗಿ ನಡೆದ ಜನಪರ ಹೋರಾಟ.



ಹೋರಾಟದ ಮುಂಚೂಣಿಯ ನಾಯಕರು

ರಾಜಾ ವೆಂಕಟಪ್ಪ ನಾಯಕ

ಸುರಪುರದ ಕೆಚ್ಚದೆಯ ಯುವಸೇನಾನಿ



1857ರ ಸಂದರ್ಭದಲ್ಲಿ ಬ್ರಿಟಿಷರ ಸಾರ್ವಭೌಮತ್ವವನ್ನು ತಿರಸ್ಕರಿಸಿ ಸೈನ್ಯ ಕಟ್ಟಿಕೊಂಡು ಪ್ರತಿರೋಧಿಸಿದ ಸುರಪುರದ ಯುವರಾಜ. ಅವರ ಬಂಡಾಯ ಕರ್ನಾಟಕದ ಸ್ವಾತಂತ್ರ್ಯ ಹೋರಾಟದ ಆರಂಭಿಕ ರಣಕಹಳೆಗಳಲ್ಲಿ ಒಂದು.

ತಸ್ದೀಕ್ ಹುಸೇನ್

ವೆಂಕಟಪ್ಪ ನಾಯಕನ ಧೀರ ಸಹಯೋಗಿ

ವೆಂಕಟಪ್ಪ ನಾಯಕರೊಂದಿಗೆ ಕೈಜೋಡಿಸಿ ಸುರಪುರದ ಬಂಡಾಯವನ್ನು ಸಂಘಟಿಸಿದ ನಾಯಕ. 1858ರಲ್ಲಿ ಬ್ರಿಟಿಷರಿಂದ ಗಲ್ಲಿಗೇರಿಸಲ್ಪಟ್ಟ ಅವರು ಹಿಂದೂ–ಮುಸ್ಲಿಂ ಏಕತೆಯ ಸಂಕೇತವಾಗಿ ಉಳಿದರು.

ಸ್ವಾಮಿ ರಾಮಾನಂದ ತೀರ್ಥ

ಹೈದರಾಬಾದ್ ವಿಮೋಚನೆಯ ನಾಯಕ

ಹೈದರಾಬಾದ್ ರಾಜ್ಯ ಕಾಂಗ್ರೆಸ್‌ನ ಪ್ರಮುಖ ನಾಯಕರಾಗಿ ನಿಜಾಮನ ವಿರುದ್ಧ ಸತ್ಯಾಗ್ರಹ, ಜನಸಂಘಟನೆ ಮತ್ತು ಸಾಮಾಜಿಕ ಜಾಗೃತಿಗೆ ನಾಯಕತ್ವ ನೀಡಿದರು.

ವಿದ್ಯಾಧರ ಗುರೂಜಿ ಸಯ್ಯಣ್ಣ

ಗಾಂಧಿವಾದಿ ಹೋರಾಟಗಾರ



ವಂದೇ ಮಾತರಂ ಮತ್ತು ಭಾರತ ಬಿಟ್ಟು ತೊಲಗಿ ಚಳವಳಿಗಳಲ್ಲಿ ಭಾಗವಹಿಸಿ, ನಂತರ ಗುಲ್ಬರ್ಗಾ ಜಿಲ್ಲಾ ಕಾಂಗ್ರೆಸ್ ಸಂಘಟನೆಯಲ್ಲಿ ಪ್ರಮುಖ ಪಾತ್ರ ವಹಿಸಿದರು.

ವಂದೇ ಮಾತರಂ ರಾಮಚಂದ್ರ ರಾವ್

ನಿಜಾಮನ ನಿಷೇಧವನ್ನು ಧಿಕ್ಕರಿಸಿ 'ವಂದೇ ಮಾತರಂ' ಹಾಡಿ ಬಂಧನ ಮತ್ತು ಲಾಠಿ ಪ್ರಹಾರ ಎದುರಿಸಿದ ಧೀರ ಹೋರಾಟಗಾರ. 1942ರ ಚಳವಳಿ ಹಾಗೂ ಹೈದರಾಬಾದ್ ವಿಮೋಚನಾ ಹೋರಾಟದಲ್ಲೂ ಸಕ್ರಿಯರಾಗಿದ್ದರು.



ವಿಶ್ವನಾಥರೆಡ್ಡಿ ಮುಡ್ನಾಳ

ವಿದ್ಯಾರ್ಥಿ ದಶೆಯಲ್ಲಿಯೇ ರಾಷ್ಟ್ರೀಯ ಚಳವಳಿಗೆ ಧುಮುಕಿ, 1947ರ ಯಾದಗಿರಿ ಪ್ರತಿಭಟನೆಯಲ್ಲಿ ಭಾಗವಹಿಸಿ ವಿಮೋಚನಾ ಹೋರಾಟವನ್ನು ಮುಂದುವರಿಸಿದರು.

ವತ್ಸಲಾಬಾಯಿ ಬಂದಗರ್

ಮಹಿಳಾ ಹೋರಾಟದ ಶಕ್ತಿ

ಪತಿಯೊಂದಿಗೆ ನಿಜಾಮ ವಿರೋಧಿ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಧೀರ ಮಹಿಳಾ ಹೋರಾಟಗಾರ್ತಿ.

ಚನ್ನಬಸಪ್ಪ ಕುಲಗೇರಿ

ರಜಾಕಾರರು ಮತ್ತು ನಿಜಾಮನ ವಿರುದ್ಧ ಭೂಗತವಾಗಿ ಕಾರ್ಯನಿರ್ವಹಿಸಿ, ತಮ್ಮ ಸಂಪತ್ತು ಮತ್ತು ಬದುಕನ್ನೇ ಹೋರಾಟಕ್ಕೆ ಅರ್ಪಿಸಿದ ಪ್ರಮುಖ ಕಾರ್ಯಕರ್ತ.

ಪ್ರಮುಖ ಚಾರಿತ್ರಿಕ ಘಟನೆಗಳು

☐ ಅಮರ ಸುಳ್ಯ ದಂಗೆ — ಕೊಡಗಿನ ಕೆಚ್ಚಿನ ಕಹಳೆ

1837ರ ಅಮರ ಸುಳ್ಯ ದಂಗೆಯಲ್ಲಿ ಕೊಡಗಿನ ವೀರರು ಕರಾವಳಿಯ ಹೋರಾಟಗಾರರೊಂದಿಗೆ ಕೈಜೋಡಿಸಿ ಬ್ರಿಟಿಷರ ವಿರುದ್ಧ ಸಶಸ್ತ್ರ ಪ್ರತಿರೋಧ ನಡೆಸಿದರು. ಸ್ವಾಮಿ ಅಪರಂಪಾರ, ಕಲ್ಯಾಣಸ್ವಾಮಿ, ಗುಡ್ಡೆಮನೆ ಅಪ್ಪಯ್ಯಗೌಡ ಮತ್ತು ಪುಟ್ಟ ಬಸಪ್ಪ ಮುಂತಾದವರು ರೈತರು ಹಾಗೂ ಸ್ಥಳೀಯರನ್ನು ಸಂಘಟಿಸಿದರು.

ಹೋರಾಟಗಾರರು ಸುಳ್ಯದಿಂದ ಮಂಗಳೂರಿನವರೆಗೆ ಮುನ್ನಡೆದು ಬ್ರಿಟಿಷ್ ಆಡಳಿತಕ್ಕೆ ಸವಾಲೆಸೆದರು. ಮಂಗಳೂರಿನಲ್ಲಿ ಬ್ರಿಟಿಷರ ಧ್ವಜವನ್ನು ಕೆಳಗಿಳಿಸಿ ಸೌರಧ್ವಜ ಹಾರಿಸಿದ ಈ ಹೋರಾಟ, ಕೊಡಗಿನ ತ್ಯಾಗ ಮತ್ತು ದೇಶಭಕ್ತಿಯ ಅಮರ ಅಧ್ಯಾಯವಾಯಿತು.

☐ ಮಡಿಕೇರಿ ಕೋಟೆಯಲ್ಲಿ ಹಾರಿದ ಸ್ವರಾಜ್ಯದ ಧ್ವಜ

1930ರ ಡಿಸೆಂಬರ್ 17ರಂದು ಮಲ್ಲೇಂಗಡ ಚೆಂಗಪ್ಪ, ಬಿ.ಜಿ. ಗಣಪಯ್ಯ ಮತ್ತು ಮಂಡೇಪಂಡ ಕಾರಿಯಪ್ಪ ಮಡಿಕೇರಿ ಕೋಟೆಗೆ ನುಗ್ಗಿ ಬ್ರಿಟಿಷರ ಯೂನಿಯನ್ ಜಾಕ್ ಕೆಳಗಿಳಿಸಿ ಭಾರತೀಯ ರಾಷ್ಟ್ರಧ್ವಜ ಹಾರಿಸಿದರು.

ಬ್ರಿಟಿಷರ ಆಡಳಿತದ ಪ್ರತೀಕವಾಗಿದ್ದ ಕೋಟೆಯ ಮೇಲೆಯೇ ತ್ರಿವರ್ಣ ಧ್ವಜ ಹಾರಿಸಿದ ಈ ಸಾಹಸ ಕೊಡಗಿನ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಉತ್ಸಾಹ ನೀಡಿತು.





ಕೊಡಗಿನ ತ್ಯಾಗದಿಂದ ಭಾರತದ ಭವಿಷ್ಯದ ಬೆಳಕಿಗೆ

ಸ್ವಾತಂತ್ರ್ಯ ನಮಗೆ ದೊರೆತ ಉಡುಗೊರೆಯಲ್ಲ—ಅದು ಸ್ವಾಮಿ ಅಪರಂಪಾರರಿಂದ ಪಾಂಡ್ಯಂಡ ಬೆಳ್ಳಿಯಪ್ಪರವರೆಗೆ, ಗುಡ್ಡೆಮನೆ ಅಪ್ಪಯ್ಯಗೌಡರಿಂದ ಅಸಂಖ್ಯಾತ ಸತ್ಯಾಗ್ರಹಿಗಳವರೆಗೆ ತ್ಯಾಗಗಳ ಫಲ.

ಜಾತಿ, ಧರ್ಮ, ಭಾಷೆಯ ಭೇದ ಮರೆತು ಒಂದಾದ ಕೊಡಗಿನ ಹೋರಾಟಗಾರರು ನಮಗೆ ಏಕತೆ, ಸೌಹಾರ್ದತೆ ಮತ್ತು ದೇಶಪ್ರೇಮದ ಪಾಠ ಕಲಿಸಿದ್ದಾರೆ.

ಅವರ ತ್ಯಾಗವನ್ನು ಸ್ಮರಿಸುವ ಅತ್ಯುತ್ತಮ ಮಾರ್ಗ—ಸಂವಿಧಾನದ ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವದ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸುವುದು.

ಜೈ ಹಿಂದ್! ಜೈ ಕರ್ನಾಟಕ!



ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ

ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,

ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com







ಕೊಡಗು

ಕೆಚ್ಚೆದೆಯ ಪ್ರತಿರೋಧದ ನೆಲೆ



ಸ್ವಾತಂತ್ರ್ಯ ಹೋರಾಟದಲ್ಲಿ ಜಿಲ್ಲೆಯ ಪಾತ್ರ

ಮಲೆನಾಡಿನ ಕೊಡಗು, ಬ್ರಿಟಿಷರ ವಿರುದ್ಧದ ಸಶಸ್ತ್ರ ಪ್ರತಿರೋಧದಿಂದ ಗಾಂಧಿವಾದಿ ಸತ್ಯಾಗ್ರಹದವರೆಗೆ ನಿರಂತರ ಹೋರಾಟದ ನೆಲೆಯಾಗಿದೆ. 1837ರ ಅಮರ ಸುಳ್ಯ ದಂಗೆಯಲ್ಲಿ ಸ್ವಾಮಿ ಅಪರಂಪಾರ, ಕಲ್ಯಾಣಸ್ವಾಮಿ, ಪುಟ್ಟ ಬಸಪ್ಪ ಹಾಗೂ ಗುಡ್ಡೆಮನೆ ಅಪ್ಪಯ್ಯಗೌಡರಂತಹ ವೀರರು ಜನರನ್ನು ಸಂಘಟಿಸಿ ಬ್ರಿಟಿಷರಿಗೆ ಸವಾಲೆಸೆದರು.

ಮುಂದೆ ಪಾಂಡ್ಯಂಡ ಬೆಳ್ಳಿಯಪ್ಪ, ಪಾಂಡ್ಯಂಡ ಸೀತಮ್ಮ ಸೇರಿದಂತೆ ಗಾಂಧಿವಾದಿ ನಾಯಕರು ಸ್ವದೇಶಿ, ಖಾದಿ, ಮದ್ಯವರ್ಜನೆ, ಕರನಿರಾಕರಣೆ ಮತ್ತು ಸತ್ಯಾಗ್ರಹಗಳ ಮೂಲಕ ರಾಷ್ಟ್ರೀಯ ಚಳವಳಿಯನ್ನು ಬಲಪಡಿಸಿದರು. 1930ರ ದಶಕದಲ್ಲಿ ಮಡಿಕೇರಿ ಕೋಟೆಯ ಮೇಲೆ ರಾಷ್ಟ್ರಧ್ವಜ ಹಾರಿಸಿದ ಸಾಹಸ ಕೊಡಗಿನ ದೇಶಭಕ್ತಿಗೆ ಪ್ರತೀಕವಾಯಿತು.

1942ರ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲೂ ಕೊಡಗಿನ ಹೋರಾಟಗಾರರು ಬಂಧನ ಮತ್ತು ದಮನವನ್ನು ಎದುರಿಸಿ ಹೋರಾಟ ಮುಂದುವರಿಸಿದರು. ರೈತರು, ಮಹಿಳೆಯರು, ಕಾರ್ಮಿಕರು ಮತ್ತು ವಿವಿಧ ಸಮುದಾಯಗಳ ಪಾಲ್ಗೊಳ್ಳುವಿಕೆಯಿಂದ ಕೊಡಗಿನ ಸ್ವಾತಂತ್ರ್ಯ ಹೋರಾಟ ಜನಚಳವಳಿಯಾಯಿತು.





ಪ್ರಮುಖ ಹೋರಾಟಗಾರರು

1930ರಲ್ಲಿ ಅಂಕೋಲಾದಲ್ಲಿ ನಡೆದ ಐತಿಹಾಸಿಕ ಉಪ್ಪಿನ ಸತ್ಯಾಗ್ರಹ ಸಾವಿರಾರು ಜನರನ್ನು ಒಗ್ಗೂಡಿಸಿತು. ವಿದೇಶಿ ವಸ್ತುಗಳ ಬಹಿಷ್ಕಾರ, ಕರನಿರಾಕರಣೆ ಮತ್ತು ಪಿಕೆಟಿಂಗ್‌ಗಳ ಮೂಲಕ ಜನರು ಬ್ರಿಟಿಷ್ ಆಡಳಿತಕ್ಕೆ ಸವಾಲು ಹಾಕಿದರು.

ಈ ಹೋರಾಟದ ವ್ಯಾಪಕ ಜನಬೆಂಬಲದಿಂದ ಉತ್ತರ ಕನ್ನಡಕ್ಕೆ "ಕರ್ನಾಟಕದ ಬಾರ್ಡೋಲಿ" ಎಂಬ ಹೆಗ್ಗಳಿಕೆ ದೊರೆಯಿತು

☐ ಸ್ವಾಮಿ ಅಪರಂಪಾರ

ಬ್ರಿಟಿಷರ ವಿರುದ್ಧ ಕೊಡಗಿನಲ್ಲಿ ಆರಂಭಿಕ ಪ್ರತಿರೋಧಕ್ಕೆ ನಾಯಕತ್ವ ನೀಡಿದವರು. ಅವರ ಹೋರಾಟವೇ ಅಮರ ಸುಳ್ಯ ದಂಗೆಗೆ ಪ್ರೇರಣೆಯಾಯಿತು.

☐ ಕಲ್ಯಾಣಸ್ವಾಮಿ

ಅಪರಂಪಾರರ ಬಂಧನದ ನಂತರ ಹೋರಾಟದ ನಾಯಕತ್ವ ವಹಿಸಿ, ಕೊಡಗಿನ ಜನರನ್ನು ಬ್ರಿಟಿಷರ ವಿರುದ್ಧ ಸಂಘಟಿಸಿದರು.

☐ ಗುಡ್ಡೆಮನೆ ಅಪ್ಪಯ್ಯಗೌಡ

ಅಮರ ಸುಳ್ಯ ದಂಗೆಯ ಧೀರ ಸೇನಾನಿ. ರೈತರು ಮತ್ತು ಸ್ಥಳೀಯರನ್ನು ಒಗ್ಗೂಡಿಸಿ ಬ್ರಿಟಿಷರ ವಿರುದ್ಧ ಸಶಸ್ತ್ರ ಹೋರಾಟ ನಡೆಸಿ, 1837ರಲ್ಲಿ ವೀರಮರಣ ಹೊಂದಿದರು.

☐ ಪುಟ್ಟ ಬಸಪ್ಪ

ಕಲ್ಯಾಣಸ್ವಾಮಿಯ ಬಂಧನದ ಬಳಿಕ ಬಂಡಾಯದ ನೇತೃತ್ವ ವಹಿಸಿ, ಬ್ರಿಟಿಷರ ತೆರಿಗೆ ನೀತಿಗೆ ಸವಾಲೆಸೆದ ರೈತ ನಾಯಕ

☐ ಪಾಂಡ್ಯಂಡ ಬೆಳ್ಳಿಯಪ್ಪ – 'ಕೊಡಗಿನ ಗಾಂಧಿ'

ಸತ್ಯಾಗ್ರಹದಲ್ಲಿ ಭಾಗವಹಿಸಿ ಬಂಧನಕ್ಕೊಳಗಾದವರು. 'ಕೊಡಗು' ಪತ್ರಿಕೆಯ ಮೂಲಕ ರಾಷ್ಟ್ರೀಯ ಜಾಗೃತಿ ಮೂಡಿಸಿ, ಗಾಂಧೀಜಿಯವರ ಕೊಡಗು ಭೇಟಿಗೂ ಕಾರಣರಾದ ಪ್ರಮುಖ ಗಾಂಧಿವಾದಿ.

☐ ಪಾಂಡ್ಯಂಡ ಸೀತಮ್ಮ

ಮಹಿಳೆಯರನ್ನು ಸ್ವಾತಂತ್ರ್ಯ ಚಳವಳಿಗೆ ಸಂಘಟಿಸಿ, ಸತ್ಯಾಗ್ರಹ, ಖಾದಿ, ಸ್ವದೇಶಿ ಮತ್ತು ಮದ್ಯವರ್ಜನೆ ಚಳವಳಿಗಳಿಗೆ ಬೆಂಬಲ ನೀಡಿದ ಧೀರ ಮಹಿಳೆ

☐ ಸಿ. ಎಂ. ಪೂಣಚ್ಚ

'ವೀರಭಾರತಿ'ಯನ್ನು ಗುಪ್ತವಾಗಿ ಪ್ರಕಟಿಸಿ ರಾಷ್ಟ್ರೀಯ ಸಂದೇಶವನ್ನು ಜನರಿಗೆ ತಲುಪಿಸಿದರು. ಇದಕ್ಕಾಗಿ ಜೈಲು ಶಿಕ್ಷೆಯನ್ನೂ ಅನುಭವಿಸಿದರು.

ಮಡಿಕೇರಿ ಕೋಟೆಯ ಧ್ವಜವೀರರು

ಮಲ್ಲೇಂಗಡ ಚೆಂಗಪ್ಪ, ಬಿ.ಜಿ. ಗಣಪಯ್ಯ ಮತ್ತು ಮಂಡೇಪಂಡ ಕಾರಿಯಪ್ಪರು 1930ರಲ್ಲಿ ಮಡಿಕೇರಿ ಕೋಟೆಯ ಮೇಲೆ ಬ್ರಿಟಿಷರ ಧ್ವಜವನ್ನು ಕೆಳಗಿಳಿಸಿ ರಾಷ್ಟ್ರಧ್ವಜ ಹಾರಿಸಿದರು.



ಪ್ರಮುಖ ಐತಿಹಾಸಿಕ ಸಂಗತಿಗಳು

ವಿದುರಾಶ್ವತ್ಥ – ದಕ್ಷಿಣ ಭಾರತದ ಜಲಿಯನ್‌ವಾಲಾ ಬಾಗ್

1938ರ ಏಪ್ರಿಲ್ 25ರಂದು ಗೌರಿಬಿದನೂರು ತಾಲೂಕಿನ ವಿದುರಾಶ್ವತ್ಥದಲ್ಲಿ ರಾಷ್ಟ್ರಧ್ವಜ ಹಾರಿಸಲು ಸಾವಿರಾರು ಜನರು ಸೇರಿದ್ದರು. ನಿಷೇಧದ ನಡುವೆಯೂ ಸತ್ಯಾಗ್ರಹ ಮುಂದುವರಿದಾಗ ಪೊಲೀಸರು ಲಾಠಿಚಾರ್ಜ್ ನಡೆಸಿ ನಂತರ ಗುಂಡಿನ ದಾಳಿ ನಡೆಸಿದರು. ಅನೇಕ ಸತ್ಯಾಗ್ರಹಿಗಳು ಹುತಾತ್ಮರಾದರು. ಇವರಲ್ಲಿ 9 ತಿಂಗಳ ತುಂಬು ಗರ್ಭಿಣಿ ಮರಲೂರಿನ ಗೌರಮ್ಮ ಅವರು ಸೇರಿದ್ದರು. ಈ ಘಟನೆ ಮೈಸೂರು ರಾಜ್ಯವನ್ನೇ ನಡುಗಿಸಿತು.


ಮಹಾತ್ಮ ಗಾಂಧೀಜಿ ಘಟನೆಯನ್ನು ಖಂಡಿಸಿ ನಿಷ್ಪಕ್ಷಪಾತ ತನಿಖೆಗೆ ಆಗ್ರಹಿಸಿದರು. ಈ ರಕ್ತಸಿಕ್ತ ಘಟನೆ ವಿದುರಾಶ್ವತ್ಥವನ್ನು “ಮೈಸೂರಿನ ಜಲಿಯನ್‌ವಾಲಾ ಬಾಗ್” ಎಂದು ಇತಿಹಾಸದಲ್ಲಿ ಗುರುತಿಸುವಂತೆ ಮಾಡಿತು.

ಕೆಜಿಎಫ್ ಗಣಿಗಳ ಕಾರ್ಮಿಕರ ಪ್ರತಿರೋಧ

1930ರಲ್ಲಿ ಆರಂಭವಾದ ಕಾರ್ಮಿಕ ಮುಷ್ಕರ ತಿಂಗಳುಗಳ ಕಾಲ ಮುಂದುವರಿದು ಕಾರ್ಮಿಕರ ಬೇಡಿಕೆಗಳಿಗೆ ಸ್ಪಂದಿಸುವಂತೆ ಕಂಪನಿಯನ್ನು ಒತ್ತಾಯಿಸಿತು. 1942ರಲ್ಲಿ ‘ಟೂಲ್-ಡೌನ್’ ಮುಷ್ಕರದ ಮೂಲಕ ಕಾರ್ಮಿಕರು ಭಾರತ ಬಿಟ್ಟು ತೊಲಗಿ ಚಳವಳಿಗೆ ಬೆಂಬಲ ನೀಡಿದರು. ವಿದ್ಯಾರ್ಥಿಗಳು, ಶಿಕ್ಷಕರು, ವೈದ್ಯರು ಮತ್ತು ಗೃಹಿಣಿಯರೂ ಈ ಹೋರಾಟಕ್ಕೆ ಕೈಜೋಡಿಸಿದರು.

ವೀರಸೌಧ – ಹೋರಾಟದ ಸ್ಮರಣೆಯ ತಾಣ

ವಿದುರಾಶ್ವತ್ಥದಲ್ಲಿ ನಿರ್ಮಿಸಿರುವ ವೀರಸೌಧ ಸ್ವಾತಂತ್ರ್ಯ ಹೋರಾಟ ಮತ್ತು ಹುತಾತ್ಮರ ಸ್ಮರಣೆಯನ್ನು ಜೀವಂತವಾಗಿರಿಸುವ ಐತಿಹಾಸಿಕ ತಾಣವಾಗಿದೆ. ಸ್ವಾತಂತ್ರ್ಯ ಚಳವಳಿಯ ದಾಖಲೆಗಳು, ಛಾಯಾಚಿತ್ರಗಳು ಮತ್ತು ಕರ್ನಾಟಕದ ಹೋರಾಟದ ವಿವಿಧ ಅಧ್ಯಾಯಗಳನ್ನು ಇಲ್ಲಿ ಪರಿಚಯಿಸಲಾಗಿದೆ.





ಅವರ ತ್ಯಾಗದ ಬೆಳಕಿನಲ್ಲಿ ನಮ್ಮ ಹೋಣೆ

ಕೆಜಿಎಫ್‌ನ ಕತ್ತಲೆಯ ಗಣಿಗಳಲ್ಲಿ ದುಡಿದ ಕಾರ್ಮಿಕರಿಂದ ಹಿಡಿದು ವಿದುರಾಶ್ವತ್ಥದಲ್ಲಿ ರಾಷ್ಟ್ರಧ್ವಜಕ್ಕಾಗಿ ಪ್ರಾಣತ್ಯಾಗ ಮಾಡಿದ ಹುತಾತ್ಮರವರೆಗೆ, ಕೋಲಾರದ ಸ್ವಾತಂತ್ರ್ಯ ಹೋರಾಟವು ತ್ಯಾಗ, ಸ್ವಾಭಿಮಾನ ಮತ್ತು ಸಾಮಾಜಿಕ ನ್ಯಾಯದ ಗಾಥೆ. ಹೋರಾಟಗಾರರ ತ್ಯಾಗ ನಮಗೆ ನೆನಪಿಸುವುದು ಒಂದೇ ಸತ್ಯ—ಸ್ವಾತಂತ್ರ್ಯವೆಂದರೆ ಕೇವಲ ಅಧಿಕಾರ ಬದಲಾವಣೆಯಲ್ಲ; ಅದು ಸಮಾನತೆ, ನ್ಯಾಯ ಮತ್ತು ಮಾನವ ಘನತೆಯ ಹಕ್ಕು.

ಸಂವಿಧಾನದ ಮೌಲ್ಯಗಳನ್ನು ಪಾಲಿಸಿ, ಜಾತಿ, ಧರ್ಮ, ಭಾಷೆ ಮತ್ತು ವರ್ಗದ ಭೇದಗಳನ್ನು ಮೀರಿ ಎಲ್ಲರನ್ನೂ ಒಳಗೊಂಡ ಭಾರತವನ್ನು ಕಟ್ಟೋಣ.

ಅವರ ತ್ಯಾಗವನ್ನು ನೆನಪಿಸಿಕೊಳ್ಳುವುದಷ್ಟೇ ಅಲ್ಲ
ಅವರು ಕನಸು ಕಂಡ ಭಾರತವನ್ನು ನಿರ್ಮಿಸೋಣ.

ಜೈ ಹಿಂದ್! ಜೈ ಕರ್ನಾಟಕ!

ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ

ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,

ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com





ಕೋಲಾರ ಚಿಕ್ಕಬಳ್ಳಾಪುರ

ರಾಷ್ಟ್ರೀಯ ಚಳವಳಿಯ ಬಲವಾದ ನೆಲೆ



ಸ್ವಾತಂತ್ರ್ಯ ಹೋರಾಟದಲ್ಲಿ ಜಿಲ್ಲೆಯ ಪಾತ್ರ

ಚಿನ್ನದ ಗಣಿಗಳ ಕಾರ್ಮಿಕರಿಂದ ವಿದುರಾಶ್ವತ್ಥದ ಹುತಾತ್ಮರವರೆಗೆ

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಇತಿಹಾಸ, ಸ್ವಾಭಿಮಾನ ಮತ್ತು ಬಲಿದಾನದ ಗಾಥೆ ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥದ್ದು. ಹಳೆಯ ಕೋಲಾರ ಜಿಲ್ಲೆ—ಇಂದಿನ ಕೋಲಾರ ಮತ್ತು ಚಿಕ್ಕಬಳ್ಳಾಪುರ ಪ್ರದೇಶಗಳು—ಮೈಸೂರು ಸಂಸ್ಥಾನದ ರಾಷ್ಟ್ರೀಯ ಚಳವಳಿಯ ಪ್ರಮುಖ ಕೇಂದ್ರವಾಗಿದ್ದವು. ಗಾಂಧೀಜಿಯವರ ಸತ್ಯಾಗ್ರಹ, ಸ್ವದೇಶಿ, ಖಾದಿ ಮತ್ತು ಅಸ್ಪೃಶ್ಯತಾ ನಿವಾರಣೆಯ ಸಂದೇಶಗಳು ಗ್ರಾಮೀಣ ಭಾಗಗಳಿಗೂ ತಲುಪಿದವು.

ವಿದುರಾಶ್ವತ್ಥ ಗೋಲೀಬಾರ್

1938ರ ಏಪ್ರಿಲ್ 25ರಂದು ವಿದುರಾಶ್ವತ್ಥದಲ್ಲಿ ಧ್ವಜ ಸತ್ಯಾಗ್ರಹಕ್ಕಾಗಿ ಶಾಂತಿಯುತವಾಗಿ ಸೇರಿದ್ದ ಜನರ ಮೇಲೆ ಪೊಲೀಸರು ಗುಂಡಿನ ದಾಳಿ ನಡೆಸಿ, ತುಂಬುಗರ್ಭಿಣಿಯನ್ನೂ ಸೇರಿದಂತೆ 32ಕ್ಕೂ ಹೆಚ್ಚು ಮಂದಿಯನ್ನು ಬಲಿತೆಗೆದುಕೊಂಡರು. ಈ ಘಟನೆ ಕರ್ನಾಟಕದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಮರೆಯಲಾಗದ ಹುತಾತ್ಮರ ಅಧ್ಯಾಯ.

ಚಿನ್ನದ ಗಣಿಗಳಲ್ಲಿ ಹೊತ್ತಿದ ರಾಷ್ಟ್ರೀಯ ಕಿಚ್ಚು

ಕೆಜಿಎಫ್‌ನ ಗಣಿ ಕಾರ್ಮಿಕರು ಕಠಿಣ ಕೆಲಸದ ಪರಿಸ್ಥಿತಿ ಮತ್ತು ಶೋಷಣೆಯ ವಿರುದ್ಧ ಸಂಘಟಿತರಾದರು. 1930ರ ಕಾರ್ಮಿಕ ಮುಷ್ಕರದಿಂದ ಆರಂಭವಾದ ಈ ಪ್ರತಿರೋಧ, 1942ರ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ 'ಟೂಲ್-ಡೌನ್' ಮುಷ್ಕರದ ಮೂಲಕ ರಾಷ್ಟ್ರೀಯ ಹೋರಾಟದ ಭಾಗವಾಯಿತು.

ಸಾಮಾಜಿಕ ಸಮಾನತೆಯ ಹೋರಾಟ

ಸ್ವಾತಂತ್ರ್ಯದ ಜೊತೆಗೆ ಶಿಕ್ಷಣ, ಅಸ್ಪೃಶ್ಯತಾ ನಿವಾರಣೆ ಮತ್ತು ಮಹಿಳಾ ಜಾಗೃತಿಗೂ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮಹತ್ವ ದೊರೆಯಿತು. ಹೀಗಾಗಿ ಇಲ್ಲಿನ ಚಳವಳಿ ರಾಜಕೀಯ ಸ್ವಾತಂತ್ರ್ಯವಷ್ಟೇ ಅಲ್ಲ, ಸಾಮಾಜಿಕ ನ್ಯಾಯ ಮತ್ತು ಮಾನವ ಘನತೆಯ ಹೋರಾಟವೂ ಆಗಿತ್ತು.





ಪ್ರಮುಖ ಹೋರಾಟಗಾರರು

◢ ಕೆ. ರಾಮಚಂದ್ರರಾವ್

1942ರ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ಪೊಲೀಸ್ ಲಾಠಿಚಾರ್ಜ್‌ನಲ್ಲಿ ಎಡಗಣ್ಣನ್ನು ಕಳೆದುಕೊಂಡ ಧೀರ ಹೋರಾಟಗಾರ.

◢ ಕೆ.ಸಿ. ರೆಡ್ಡಿ



ಕೋಲಾರದ ಕ್ಯಾಸಂಬಳ್ಳಿಯವರಾದ ಕೆ.ಸಿ. ರೆಡ್ಡಿ ರಾಷ್ಟ್ರೀಯ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿ, ಸ್ವಾತಂತ್ರ್ಯ ನಂತರ ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿಯಾದರು.

◢ ಎಂ.ವಿ. ಕೃಷ್ಣಪ್ಪ



ಮುಳಬಾಗಿಲಿನ ಸ್ವಾತಂತ್ರ್ಯ ಹೋರಾಟಗಾರರಾಗಿ ಕೆಜಿಎಫ್ ನ ಗಣಿ ಕಾರ್ಮಿಕರನ್ನು ಸಂಘಟಿಸಿದರು. ಸಾಮಾಜಿಕ ನ್ಯಾಯದ ಹೋರಾಟವನ್ನು ರಾಷ್ಟ್ರೀಯ ಚಳವಳಿಯೊಂದಿಗೆ ಬೆಸೆದ ನಾಯಕ.



◢ ಅನ್ನಪೂರ್ಣಮ್ಮ ತಿಮ್ಮಾರೆಡ್ಡಿ

ಕೋಲಾರದ ಕೆಜಿಎಫ್ ಪ್ರದೇಶದ ಸ್ವಾತಂತ್ರ್ಯ ಹೋರಾಟಗಾರ್ತಿ ಹಾಗೂ ಸಂಸ್ಕೃತ-ಹಿಂದಿ ವಿದ್ವಾಂಸೆಯಾಗಿದ್ದರು. 1942ರ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. 1958ರಿಂದ 1964ರವರೆಗೆ ರಾಜ್ಯಸಭಾ ಸದಸ್ಯೆಯಾಗಿ ಸೇವೆ ಸಲ್ಲಿಸಿದರು.

◢ ಹುತಾತ್ಮ ರತ್ನಯ್ಯ, ಗೌರಮ್ಮ ಮತ್ತು ಸಂಗಡಿಗರು

1938ರ ಏಪ್ರಿಲ್ 25ರಂದು ವಿದುರಾಶ್ವತ್ಥದಲ್ಲಿ ನಡೆದ ಶಾಂತಿಯುತ ಧ್ವಜ ಸತ್ಯಾಗ್ರಹದ ಮೇಲೆ ಪೋಲೀಸರು ಏಕಾಏಕಿ ನಡೆಸಿದ ಗುಂಡಿನ ದಾಳಿಯಲ್ಲಿ ರತ್ನಯ್ಯ ಸೇರಿದಂತೆ ಹಲವರು ಹುತಾತ್ಮರಾದರು. 9 ತಿಂಗಳ ತುಂಬಿದ ಗರ್ಭಿಣಿ ಮರಲೂರಿನ ಗೌರಮ್ಮ ಕೂಡಾ ಅವರಲ್ಲಿ ಒಬ್ಬರು.

◢ ವಿದುರಾಶ್ವತ್ಥ ಧ್ವಜಸತ್ಯಾಗ್ರಹದ ಮುಂದಾಳುಗಳು

ಎನ್.ಸಿ. ನಾಗಯ್ಯರೆಡ್ಡಿ, ಶ್ರೀಪಾಳಯ್ಯ, ಗೆದ್ದಗೆರೆ ರಾಮಸ್ವಾಮಿ, ವೆಂಕಟಸ್ವಾಮಿ, ನರಸಿಂಹಪ್ಪ, ನಾರಾಯಣಪ್ಪ ಸೇರಿದಂತೆ ಅನೇಕರು ನಿಷೇಧಾಜ್ಞೆ ಉಲ್ಲಂಘಿಸಿ ಹೋರಾಟ ನಡೆಸಿ ಬಂಧನಕ್ಕೊಳಗಾದರು.

◢ ಕೆ.ಎಸ್. ವಾಸನ್

ಕೆಜಿಎಫ್‌ನ ಗಣಿ ಕಾರ್ಮಿಕರನ್ನು ಸಂಘಟಿಸಿ ಉತ್ತಮ ಕೆಲಸದ ಪರಿಸ್ಥಿತಿ, ಕಾರ್ಮಿಕ ಹಕ್ಕು ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ಪ್ರಮುಖ ಕಾರ್ಮಿಕ ನಾಯಕ.



ಪ್ರಮುಖ ಐತಿಹಾಸಿಕ ಸಂಗತಿಗಳು

ಶಿವಪುರ ಧ್ವಜ ಸತ್ಯಾಗ್ರಹ
ಮಂಡ್ಯದಿಂದ ಮೊಳಗಿದ ಸ್ವರಾಜ್ಯದ ಕರೆ

1938ರ ಶಿವಪುರ ಸತ್ಯಾಗ್ರಹ ಮೈಸೂರು ಸಂಸ್ಥಾನದಲ್ಲಿ ರಾಷ್ಟ್ರೀಯ ಧ್ವಜ ಮತ್ತು ಸ್ವರಾಜ್ಯದ ಪರ ನಡೆದ ಐತಿಹಾಸಿಕ ಜನಾಂದೋಲನ. ಧ್ವಜ ಹಾರಿಸುವುದಕ್ಕೆ ನಿಷೇಧವಿದ್ದರೂ, ಹೋರಾಟಗಾರರು ಅಹಿಂಸೆಯ ಮಾರ್ಗದಲ್ಲಿ ನಿಷೇಧವನ್ನು ಧಿಕ್ಕರಿಸಿದರು. ಸುಮಾರು 40,000 ಜನರು ಶಿವಪುರದಲ್ಲಿ ಸೇರಿದ್ದರೆ, ಅವರನ್ನು ಎದುರಿಸಲು ಸುಮಾರು 600 ಪೊಲೀಸರು ನಿಯೋಜಿತರಾಗಿದ್ದರು. ಟಿ.ಸಿದ್ದಲಿಂಗಯ್ಯ, ಎಸ್. ಕೆ. ಕರೀಂ ಖಾನ್, ಯಶೋಧರಾ ದಾಸಪ್ಪ ಸೇರಿದಂತೆ ಹಲವು ರಾಜ್ಯಮಟ್ಟದ ನಾಯಕರು ಮತ್ತು ಮಹಿಳೆಯರು ಹೋರಾಟದಲ್ಲಿ ಭಾಗವಹಿಸಿದರು.



ಇರ್ವಿನ್ ಕಾಲುವೆ ಚಳವಳಿ
ರೈತರ ಒಗ್ಗಟ್ಟಿನ ಶಕ್ತಿ

ಕೆ.ಆರ್.ಎಸ್. ಮತ್ತು ಇರ್ವಿನ್ ಕಾಲುವೆ ನಿರ್ಮಾಣದ ನಂತರ ವಿಧಿಸಲಾದ ತೆರಿಗೆ ಹಾಗೂ ನೀರಾವರಿ ಹೊರೆಗಳ ವಿರುದ್ಧ ಮಂಡ್ಯದ ರೈತರು ಸಂಘಟಿತರಾದರು. 1931ರ ಡಿಸೆಂಬರ್ 31ರಂದು ಮದ್ದೂರಿನಿಂದ 4,000ಕ್ಕೂ ಹೆಚ್ಚು ರೈತರು, ಸುಮಾರು 100 ಎತ್ತಿನ ಬಂಡಿಗಳಲ್ಲಿ ಬೆಂಗಳೂರಿನತ್ತ ಹೊರಟರು. 1932ರ ಜನವರಿ 4ರಂದು ಕಂದಾಯ ಕಚೇರಿ ಎದುರು ತಮ್ಮ ಬೇಡಿಕೆಗಳನ್ನು ಮಂಡಿಸಿದರು. ರೈತರ ಶಾಂತಿಯುತ ಒಗ್ಗಟ್ಟಿನ ಫಲವಾಗಿ ತೆರಿಗೆ ಪಾವತಿಗೆ ಕೆಲವು ರಿಯಾಯಿತಿಗಳು ದೊರಕಿದವು. ಇದು ಕೇವಲ ರೈತರ ಹೋರಾಟವಲ್ಲ ಜನರ ಬದುಕಿನ ಪ್ರಶ್ನೆಯನ್ನು ಸ್ವರಾಜ್ಯದ ಹೋರಾಟದೊಂದಿಗೆ ಜೋಡಿಸಿದ ಚಳವಳಿ.

ಸ್ವಾತಂತ್ರ್ಯದ ಪರಂಪರೆಯಿಂದ ಸಮಾನತೆಯ ಭಾರತದೆಡೆಗೆ
ಮಂಡ್ಯದ ಸ್ವಾತಂತ್ರ್ಯ ಹೋರಾಟವು ಸ್ವರಾಜ್ಯ, ರೈತ ಹಕ್ಕು ಮತ್ತು ಜನತಾಂತ್ರಿಕ ಆಡಳಿತದ ಆಶಯಗಳನ್ನು ಒಂದಾಗಿಸಿತು. ಶಿವಪುರದಲ್ಲಿ ಸುಮಾರು 40,000 ಜನರ ಅಹಿಂಸಾತ್ಮಕ ಧ್ವಜ ಸತ್ಯಾಗ್ರಹ, ಇರ್ವಿನ್ ಕಾಲುವೆ ಚಳವಳಿಯಲ್ಲಿ ಸಾವಿರಾರು ರೈತರ ಒಗ್ಗಟ್ಟು ಇವೆಲ್ಲವೂ ಜನಶಕ್ತಿಯ ಅಪೂರ್ವ ಉದಾಹರಣೆಗಳು. ಜಾತಿ, ಧರ್ಮ, ಭಾಷೆ ಮತ್ತು ವರ್ಗದ ಭೇದಗಳನ್ನು ಮೀರಿ 'ಭಾರತೀಯ' ಎಂಬ ಒಂದೇ ಭಾವನೆಯಡಿ ಒಂದಾದ ಈ ಹೋರಾಟಗಾರರು ನಮಗೆ ಸ್ವಾತಂತ್ರ್ಯವನ್ನು ಮಾತ್ರವಲ್ಲ, ಒಂದು ಹೊಣೆಗಾರಿಕೆಯನ್ನೂ ಕೊಟ್ಟಿದ್ದಾರೆ. ಸಮಾನತೆ, ನ್ಯಾಯ, ಸ್ವಾತಂತ್ರ್ಯ ಮತ್ತು ಸೌಹಾರ್ದತೆಯ ಸಂವಿಧಾನಬದ್ಧ ಭಾರತವನ್ನು ಕಟ್ಟುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ.

ಜೈ ಹಿಂದ್ ಜೈ ಕರ್ನಾಟಕ



ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ

ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,

ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com

ಮಂಡ್ಯ



**ಧ್ವಜ ಸತ್ಯಾಗ್ರಹದಿಂದ
ರೈತ ಹೋರಾಟದವರೆಗೆ
ಸ್ವಾತಂತ್ರ್ಯ ಚಳವಳಿಯ ಗಟ್ಟಿನೆಲೆ**



ಸ್ವಾತಂತ್ರ್ಯ ಹೋರಾಟದಲ್ಲಿ ಜಿಲ್ಲೆಯ ಪಾತ್ರ

ಕಾವೇರಿ ನದಿಯ ಫಲವತ್ತಾದ ತೀರದ ಮಂಡ್ಯ ಜಿಲ್ಲೆ, ಕರ್ನಾಟಕದ ಸ್ವಾತಂತ್ರ್ಯ ಚಳವಳಿಯಲ್ಲಿ ಜನಸಾಮಾನ್ಯರ ಸಕ್ರಿಯ ಪಾಲ್ಗೊಳ್ಳುವಿಕೆಗೆ ಹೆಸರಾಗಿದೆ. ಮೈಸೂರು ಸಂಸ್ಥಾನದ ಕಾಲದಲ್ಲಿಯೇ ಸ್ವರಾಜ್ಯ, ಜವಾಬ್ದಾರಿಯುತ ಆಡಳಿತ ಮತ್ತು ರಾಷ್ಟ್ರೀಯ ಸ್ವಾಭಿಮಾನದ ಆಶಯಗಳು ಇಲ್ಲಿ ಬಲವಾಗಿ ಬೆಳೆದವು. ರೈತರು, ವಿದ್ಯಾರ್ಥಿಗಳು, ಮಹಿಳೆಯರು ಮತ್ತು ವಿವಿಧ ಸಾಮಾಜಿಕ ಸಮುದಾಯಗಳ ಜನರು ರಾಷ್ಟ್ರೀಯ ಚಳವಳಿಗೆ ಕೈಜೋಡಿಸಿದರು. ಅಸಹಕಾರ, ಕರನಿರಾಕರಣೆ, ಸತ್ಯಾಗ್ರಹ, ವಿದೇಶಿ ವಸ್ತುಗಳ ಬಹಿಷ್ಕಾರ ಮತ್ತು ಧ್ವಜ ಸತ್ಯಾಗ್ರಹದಂತಹ ಚಟುವಟಿಕೆಗಳು ಜಿಲ್ಲೆಯ ಹಲವು ಭಾಗಗಳಲ್ಲಿ ಪ್ರತಿಧ್ವನಿಸಿದವು. ಮೈಸೂರು ಹುಲಿಯಾಗಿ ಪ್ರಶಂಸಿಸಲ್ಪಟ್ಟ ದಾರ್ಶನಿಕ ಅರಸ, ದೇಶಾಭಿಮಾನ ಮತ್ತು ತ್ಯಾಗದ ಪ್ರತಿರೂಪವಾದ ಟಿಪ್ಪು ಸುಲ್ತಾನನ ಆಳ್ವಿಕೆಯ ಕೇಂದ್ರವಾದ ಶ್ರೀರಂಗಪಟ್ಟಣವೂ ಮಂಡ್ಯ ಜಿಲ್ಲೆಯ ಭಾಗವೇ ಆಗಿದೆ, ಇಂತಹ ಪರಂಪರೆಯ ಮಂಡ್ಯದಲ್ಲಿ ಸ್ವಾತಂತ್ರ್ಯ ಹೋರಾಟವು ಕೇವಲ ಬ್ರಿಟಿಷರ ವಿರುದ್ಧದ ರಾಜಕೀಯ ಹೋರಾಟವಾಗಿರದೆ, ರೈತರ ಹಕ್ಕು ಮತ್ತು ಜವಾಬ್ದಾರಿಯುತ ಆಡಳಿತದ ಬೇಡಿಕೆಯ ಹೋರಾಟವೂ ಆಗಿತ್ತು. ಎಚ್.ಕೆ.ವೀರಣ್ಣಗೌಡ, ಶಿವಪುರದ ತಿರುಮಲೇಗೌಡ, ಸಾಹುಕಾರ್ ಚನ್ನಯ್ಯ, ಹೊನಗಾನಹಳ್ಳಿ ಪುಟ್ಟಣ್ಣ, ಟಿ.ಮರಿಯಪ್ಪ, ಕೊಪ್ಪದ ಜೋಗಿಗೌಡ, ಡಾ.ಬಂದೀಗೌಡ, ಇಂಡುವಾಳು ಹೊನ್ನಯ್ಯ, ಕ್ಯಾತನಹಳ್ಳಿ ಕಪನಿಗೌಡ, ಕಾಂಗ್ರೆಸ್ ಸುಬ್ಬಯ್ಯ, ಕೆ.ಪುಟ್ಟಸ್ವಾಮಿ, ತಾಯಮ್ಮ ವೀರಣ್ಣಗೌಡ, ಪೈಲ್ವಾನ್ ಗೋವಿಂದೇಗೌಡ, ವೀರಕೇಸರಿ ಸೀತಾರಾಮಶಾಸ್ತ್ರಿ, ಪಿ.ಎನ್.ಜವರಪ್ಪಗೌಡ, ವಳೆಗೆರೆಹಳ್ಳಿ ಕರಡಣಯ್ಯ, ನಗರಕೆರೆ ಎನ್.ಎಲ್.ಶಿವಲಿಂಗೇಗೌಡ, ಕೆ.ಬೆಟ್ಟಶೆಟ್ಟಿ, ಪಿ.ಆರ್.ರಾಮಯ್ಯ, ಬಾಂಬ್ ಕಾಳಪ್ಪ, ಬಸಪ್ಪಗೌಡ, ಎ.ಸಿ.ಭೈರಪ ಮೊದಲಾದ ನೂರಾರು ಮಂದಿ ಸ್ವಾತಂತ್ರ್ಯ ಚಳವಳಿಯ ಕೆಲಸಕ್ಕೆ ಕಟ್ಟಿಬದ್ಧರಾಗಿದ್ದರು

ಮಂಡ್ಯದ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯ ನಾಯಕರು

ಎಚ್. ಕೆ. ವೀರಣ್ಣಗೌಡ



ಮಂಡ್ಯದ ರೈತರ ಸಮಸ್ಯೆಗಳನ್ನು ರಾಷ್ಟ್ರೀಯ ಚಳವಳಿಯೊಂದಿಗೆ ಬೆಸೆದ ಪ್ರಮುಖ ನಾಯಕ. ಇರ್ವಿನ್ ಕಾಲುವೆ ತೆರಿಗೆ ಸಮಸ್ಯೆಯ ವಿರುದ್ಧ ರೈತರನ್ನು ಸಂಘಟಿಸಿ ಶಾಂತಿಯುತ ಹೋರಾಟಕ್ಕೆ ಮುನ್ನಡೆಸಿದರು. ಪತ್ನಿ ತಾಯಮ್ಮ ವೀರಣ್ಣಗೌಡ ಅವರೂ ಸ್ವಾತಂತ್ರ್ಯ ಚಳವಳಿ ಮತ್ತು ಜನಸೇವೆಯಲ್ಲಿ ಹೆಗಲಿಗೆ ಹೆಗಲು ನಿಂತರು. ಎಚ್.ಕೆ.ವೀರಣ್ಣಗೌಡರ ಬದುಕೇ ಒಂದು ಆದರ್ಶ. ಸ್ವಾತಂತ್ರಪೂರ್ವದ ಸಂದರ್ಭದಲ್ಲೇ ವಿಧವೆಯೊಂದಿಗೆ ಮದುವೆಯಾಗಿ ಕ್ರಾಂತಿಕಾರಕ ತೀರ್ಮಾನಕ್ಕೆ ಮುನ್ನುಡಿಯಾದರು.



ಕೆ. ವಿ. ಶಂಕರಗೌಡ 'ಮಂಡ್ಯದ ಗಾಂಧಿ'

ಗಾಂಧೀಜಿಯವರ ಆದರ್ಶಗಳಿಂದ ಪ್ರೇರಿತರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡರು. ನಂತರ ಸಹಕಾರ ಚಳವಳಿ, ರೈತ ಹಕ್ಕುಗಳು ಮತ್ತು ಗ್ರಾಮೀಣ ಶಿಕ್ಷಣದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದರು. PES ಸ್ಥಾಪನೆಯ ಮೂಲಕ ಶಿಕ್ಷಣವನ್ನು ಜನಸಾಮಾನ್ಯರ ಬಳಿಗೆ ಕೊಂಡೊಯ್ದರು.

ಡಾ. ಸಿ. ಬಂದೀಗೌಡ



ಶ್ರೀರಂಗಪಟ್ಟಣದ ಗಾಂಧಿವಾದಿ ವೈದ್ಯ ಮತ್ತು ಜನಸೇವಕ. ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯರಾಗಿದ್ದ ಅವರು, ನಂತರವೂ ಬಡವರು, ಗ್ರಾಮೀಣ ಜನರು ಮತ್ತು ಶೋಷಿತ ಸಮುದಾಯಗಳ ಸೇವೆಯಲ್ಲಿ ತೊಡಗಿಸಿಕೊಂಡರು.

ಎಚ್. ಕೆ. ವೀರಣ್ಣಗೌಡ, ತಾಯಮ್ಮ ವೀರಣ್ಣ ಗೌಡ, ಸಾಹುಕಾರ್ ಚನ್ನಯ್ಯ, ಶಿವಪುರದ ತಿರುಮಲೇಗೌಡ, ಹೊನಗಾನಹಳ್ಳಿ ಪುಟ್ಟಣ್ಣ, ಇಂಡುವಾಳು ಹೊನ್ನಯ್ಯ ಸೇರಿದಂತೆ ನೂರಾರು ಹೋರಾಟಗಾರರು ಸ್ವಾತಂತ್ರ್ಯ ಚಳವಳಿಗೆ ತಮ್ಮ ಬದುಕನ್ನು ಅರ್ಪಿಸಿದರು.

ಕಾವೇರಿ ತೀರದ ಕ್ರಾಂತಿಧ್ವನಿ.
ನೇಗಿಲು ಹಿಡಿದ ಕೈಗಳೇ ಸ್ವರಾಜ್ಯದ ಶಕ್ತಿ!



ಪ್ರಮುಖ ಐತಿಹಾಸಿಕ ಸಂಗತಿಗಳು

ಟಿಪ್ಪು ಸುಲ್ತಾನ್: ಸ್ವಾಭಿಮಾನ ಮತ್ತು ಅಭಿವೃದ್ಧಿಯ ಸಂಕೇತ

ಬ್ರಿಟಿಷರ ವಿರುದ್ಧ ಹೋರಾಡಿದ ಟಿಪ್ಪು ಸುಲ್ತಾನ್ ಯುದ್ಧತಂತ್ರದ ಜೊತೆಗೆ ಕೃಷಿ, ನೀರಾವರಿ, ರೇಷ್ಮೆ, ವ್ಯಾಪಾರ, ಶಿಕ್ಷಣ ಮತ್ತು ಆಡಳಿತ ಸುಧಾರಣೆಗಳಿಗೆ ಒತ್ತು ನೀಡಿದರು. ಅವರ ಹೋರಾಟ ಮತ್ತು ಆಡಳಿತ ಪರಂಪರೆ ಮೈಸೂರು ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ.


'ಮೈಸೂರು ಚಲೋ' – ಪ್ರಜಾಶಕ್ತಿಯ ವಿಜಯ

ಸ್ವಾತಂತ್ರ್ಯದ ಬಳಿಕ ಮೈಸೂರು ಸಂಸ್ಥಾನವನ್ನು ಭಾರತ ಒಕ್ಕೂಟಕ್ಕೆ ಸೇರಿಸುವುದು ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ಸ್ಥಾಪಿಸುವ ಬೇಡಿಕೆ ತೀವ್ರಗೊಂಡಿತು. ರಾಜ್ಯವ್ಯಾಪಿ ಮೈಸೂರು ಚಲೋ ಚಳವಳಿಯ ಪರಿಣಾಮವಾಗಿ ಮೈಸೂರು ಸಂಸ್ಥಾನ ಭಾರತ ಒಕ್ಕೂಟದೊಂದಿಗೆ ವಿಲೀನವಾಯಿತು. ಈ ಹೋರಾಟದಲ್ಲಿ ಹಲವರು ಬಂಧನ ಮತ್ತು ದಮನ ಎದುರಿಸಿದರು; ವಿದ್ಯಾರ್ಥಿ ರಾಮಸ್ವಾಮಿಯವರ ಬಲಿದಾನವೂ ಈ ಹೋರಾಟದ ಕರಾಳ ಅಧ್ಯಾಯವಾಗಿದೆ.



ಅವರ ತ್ಯಾಗದ ಫಲ – ನಮ್ಮ ಹೊಣೆಗಾರಿಕೆ

ಟಿಪ್ಪು ಸುಲ್ತಾನರ ಹೋರಾಟದಿಂದ ಹಿಡಿದು ಮೈಸೂರು ಚಲೋ ಚಳವಳಿಯ ಹುತಾತ್ಮರ ಬಲಿದಾನದವರೆಗೆ, ಮೈಸೂರು ನೆಲದ ಸ್ವಾತಂತ್ರ್ಯ ಪರಂಪರೆ ಸ್ವಾಭಿಮಾನ, ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ನ್ಯಾಯದ ಹೋರಾಟವಾಗಿದೆ. ಅವರ ತ್ಯಾಗದಿಂದ ದೊರೆತ ಸ್ವಾತಂತ್ರ್ಯವನ್ನು ಕಾಪಾಡುವುದು ನಮ್ಮ ಹೊಣೆ. ಜಾತಿ, ಧರ್ಮ, ಭಾಷೆ ಮತ್ತು ವರ್ಗದ ಭೇದಗಳನ್ನು ಮೀರಿ 'ನಾವೆಲ್ಲರೂ ಭಾರತೀಯರು' ಎಂಬ ಭಾವನೆಯೊಂದಿಗೆ ಸಮಾನತೆ, ನ್ಯಾಯ ಮತ್ತು ಸೌಹಾರ್ದತೆಯ ಭಾರತವನ್ನು ಕಟ್ಟೋಣ.



ಜೈ ಹಿಂದ್! ಜೈ ಕರ್ನಾಟಕ!

ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ

ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,

ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com







ಟಿಪ್ಪುವಿನ ತ್ಯಾಗದಿಂದ ಮೈಸೂರು ಚಲೋವರೆಗೆ
ಸ್ವಾತಂತ್ರ್ಯದ ಜ್ವಾಲೆ ಆರದ ನೆಲ

ಮೈಸೂರು



ಸ್ವಾತಂತ್ರ್ಯ ಹೋರಾಟದಲ್ಲಿ ಮೈಸೂರು

ಅವಿಭಜಿತ ಮೈಸೂರು ಜಿಲ್ಲೆಯ ಸ್ವಾತಂತ್ರ್ಯ ಪರಂಪರೆಗೆ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರ ಬ್ರಿಟಿಷ್ ವಿರೋಧಿ ಹೋರಾಟ ಬಲವಾದ ಅಡಿಪಾಯ ಹಾಕಿತು. ಅವರ ಪ್ರತಿರೋಧ ಮೈಸೂರು ನೆಲದಲ್ಲಿ ಸ್ವಾಭಿಮಾನ ಮತ್ತು ದೇಶಭಕ್ತಿಯ ಚಿಂತನೆಗೆ ದಾರಿ ಮಾಡಿಕೊಟ್ಟಿತು.

ಗಾಂಧೀಜಿಯವರ ಭೇಟಿ


ಖಾದಿ, ಹರಿಜನೋದ್ಧಾರ, ಅಸ್ಪೃಶ್ಯತಾ ನಿವಾರಣೆ ಮತ್ತು ರಾಷ್ಟ್ರೀಯ ಜಾಗೃತಿಗಾಗಿ ಗಾಂಧೀಜಿ ಮೈಸೂರು ಸಂಸ್ಥಾನಕ್ಕೆ ಹಲವು ಬಾರಿ ಭೇಟಿ ನೀಡಿದರು. ಅವರ ಪ್ರವಾಸಗಳು ಸ್ವದೇಶಿ ಮತ್ತು ಸ್ವಾತಂತ್ರ್ಯ ಚಳವಳಿಗೆ ಹೊಸ ವೇಗ ನೀಡಿದವು.

ಮೈಸೂರು ಚಲೋ

ಸ್ವಾತಂತ್ರ್ಯದ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಮತ್ತು ಭಾರತ ಒಕ್ಕೂಟಕ್ಕೆ ಸೇರ್ಪಡೆಗಾಗಿ ವಿದ್ಯಾರ್ಥಿಗಳು, ಕಾರ್ಮಿಕರು ಹಾಗೂ ಸಾರ್ವಜನಿಕರು ಬೃಹತ್ ಹೋರಾಟ ನಡೆಸಿದರು. ಈ ಜನಾಂದೋಲನವು ಮೈಸೂರಿನ ಪ್ರಜಾಪ್ರಭುತ್ವದ ಪಯಣಕ್ಕೆ ಮಹತ್ವದ ತಿರುವಾಯಿತು.

ಆದಿವಾಸಿ-ದಲಿತರ ಪಾಲ್ಗೊಳ್ಳುವಿಕೆ

ಚಾಮರಾಜನಗರ, ಗುಂಡ್ಲುಪೇಟೆ ಮತ್ತು ಕೊಳ್ಳೇಗಾಲ ಭಾಗಗಳಲ್ಲಿ ಸೋಲಿಗ, ಕಾಡು ಕುರುಬ ಹಾಗೂ ದಲಿತ ಸಮುದಾಯಗಳು ಅರಣ್ಯ ಶೋಷಣೆ ಮತ್ತು ಅನ್ಯಾಯದ ವಿರುದ್ಧ ಪ್ರತಿರೋಧಿಸಿದರು. ಸತ್ಯಾಗ್ರಹ, ಕರನಿರಾಕರಣೆ ಮತ್ತು ಸಾಮಾಜಿಕ ಸುಧಾರಣೆಯ ಚಳವಳಿಗಳು ಈ ಹೋರಾಟಕ್ಕೆ ಜನಪರ ಆಯಾಮ ನೀಡಿದವು.



ಪ್ರಮುಖ ಹೋರಾಟಗಾರರು

◢ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್

ಬ್ರಿಟಿಷರ ವಸಾಹತುಶಾಹಿಗೆ ಪ್ರಬಲ ಪ್ರತಿರೋಧ ಒಡ್ಡಿದ ಮೈಸೂರು ಸೇನಾನಿಗಳು. ಟಿಪ್ಪು ಸುಲ್ತಾನ್ ಮೈಸೂರಿಯನ್ ರಾಕೆಟ್‌ಗಳಂತಹ ಯುದ್ಧತಂತ್ರದ ಹೊಸತನದ ಜೊತೆಗೆ ಕೃಷಿ, ನೀರಾವರಿ, ರೇಷ್ಮೆ, ವ್ಯಾಪಾರ, ಶಿಕ್ಷಣ ಮತ್ತು ಆಡಳಿತ ಸುಧಾರಣೆಗಳಿಗೆ ಒತ್ತು ನೀಡಿದರು. 1799ರ ಮೇ 4ರಂದು ಶ್ರೀರಂಗಪಟ್ಟಣದಲ್ಲಿ ಹೋರಾಡುತ್ತಲೇ ವೀರಮರಣ ಹೊಂದಿದರು.



◢ ಎಚ್. ಸಿ. ದಾಸಪ್ಪ

ವಕೀಲ ವೃತ್ತಿ ತೊರೆದು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ ಗಾಂಧಿವಾದಿ ನಾಯಕ. ಶಿವಪುರ ಧ್ವಜ ಸತ್ಯಾಗ್ರಹ ಮತ್ತು ಮೈಸೂರು ಚಲೋ ಚಳವಳಿಗಳಲ್ಲಿ ಪ್ರಮುಖ ಪಾತ್ರ ವಹಿಸಿದರು. ಸ್ವಾತಂತ್ರ್ಯಾನಂತರ ಕೇಂದ್ರ ರೈಲ್ವೆ ಸಚಿವರಾಗಿಯೂ ಸೇವೆ ಸಲ್ಲಿಸಿದರು.



◢ ಯಶೋಧರಮ್ಮ ದಾಸಪ್ಪ

ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಸಾವಿರಾರು ಮಹಿಳೆಯರನ್ನು ಸಂಘಟಿಸಿದ ಧೀರ ನಾಯಕಿ. ಕ್ವಿಟ್ ಇಂಡಿಯಾ ಮತ್ತು ಮೈಸೂರು ಚಲೋ ಚಳವಳಿಗಳಲ್ಲಿ ಭಾಗವಹಿಸಿ ಸೆರೆವಾಸ ಅನುಭವಿಸಿದರು. ಸಾಮಾಜಿಕ ಸೇವೆ ಮತ್ತು ಮಹಿಳಾ ಸಬಲೀಕರಣಕ್ಕೂ ಮಹತ್ವದ ಕೊಡುಗೆ ನೀಡಿದರು.

◢ ಎಂ. ಎನ್. ಜೋಯಿಸ್

'ಮೈಸೂರಿನ ಸಿಂಹ' ಎಂದೇ ಪ್ರಸಿದ್ಧರಾದ ಸ್ವಾತಂತ್ರ್ಯ ಹೋರಾಟಗಾರ, ಸಂಘಟಕ ಮತ್ತು ಶಿಕ್ಷಣತಜ್ಞ. ಜವಾಬ್ದಾರಿ ಸರ್ಕಾರದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು.



◢ ಎಂ. ವೆಂಕಟ ಕೃಷ್ಣಯ್ಯ – 'ತಾತಯ್ಯ'

'ಮೈಸೂರಿನ ಶಿಕ್ಷಣತಜ್ಞ, ಪತ್ರಕರ್ತ ಮತ್ತು ಸಮಾಜ ಸುಧಾರಕ. ಪತ್ರಿಕೋದ್ಯಮ, ಶಿಕ್ಷಣ ಮತ್ತು ಬಡ-ಹಿಂದುಳಿದವರ ಸೇವೆಯಲ್ಲಿ ಜೀವನವನ್ನೇ ಮುಡಿಪಾಗಿಟ್ಟರು. ಗಾಂಧೀಜಿ ಅವರನ್ನು 'ಮೈಸೂರಿನ ಭೀಷ್ಮ' ಎಂದು ಗೌರವಿಸಿದ್ದರು. ತಾತಯ್ಯ ಎಂದೇ ಪ್ರಸಿದ್ಧರಾದ ಸ್ವಾತಂತ್ರ್ಯ ಹೋರಾಟಗಾರ, ಸಂಘಟಕ ಮತ್ತು ಶಿಕ್ಷಣತಜ್ಞ. ಜವಾಬ್ದಾರಿ ಸರ್ಕಾರದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು.

◢ ಬಿ. ರಾಚಯ್ಯ

ದಲಿತ ಮತ್ತು ಹಿಂದುಳಿದ ಸಮುದಾಯಗಳ ಶೈಕ್ಷಣಿಕ-ಸಾಮಾಜಿಕ ಅಭಿವೃದ್ಧಿಗಾಗಿ ಶ್ರಮಿಸಿದ ಪ್ರಮುಖ ನಾಯಕ. ಸ್ವಾತಂತ್ರ್ಯ ಹೋರಾಟದ ಜೊತೆಗೆ ರಾಜ್ಯ ಮತ್ತು ರಾಷ್ಟ್ರೀಯ ರಾಜಕೀಯದಲ್ಲೂ ಸೇವೆ ಸಲ್ಲಿಸಿದರು.





ಧ್ವಜದಿಂದ ವಿಮೋಚನೆಯವರೆಗೆ

1947ರ ಆಗಸ್ಟ್ 15ರಂದು ಭಾರತ ಸ್ವತಂತ್ರವಾದರೂ ನಿಜಾಮನ ಆಡಳಿತ ಮುಂದುವರಿದಿತ್ತು. ಕೊಪ್ಪಳ, ಕಿನ್ನಾಳ, ಯಲಬುರ್ಗಾ, ಕುಕನೂರು, ನವಲಿ ಮತ್ತು ಕುಷ್ಟಗಿಯಲ್ಲಿ ಜನರು ರಾಷ್ಟ್ರೀಯ ಧ್ವಜ ಹಾರಿಸಿ ಭಾರತದೊಂದಿಗೆ ತಮ್ಮ ಏಕತೆಯನ್ನು ಘೋಷಿಸಿದರು.

ರಜಾಕಾರರ ದಮನದ ನಡುವೆಯೂ ಹೋರಾಟಗಾರರು ಹಿಂದೆ ಸರಿಯಲಿಲ್ಲ. ಗಡಿ ಶಿಬಿರಗಳು ಸಂಘಟಿತ ಪ್ರತಿರೋಧದ ಕೇಂದ್ರಗಳಾಗಿ ಬೆಳೆದವು.ರಾಯಚೂರು-ಕೊಪ್ಪಳದ ಹೋರಾಟವು ಕೇವಲ ರಾಜಕೀಯ ವಿಮೋಚನೆಯಲ್ಲ; ಅದು ಸ್ವಾಭಿಮಾನ, ರಾಷ್ಟ್ರೀಯ ಏಕತೆ ಮತ್ತು ಜನರ ಹಕ್ಕುಗಳ ಹೋರಾಟವೂ ಆಗಿತ್ತು.

ಒಂದು ಧ್ವಜ, ಒಂದು ದೇಶ, ಒಂದು ಸಂಕಲ್ಪ





ಅವರ ಕನಸಿನ ಭಾರತ ನಮ್ಮ ಹೊಣೆ

ಕೊಪ್ಪಳ ಕೋಟೆಯಲ್ಲಿ ಮೊಳಗಿದ ಪ್ರತಿರೋಧದ ರಣಕಹಳೆಯಿಂದ ಹಿಡಿದು, ನಿಜಾಮ-ರಜಾಕಾರರ ವಿರುದ್ಧ ಧ್ವಜ ಹಿಡಿದು ನಿಂತ ಸಾಮಾನ್ಯ ಜನರವರೆಗೆ ರಾಯಚೂರು-ಕೊಪ್ಪಳದ ಸ್ವಾತಂತ್ರ್ಯಗಾಥೆ ತ್ಯಾಗ, ಧೈರ್ಯ ಮತ್ತು ಏಕತೆಯ ಕಥೆ.

ಪಂಡಿತ್ ತಾರಾನಾಥರ ಶಿಕ್ಷಣದ ಜಾಗೃತಿ, ಭೀಮರಾಯರ ಶೌರ್ಯ, ಶಿವಮೂರ್ತಿಸ್ವಾಮಿಯವರ ಸಂಘಟನಾ ಶಕ್ತಿ ಮತ್ತು ನಜೀರ್ ಸಾಬ್ ಅವರಂತಹವರ ಮಾನವೀಯತೆ ಈ ಹೋರಾಟದ ವಿಭಿನ್ನ ಮುಖಗಳನ್ನು ಪರಿಚಯಿಸುತ್ತವೆ.

ಅವರು ಜಾತಿ, ಧರ್ಮ, ಭಾಷೆಯ ಭೇದಗಳನ್ನು ಮೀರಿ 'ಭಾರತೀಯರು' ಎಂಬ ಒಂದೇ ಗುರುತಿನಡಿ ನಿಂತರು.

ಅವರ ತ್ಯಾಗವನ್ನು ನೆನಪಿಸಿಕೊಳ್ಳುವುದಷ್ಟೇ ಅಲ್ಲ — ಅವರು ಕನಸು ಕಂಡ ನ್ಯಾಯಯುತ, ಸಮಾನತೆಯ ಮತ್ತು ಸೌಹಾರ್ದತೆಯ ಭಾರತವನ್ನು ಕಟ್ಟುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ.

ಜೈ ಹಿಂದ್! ಜೈ ಕರ್ನಾಟಕ!


ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ

ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,

ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com

ರಾಯಚೂರು

ಕೃಷ್ಣಾ–ತುಂಗಭದ್ರೆಯ ನೆಲದಲ್ಲಿ ಸ್ವಾತಂತ್ರ್ಯದ ರಣಕಹಳೆ



ಸ್ವಾತಂತ್ರ್ಯ ಹೋರಾಟದಲ್ಲಿ ಜಿಲ್ಲೆಯ ಪಾತ್ರ

ಹಳೆಯ ರಾಯಚೂರು ಜಿಲ್ಲೆಯ ಸ್ವಾತಂತ್ರ್ಯಗಾಥೆ 1857ಕ್ಕೂ ಮುನ್ನವೇ ಆರಂಭವಾಗಿತ್ತು. 1819ರಲ್ಲಿ ಕೊಪ್ಪಳದ ವೀರಪ್ಪ ದೇಸಾಯಿ ಬ್ರಿಟಿಷರ ವಿರುದ್ಧ 500ಕ್ಕೂ ಹೆಚ್ಚು ಜನರನ್ನು ಸಂಘಟಿಸಿ ಬಂಡೆದ್ದರು.

1857ರ ಬಂಡಾಯದ ಪ್ರತಿಧ್ವನಿಯಾಗಿ ಮುಂಡರಗಿ ಭೀಮರಾಯರು ಮತ್ತು ಹಮ್ಮಿಗಿ ಕೆಂಚನಗೌಡರು 1858ರಲ್ಲಿ ಕೊಪ್ಪಳ ಕೋಟೆಯನ್ನು ಬ್ರಿಟಿಷ್ ವಿರೋಧಿ ಪ್ರತಿರೋಧದ ಕೇಂದ್ರವನ್ನಾಗಿ ಮಾಡಿಕೊಂಡು ಕೊನೆಯವರೆಗೂ ಹೋರಾಡಿದರು.

ನಿಜಾಮನ ಆಡಳಿತದ ನೆರಳಿನಲ್ಲಿದ್ದ ಈ ಭಾಗದಲ್ಲಿ ಪಂಡಿತ್ ತಾರಾನಾಥರು ಶಿಕ್ಷಣವನ್ನೇ ರಾಷ್ಟ್ರೀಯ ಜಾಗೃತಿಯ ಅಸ್ತ್ರವನ್ನಾಗಿ ಮಾಡಿಕೊಂಡರು. 1920ರಲ್ಲಿ ಸ್ಥಾಪಿಸಿದ ಹಮ್‌ದರ್ದ್ ರಾಷ್ಟ್ರೀಯ ಶಾಲೆ ಯುವಜನರಲ್ಲಿ ಸ್ವರಾಜ್ಯ ಮತ್ತು ಸಾಮಾಜಿಕ ಸುಧಾರಣೆಯ ಚಿಂತನೆ ಬೆಳೆಸಿತು.

1947ರಲ್ಲಿ ಭಾರತ ಸ್ವತಂತ್ರವಾದರೂ ಹೈದರಾಬಾದ್ ಸಂಸ್ಥಾನ ಇನ್ನೂ ವಿಲೀನವಾಗಿರಲಿಲ್ಲ. ರಾಯಚೂರು-ಕೊಪ್ಪಳದ ಜನರು ರಾಷ್ಟ್ರೀಯ ಧ್ವಜ ಹಾರಿಸಿ, ರಜಾಕಾರರ ದಮನ ಎದುರಿಸಿ, ಗಡಿ ಶಿಬಿರಗಳ ಮೂಲಕ ಪ್ರತಿರೋಧ ಸಂಘಟಿಸಿದರು.

1819ರ ಬಂಡಾಯದಿಂದ 1948ರ ವಿಮೋಚನೆಯವರೆಗೆ — ಈ ನೆಲದ ಹೋರಾಟ ಸ್ವರಾಜ್ಯದಿಂದ ಏಕೀಕರಣದವರೆಗೆ ಸಾಗಿದ ಜನಗಾಥೆ.



ರಾಯಚೂರು-ಕೊಪ್ಪಳದ ಹೋರಾಟದ ಮುಂಚೂಣಿಯ ನಾಯಕರು

➤ ಮುಂಡರಗಿ ಭೀಮರಾಯರು

ಕೊಪ್ಪಳ ಕೋಟೆಯ ವೀರ ಬಂಡುಕೋರ

ಶಿಕ್ಷಣ ಮತ್ತು ಸಮಾಜಸೇವೆಯನ್ನು ರಾಷ್ಟ್ರೀಯ ಜಾಗೃತಿಯೊಂದಿಗೆ ಬೆಸೆದ ನಾಯಕ. 1921ರಲ್ಲಿ ಅಸಹಕಾರ ಚಳವಳಿಗೆ ಸೇರಿ, ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಶಾಲೆ ಸ್ಥಾಪಿಸಿದರು.

➤ ಪಂಡಿತ್ ತಾರಾನಾಥ

ಶಿಕ್ಷಣದ ಮೂಲಕ ರಾಷ್ಟ್ರೀಯ ಜಾಗೃತಿ

ಹಮ್‌ದರ್ದ್ ರಾಷ್ಟ್ರೀಯ ಶಾಲೆಯ ಮೂಲಕ ಶಿಕ್ಷಣ, ಸ್ವರಾಜ್ಯ ಮತ್ತು ಸಾಮಾಜಿಕ ಸುಧಾರಣೆಯ ಚಿಂತನೆಗಳನ್ನು ಯುವಜನರಲ್ಲಿ ಬೆಳೆಸಿದ ರಾಷ್ಟ್ರೀಯವಾದಿ.

➤ ಶಿವಮೂರ್ತಿಸ್ವಾಮಿ ಅಳವಂಡಿ

ವಿಮೋಚನೆಯ ಸೇನಾನಿ

ನಿಜಾಮ-ರಜಾಕಾರರ ವಿರುದ್ಧ ಗಡಿ ಶಿಬಿರಗಳ ಹೋರಾಟವನ್ನು ಸಂಘಟಿಸಿ, ಹೈದರಾಬಾದ್ ವಿಮೋಚನೆ, ಕರ್ನಾಟಕ ಏಕೀಕರಣ ಮತ್ತು ರೈತರ ಹಕ್ಕುಗಳ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು.

➤ ಪಂಚಾಕ್ಷರಿ ಹಿರೇಮಠ

ಯುವ ಹೋರಾಟಗಾರ

ವಿದ್ಯಾರ್ಥಿಯಾಗಿದ್ದಾಗಲೇ ಹೈದರಾಬಾದ್ ವಿಮೋಚನಾ ಚಳವಳಿಗೆ ಧುಮುಕಿ, ರಜಾಕಾರರ ವಿರುದ್ಧ ಹೋರಾಡಿದರು. ಕನ್ನಡ, ಉರ್ದು ಮತ್ತು ಹಿಂದಿ ಭಾಷೆಗಳ ಮೂಲಕ ರಾಷ್ಟ್ರೀಯ ಏಕತೆಯ ಸಂದೇಶ ಸಾರಿದರು.

➤ ಕಾಶಿರಾವ್ ಪಟೇಲ್ ವಟಗಲ್

ಧೈರ್ಯದ ಪ್ರತೀಕ

ವಿದ್ಯಾರ್ಥಿ ದಶೆಯಲ್ಲಿಯೇ ವಿಮೋಚನಾ ಹೋರಾಟಕ್ಕೆ ಧುಮುಕಿ, ಜೈಲು ಶಿಕ್ಷೆ ಅನುಭವಿಸಿದರು. ರಜಾಕಾರರಿಂದ ತಪ್ಪಿಸಿಕೊಳ್ಳುವ ಸಂದರ್ಭದಲ್ಲಿ ಅವರಿಗೆ ಆಶ್ರಯ ನೀಡಿದ ಮುಸ್ಲಿಂ ಶಿಕ್ಷಕ ನಜೀರ್ ಸಾಬ್ ಅವರ ಮಾನವೀಯತೆ ಈ ಹೋರಾಟದ ಸೌಹಾರ್ದ ಮುಖವನ್ನು ತೋರಿಸುತ್ತದೆ.



ಪ್ರಮುಖ ಐತಿಹಾಸಿಕ ಸಂಗತಿಗಳು

1819ರ ವೀರಪ್ಪ ದೇಸಾಯಿ ಬಂಡಾಯ – ಆರಂಭಿಕ ರಣಕಹಳೆ

ಕೊಪ್ಪಳದ ವೀರಪ್ಪ ದೇಸಾಯಿ ಸ್ಥಳೀಯ ಜನರನ್ನು ಸಂಘಟಿಸಿ ಬ್ರಿಟಿಷ್ ಪ್ರಭುತ್ವಕ್ಕೆ ಸವಾಲು ಹಾಕಿದರು. ಕೊಪ್ಪಳ ಕೋಟೆಯನ್ನು ವಶಪಡಿಸಿಕೊಂಡು ಪ್ರತಿರೋಧದ ಕೇಂದ್ರವನ್ನಾಗಿ ಮಾಡಿಕೊಂಡರು. ಬ್ರಿಟಿಷ್-ನಿಜಾಮನ ಸಂಯುಕ್ತ ಪಡೆಗಳ ವಿರುದ್ಧ ಕೊನೆಯವರೆಗೂ ಹೋರಾಡಿದ ಅವರ ಬಂಡಾಯವು ಮುಂದಿನ ಪ್ರತಿರೋಧಗಳಿಗೆ ಸ್ಫೂರ್ತಿಯಾಯಿತು.

ಕೊಪ್ಪಳ ಕೋಟೆ – 1858ರ ಕೊನೆಯ ಕಾಳಗ

1857ರ ಬಂಡಾಯದ ಸಂದರ್ಭದಲ್ಲಿ ಭೀಮರಾಯರು ಮತ್ತು ಕೆಂಚನಗೌಡರು ಕೊಪ್ಪಳ ಕೋಟೆಯಲ್ಲಿ ಬ್ರಿಟಿಷರ ವಿರುದ್ಧ ಸಶಸ್ತ್ರ ಹೋರಾಟ ನಡೆಸಿದರು. ಕೋಟೆ ಕೊನೆಗೆ ಬ್ರಿಟಿಷರ ವಶವಾದರೂ, ಅವರ ಪ್ರತಿರೋಧ ಕರ್ನಾಟಕದ ಸ್ವಾತಂತ್ರ್ಯ ಇತಿಹಾಸದಲ್ಲಿ ಅಚ್ಚಳಿಯದ ಗುರುತು ಮೂಡಿಸಿತು.

ನಗರ ದಂಗೆ — ರೈತರ ಸ್ವಾತಂತ್ರ್ಯದ ಕಹಳೆ

1830–31 ತೆರಿಗೆ ವಿರುದ್ಧದ ಜನಬಂಡಾಯ


ಬ್ರಿಟಿಷರು ಮತ್ತು ಮೈಸೂರು ಆಡಳಿತದ ಅತಿಯಾದ ತೆರಿಗೆ ಹಾಗೂ ರೈತರ ಮೇಲಿನ ಶೋಷಣೆ ನಗರ ಪ್ರಾಂತದಲ್ಲಿ ಆಕ್ರೋಶದ ಕಿಡಿ ಹೊತ್ತಿಸಿತು.

ಕುಂಸಿಯ ರೈತ ಸಾದರ ಮಲ್ಲಪ್ಪ, ತನ್ನನ್ನು ಕೆಳದಿ ರಾಜವಂಶದ ಬಸಪ್ಪ ನಾಯಕನೆಂದು ಘೋಷಿಸಿಕೊಂಡು, ಬಿದನೂರನ್ನು ಕೇಂದ್ರವನ್ನಾಗಿ ಮಾಡಿಕೊಂಡು ರೈತರನ್ನು ಸಶಸ್ತ್ರ ಹೋರಾಟಕ್ಕೆ ಸಂಘಟಿಸಿದರು.

ದಂಗೆ ಹರಡಿತು

ಹೊಸನಗರ, ಸಾಗರ, ತೀರ್ಥಹಳ್ಳಿ, ಹೊನ್ನಾಳಿ, ತರೀಕೆರೆ ಸೇರಿದಂತೆ ಹಲವು ಪ್ರದೇಶಗಳಲ್ಲಿ ರೈತರು ಮತ್ತು ಪಾಳೇಗಾರರು ಹೋರಾಟಕ್ಕೆ ಕೈಜೋಡಿಸಿದರು. ಹೋರಾಟವು 1830ರ ಕೊನೆಯಿಂದ 1831ರ ಮಧ್ಯಭಾಗದವರೆಗೆ ತೀವ್ರವಾಗಿತ್ತು. ನೂರಾರು ಜನರು ಪ್ರಾಣ ಕಳೆದುಕೊಂಡರು. ಹೊನ್ನಾಳಿಯಲ್ಲಿ 99 ಮಂದಿಗೆ ಗಲ್ಲು ಶಿಕ್ಷೆ ಜಾರಿಗೊಂಡಿತು. ಬಸಪ್ಪ ನಾಯಕನನ್ನು ಕೊನೆಗೆ ಬ್ರಿಟಿಷರು ಬಂಧಿಸಿ, 1834ರ ಮಾರ್ಚ್ 18ರಂದು ಶಿವಮೊಗ್ಗದಲ್ಲಿ ಸಾರ್ವಜನಿಕವಾಗಿ ಗಲ್ಲಿಗೇರಿಸಿದರು.

- ಕೋಟೆಗಳಿಗೆ ಮುತ್ತಿಗೆ
- ತೆರಿಗೆ ವಿರೋಧ
- ಗೆರಿಲ್ಲಾ ಹೋರಾಟ





ಈಸೂರು ದಂಗೆಯ ಮಹಿಳಾ ದನಿಗಳು:

ಸಿದ್ಧಮ್ಮ , ಹಾಲಮ್ಮ ಮತ್ತು ಪಾರ್ವತಮ್ಮ ಸೇರಿದಂತೆ ಹಲವು ಮಹಿಳಾ ಹೋರಾಟಗಾರರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. 1946ರಲ್ಲಿ ಈ ಮೂವರನ್ನು ಬಿಡುಗಡೆಗೊಳಿಸಲಾಯಿತು.

ಧೋಂಡಿಯಾ ವಾಘ್‌ನ ಗೆರಿಲ್ಲಾ ಹೋರಾಟದಿಂದ,
ಬಸಪ್ಪ ನಾಯಕನ ರೈತ ದಂಗೆಯವರೆಗೆ,
ಕನ್ನೇಶ್ವರ ರಾಮನ ಜನಪರ ಹೋರಾಟದಿಂದ,
ಈಸೂರಿನ **"ಸ್ವತಂತ್ರ ಹಳ್ಳಿ"** ಘೋಷಣೆಯವರೆಗೆ

ಶಿವಮೊಗ್ಗದ ನೆಲ ಅನ್ಯಾಯದ ವಿರುದ್ಧ ಧ್ವನಿ ಎತ್ತುವುದನ್ನು ಎಂದಿಗೂ ಮರೆತಿರಲಿಲ್ಲ... ಮರೆಯುವುದಿಲ್ಲ. ಇದು ಕೇವಲ ಸ್ವಾತಂತ್ರ್ಯದ ಇತಿಹಾಸವಲ್ಲ. ಇದು ಧೈರ್ಯ, ತ್ಯಾಗ, ರೈತ ಹಕ್ಕು ಮತ್ತು ಜನಶಕ್ತಿಯ ಇತಿಹಾಸ.


**"ಹೋರಾಟದ ನೆನಪು ಉಳಿಯಲಿ
ಸ್ವಾತಂತ್ರ್ಯದ ಮೌಲ್ಯ ಬೆಳೆಯಲಿ.**

ಜೈ ಹಿಂದ್! ಜೈ ಕರ್ನಾಟಕ!

ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ

ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,

ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com



ಸ್ವಾತಂತ್ರ್ಯ ಹೋರಾಟದಲ್ಲಿ ಜಿಲ್ಲೆಯ ಪಾತ್ರ

ಶಿವಮೊಗ್ಗದ ಮಲೆನಾಡು ಬ್ರಿಟಿಷ್ ವಿರೋಧಿ ಸಶಸ್ತ್ರ ಹೋರಾಟ, ರೈತ ಬಂಡಾಯ ಮತ್ತು ಗಾಂಧಿವಾದಿ ಚಳವಳಿಗಳ ಪ್ರಮುಖ ನೆಲೆಯಾಗಿತ್ತು.

1799–1800ರಲ್ಲಿ ಧೋಂಡಿಯಾ ವಾಘ್ ಶಿವಮೊಗ್ಗ, ಹೊನ್ನಾಳಿ, ಚನ್ನಗಿರಿ ಮತ್ತು ಬಿದನೂರು ಭಾಗಗಳಲ್ಲಿ ಬ್ರಿಟಿಷರ ವಿರುದ್ಧ ಗೆರಿಲ್ಲಾ ಹೋರಾಟ ನಡೆಸಿದರು.

ನಂತರ 1830–31ರ ನಗರ ದಂಗೆಯಲ್ಲಿ ಬಸಪ್ಪನಾಯಕ ರೈತರನ್ನು ಸಂಘಟಿಸಿ ತೆರಿಗೆ ದಬ್ಬಾಳಿಕೆಯ ವಿರುದ್ಧ ಸಶಸ್ತ್ರ ಹೋರಾಟ ನಡೆಸಿದರು. ಈ ಹೋರಾಟದಲ್ಲಿ ನೂರಾರು ಜನರು ಪ್ರಾಣ ಕಳೆದುಕೊಂಡರು.

20ನೇ ಶತಮಾನದಲ್ಲಿ ಕನ್ನೇಶ್ವರ ರಾಮ ಬ್ರಿಟಿಷರು ಮತ್ತು ಸ್ಥಳೀಯ ಶೋಷಕರ ವಿರುದ್ಧ ಹೋರಾಡಿ ಬಡ ರೈತರಿಗೆ ನೆರವಾದ ಜನನಾಯಕನಾಗಿ ಜನಪದದಲ್ಲಿ "ಮಲೆನಾಡಿನ ರಾಬಿನ್ ಹುಡ್" ಎಂದೇ ಪ್ರಸಿದ್ಧರಾದರು.

1942 — ಈಸೂರು ದಂಗೆ

ಶಿಕಾರಿಪುರ ತಾಲೂಕಿನ ಈಸೂರು ಗ್ರಾಮವು "ಸ್ವತಂತ್ರ ಹಳ್ಳಿ" ಎಂದು ಘೋಷಿಸಿಕೊಂಡು ಬ್ರಿಟಿಷರಿಗೆ ತೆರಿಗೆ ನೀಡಲು ನಿರಾಕರಿಸಿತು.

ಈ ಹೋರಾಟದಲ್ಲಿ ಐವರು ವೀರರು ಗಲ್ಲಿಗೇರಿದರು. ನೂರಾರು ಜನರು ಬಂಧನ ಮತ್ತು ಜೈಲು ಶಿಕ್ಷೆ ಅನುಭವಿಸಿದರು. ಸೊರಬದ ಅರಣ್ಯ ಸತ್ಯಾಗ್ರಹ, ತೀರ್ಥಹಳ್ಳಿಯ ಕರ ನಿರಾಕರಣೆ ಮತ್ತು 1939ರ ತರೀಕೆರೆ-ಶಿವಮೊಗ್ಗ ಧ್ವಜ ಸತ್ಯಾಗ್ರಹಗಳು ಜಿಲ್ಲೆಯ ಹೋರಾಟಕ್ಕೆ ಮತ್ತಷ್ಟು ಬಲ ನೀಡಿದವು.

ಕಾಡಿನಿಂದ ಹಳ್ಳಿಯವರೆಗೆ
ರೈತರಿಂದ ವಿದ್ಯಾರ್ಥಿಗಳವರೆಗೆ
ಸ್ವಾತಂತ್ರ್ಯದ ಕಿಡಿ ಎಲ್ಲೆಡೆ ಹೊತ್ತಿತ್ತು





ಶಿವಮೊಗ್ಗದ ಸ್ವಾತಂತ್ರ್ಯದ ಮುಂಚೂಣಿಯವರು

◢ ಕನ್ನೇಶ್ವರ ರಾಮ

ಮಲೆನಾಡಿನ ರಾಬಿನ್ ಹುಡ್.

ಬ್ರಿಟಿಷರು ಮತ್ತು ಸ್ಥಳೀಯ ಶೋಷಕರ ವಿರುದ್ಧ ಹೋರಾಡಿ, ಬಡ ರೈತರಿಗೆ ಹಣ-ಧಾನ್ಯ ಹಂಚಿದ ಜನನಾಯಕ. ಕೊನೆಗೆ ಬ್ರಿಟಿಷರಿಂದ ಬಂಧಿತರಾಗಿ ಗಲ್ಲಿಗೇರಿದರು.

◢ ಬಸಪ್ಪ ನಾಯಕ

ನಗರ ದಂಗೆಯ ರೈತ ನಾಯಕ

ಕೆಳದಿ ರಾಜವಂಶದ ಉತ್ತರಾಧಿಕಾರಿಯೆಂದು ಘೋಷಿಸಿಕೊಂಡು, ರೈತರ ಮೇಲಿನ ತೆರಿಗೆ ದಬ್ಬಾಳಿಕೆಯ ವಿರುದ್ಧ 1830–31ರಲ್ಲಿ ಸಶಸ್ತ್ರ ದಂಗೆಗೆ ನೇತೃತ್ವ ನೀಡಿದರು

◢ ಧೋಂಡಿಯಾ ವಾಘ್

ಮಲೆನಾಡಿನ ಗೆರಿಲ್ಲಾ ಸೇನಾನಿ.

1799–1800ರಲ್ಲಿ ಬ್ರಿಟಿಷರ ವಿರುದ್ಧ ಸೈನ್ಯ ಸಂಘಟಿಸಿ ಹಲವು ಕೋಟೆಗಳನ್ನು ವಶಪಡಿಸಿಕೊಂಡರು. ಅರಣ್ಯ ಮತ್ತು ಬೆಟ್ಟಗಳನ್ನು ಬಳಸಿಕೊಂಡು ಬ್ರಿಟಿಷರ ವಿರುದ್ಧ ಗೆರಿಲ್ಲಾ ಯುದ್ಧ ನಡೆಸಿ 1800ರಲ್ಲಿ ಹುತಾತ್ಮರಾದರು.

◢ ಈಸೂರಿನ ವೀರರು

"ಏಸೂರ ಕೊಟ್ಟರೂ ಈಸೂರು ಕೊಡೆವು"


ಬ್ರಿಟಿಷ್ ಅಧಿಕಾರಿಗಳನ್ನು ಗ್ರಾಮಕ್ಕೆ ಪ್ರವೇಶಿಸಲು ಬಿಡದೆ ಸ್ವಾತಂತ್ರ್ಯ ಘೋಷಿಸಿದ ಈಸೂರಿನ ಹೋರಾಟಗಾರರಲ್ಲಿ ಗುರುಪ್ಪ, ಮಲ್ಲಪ್ಪ, ಸೂರ್ಯ ನಾರಾಯಣ ಆಚಾರ್, ಹಾಲಪ್ಪ ಮತ್ತು ಶಂಕರಪ್ಪ ಗಲ್ಲಿಗೇರಿ ಅಮರರಾದರು.

> **“ ಗಲ್ಲಿನ ನೆರಳಿನಿಂದ ಸ್ವಾತಂತ್ರ್ಯದ ಬೆಳಕಿನವರೆಗೆ**
> **ಈಸೂರಿನ ಹೋರಾಟವನ್ನು ಬದುಕಿ ಹೇಳಿದ ಸಾಕ್ಷಿ.**

◢ ಎನ್. ಎಸ್. ಹುಚ್ಚರಾಯಪ್ಪ

ಈಸೂರು ಹೋರಾಟದ ಕೊನೆಯ ಜೀವಂತ ಸಾಕ್ಷಿ.

ಗಲ್ಲು ಶಿಕ್ಷೆಯಿಂದ ಜೀವಾವಧಿ ಶಿಕ್ಷೆಗೆ ಬದಲಾಗಿದ್ದು, ಹಲವು ವರ್ಷ ಜೈಲು ಅನುಭವಿಸಿದರು. ಸ್ವಾತಂತ್ರ್ಯದ ನಂತರ ಬಿಡುಗಡೆಯಾಗಿ, ಈಸೂರು ಹೋರಾಟದ ಜೀವಂತ ನೆನಪಾಗಿ ಉಳಿದರು.



> **“ ಒಬ್ಬ ರೈತನ ಧೈರ್ಯ...**
> **ಸಾವಿರಾರು ರೈತರ ಬಂಡಾಯ.**

◢ ಕಾಗೋಡು ಗಣಪತಿಯಪ್ಪ

ಸ್ವಾತಂತ್ರ್ಯ ಹೋರಾಟದಿಂದ ರೈತ ಹೋರಾಟದವರೆಗೆ.

ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಯುವಕರನ್ನು ರಾಷ್ಟ್ರೀಯ ಚಳವಳಿಗೆ ಸಂಘಟಿಸಿದರು. ಸ್ವಾತಂತ್ರ್ಯಾನಂತರ ಕಾಗೋಡು ರೈತ ಸತ್ಯಾಗ್ರಹದ ಮೂಲಕ ರೈತರ ಹಕ್ಕುಗಳಿಗಾಗಿ ಹೋರಾಡಿದರು.

◢ ಕುಮುದ್ವತಿ ಗೌಡಮ್ಮ

ಈಸೂರು ದಂಗೆಯ ಧೀರ ಮಹಿಳೆ.

ಬ್ರಿಟಿಷರ ಲಾಠಿ ಪ್ರಹಾರಕ್ಕೂ ಹೆದರದೆ ಈಸೂರು ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

◢ ಎಸ್. ಪೊನ್ನಮ್ಮಾಳ್

ಕ್ವಿಟ್ ಇಂಡಿಯಾ ಚಳವಳಿಯ ಧೀರ ನಾಯಕಿ.

ಮಹಿಳೆಯರನ್ನು ಸಂಘಟಿಸಿ ಕರಪತ್ರ, ರಹಸ್ಯ ಸಭೆ, ಮೆರವಣಿಗೆ, ವಿದೇಶಿ ವಸ್ತುಗಳ ಬಹಿಷ್ಕಾರ ಮತ್ತು ಮದ್ಯದಂಗಡಿ ಪಿಕೆಟಿಂಗ್‌ಗಳಲ್ಲಿ ಮುಂಚೂಣಿಯಲ್ಲಿದ್ದರು. ಜೈಲು ಶಿಕ್ಷೆಯನ್ನೂ ಧೈರ್ಯದಿಂದ ಎದುರಿಸಿದರು.





ತುಮಕೂರಿಗೆ ಗಾಂಧೀಜಿಯವರ ಎರಡು ಐತಿಹಾಸಿಕ ಭೇಟಿಗಳು


ಮಹಾತ್ಮ ಗಾಂಧೀಜಿಯವರ 1927 ಮತ್ತು 1934ರ ತುಮಕೂರು ಭೇಟಿಗಳು ಜಿಲ್ಲೆಯ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ವೇಗ ನೀಡಿದವು.

1927 — ಖಾದಿ ಮತ್ತು ಸ್ವದೇಶಿಯ ಕರೆಗೆ

1927ರ ಜುಲೈ 16ರಂದು ಗಾಂಧೀಜಿಯವರು ತುಮಕೂರಿಗೆ ಭೇಟಿ ನೀಡಿ ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು. ವಿದೇಶಿ ಬಟ್ಟೆ ಬಹಿಷ್ಕಾರ, ಚರಕ ಮತ್ತು ಖಾದಿಯ ಮಹತ್ವವನ್ನು ಜನರಿಗೆ ತಿಳಿಸಿದರು. ಅವರ ಕರೆಗೆ ಸ್ಪಂದಿಸಿದ ಜನರು ವಿದೇಶಿ ಬಟ್ಟೆಗಳನ್ನು ತ್ಯಜಿಸಿ ಸ್ವದೇಶಿಯ ಸಂಕಲ್ಪ ಕೈಗೊಂಡರು.
ಶ್ರೀ ಸಿದ್ಧಗಂಗಾ ಮಠದ ಅನ್ನ-ಅಕ್ಷರ ದಾಸೋಹ ಮತ್ತು ಜಾತಿಭೇದವಿಲ್ಲದ ಸೇವಾ ಪರಂಪರೆಯನ್ನೂ ಗಾಂಧೀಜಿಯವರು ಮೆಚ್ಚಿಕೊಂಡರು.

1934 — ಅಸ್ಪೃಶ್ಯತಾ ನಿರ್ಮೂಲನೆ ಮತ್ತು ಸಮಾನತೆಯ ಸಂದೇಶ

1934ರ ಜನವರಿ 4ರಂದು ಗಾಂಧೀಜಿಯವರು ಮತ್ತೊಮ್ಮೆ ತುಮಕೂರು ಜಿಲ್ಲೆಗೆ ಆಗಮಿಸಿದರು. ಈ ಬಾರಿ ಅವರ ಉದ್ದೇಶ ಅಸ್ಪೃಶ್ಯತೆ ನಿರ್ಮೂಲನೆ ಮತ್ತು ಹರಿಜನೋದ್ಧಾರ. ದಲಿತ ವಸತಿ ಪ್ರದೇಶಗಳಿಗೆ ಭೇಟಿ ನೀಡಿ ಅವರ ಸಮಸ್ಯೆಗಳನ್ನು ಆಲಿಸಿದ ಅವರು, ಶಿಕ್ಷಣ, ಸಾರ್ವಜನಿಕ ಬಾವಿ ಮತ್ತು ದೇವಾಲಯ ಪ್ರವೇಶದಂತಹ ಸಮಾನ ಹಕ್ಕುಗಳಿಗಾಗಿ ಜನರಲ್ಲಿ ಜಾಗೃತಿ ಮೂಡಿಸಿದರು.
ಹರಿಜನ ಸೇವಕ ಸಂಘಕ್ಕಾಗಿ ನಡೆದ ನಿಧಿ ಸಂಗ್ರಹದಲ್ಲಿ ತುಮಕೂರಿನ ಮಹಿಳೆಯರು ತಮ್ಮ ಆಭರಣಗಳನ್ನೂ ದಾನ ಮಾಡಿದರು.



ಎರಡು ಭೇಟಿಗಳು... ಸಾವಿರಾರು ಮನಸ್ಸುಗಳಲ್ಲಿ ಬದಲಾವಣೆ.

ಗಾಂಧೀಜಿಯವರ ಭೇಟಿಯ ನಂತರ ತುಮಕೂರಿನಲ್ಲಿ ಖಾದಿ, ಸ್ವದೇಶಿ, ಮಹಿಳಾ ಜಾಗೃತಿ ಮತ್ತು ಸಾಮಾಜಿಕ ಸಮಾನತೆಯ ಚಳವಳಿಗಳು ಮತ್ತಷ್ಟು ಬಲಗೊಂಡವು

1942 — ಮಧುಗಿರಿಯ ಕ್ರಾಂತಿಯ ಕಹಳೆ

ಕ್ವಿಟ್ ಇಂಡಿಯಾ ಚಳವಳಿಯ ಸಂದರ್ಭದಲ್ಲಿ ಸ್ಥಳೀಯ ನಾಯಕರ ಬಂಧನದ ಸುದ್ದಿ ಮಧುಗಿರಿಯಲ್ಲಿ ಆಕ್ರೋಶದ ಅಲೆ ಎಬ್ಬಿಸಿತು. ಆಗಸ್ಟ್ 9 ಮತ್ತು 10ರಂದು ಮಧುಗಿರಿಯಲ್ಲಿ ಹರತಾಳ, ಬೃಹತ್ ಸಭೆಗಳು ಮತ್ತು ಪ್ರತಿಭಟನೆಗಳು ನಡೆದವು. ನಾಯಕತ್ವದ ಕೊರತೆಯ ನಡುವೆಯೂ ಜನರು ಸ್ವಯಂಪ್ರೇರಿತರಾಗಿ ಬೀದಿಗಿಳಿದರು. ಯುವಕರು ಬ್ರಿಟಿಷರ ಸಂಪರ್ಕ ವ್ಯವಸ್ಥೆಗೆ ಸವಾಲೆಸೆದು ಟೆಲಿಗ್ರಾಫ್ ತಂತಿಗಳನ್ನು ಕಡಿತಗೊಳಿಸುವುದು, ಸರ್ಕಾರಿ ಕಚೇರಿಗಳ ವಿರುದ್ಧ ಪ್ರತಿಭಟನೆ ಮತ್ತು ಭೂಗತ ಚಟುವಟಿಕೆಗಳನ್ನು ನಡೆಸಿದರು.
ಮಹಿಳೆಯರು, ವಿದ್ಯಾರ್ಥಿಗಳು ಮತ್ತು ಕಾಂಗ್ರೆಸ್ ಕಾರ್ಯಕರ್ತರೂ ಪೊಲೀಸ್ ದೌರ್ಜನ್ಯ ಹಾಗೂ ಬಂಧನದ ಬೆದರಿಕೆಯನ್ನು ಲೆಕ್ಕಿಸದೆ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು.

ಮಧುಗಿರಿಯ ಹೋರಾಟದ ಪ್ರಮುಖ ಹೆಸರುಗಳು

ಕೆ. ಹೆಂಜಾರಪ್ಪ & ಮಾಳಿ ಮರಿಯಪ್ಪ: ಹರತಾಳ ಮತ್ತು ಸಾರ್ವಜನಿಕ ಸಭೆಗಳ ಮೂಲಕ ಜನರನ್ನು ಸಂಘಟಿಸಿದ ಯುವ ನಾಯಕರು.
ಎಂ. ಜಿ. ನಾರಾಯಣ ರಾವ್: ಬ್ರಿಟಿಷರ ಆದಾಯ ವ್ಯವಸ್ಥೆಯ ವಿರುದ್ಧ ಉಗ್ರ ಪ್ರತಿಭಟನೆಯಲ್ಲಿ ಪಾಲ್ಗೊಂಡ ಕ್ರಾಂತಿಕಾರಿ.
ಎನ್. ವಿ. ಕೃಷ್ಣಮಾಚಾರಿ: ಟೆಲಿಗ್ರಾಫ್ ಮತ್ತು ಸಂಪರ್ಕ ವ್ಯವಸ್ಥೆಯ ವಿರುದ್ಧದ ಭೂಗತ ಕಾರ್ಯಾಚರಣೆಗಳಲ್ಲಿ ಸಕ್ರಿಯ.
ಆರ್. ಎಸ್. ಆರಾಧ್ಯ: ರಹಸ್ಯ ಜಾಲದ ಮೂಲಕ ಯುವಕರಿಗೆ ಕರಪತ್ರ ಮತ್ತು ಸಂದೇಶಗಳನ್ನು ತಲುಪಿಸಿದ ಸಂಘಟಕ.

ಇತಿಹಾಸದ ನಂಟಿನಲ್ಲಿ ನಾಳೆಯ ಬೆಳಕು

ತುಮಕೂರಿನ ಸ್ವಾತಂತ್ರ್ಯ ಹೋರಾಟವು ಕೇವಲ ಬ್ರಿಟಿಷರ ವಿರುದ್ಧದ ರಾಜಕೀಯ ಹೋರಾಟವಾಗಿರಲಿಲ್ಲ. ಅದು ಗಾಂಧೀಜಿಯವರ ಅಹಿಂಸೆ, ಖಾದಿ ಮತ್ತು ಸ್ವದೇಶಿ; ಮಧುಗಿರಿಯ ಯುವಕರ ಧೈರ್ಯ; ಸಿದ್ಧಗಂಗೆಯ ದಾಸೋಹ; ಮಹಿಳೆಯರ ತ್ಯಾಗ ಮತ್ತು ಸಾಮಾಜಿಕ ಸಮಾನತೆಯ ಕನಸುಗಳ ಸಂಗಮವಾಗಿತ್ತು. ನಾವು ಇಂದು ಅನುಭವಿಸುವ ಸ್ವಾತಂತ್ರ್ಯ ಮತ್ತು ಹಕ್ಕುಗಳು ನಮ್ಮ ಪೂರ್ವಜರ ತ್ಯಾಗ, ಶ್ರಮ ಮತ್ತು ಧೈರ್ಯದ ಫಲ. ಅವರು ಜಾತಿ, ಧರ್ಮ ಮತ್ತು ಭಾಷೆಯ ಗಡಿಗಳನ್ನು ಮೀರಿ "ನಾವು ಭಾರತೀಯರು" ಎಂಬ ಒಂದೇ ಭಾವನೆಯಿಂದ ಹೋರಾಡಿದರು.

ಜೈ ಹಿಂದ್! ಜೈ ಕರ್ನಾಟಕ!

ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ


ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,
ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com





ತುಮಕೂರು

ಹೋರಾಟದ ಜೊತೆ ಜಾಗೃತಿಯ ಹೆಜ್ಜೆ





ಸ್ವಾತಂತ್ರ್ಯ ಹೋರಾಟದಲ್ಲಿ ಜಿಲ್ಲೆಯ ಪಾತ್ರ

ತುಮಕೂರು ಜಿಲ್ಲೆ ಸ್ವಾತಂತ್ರ್ಯ ಹೋರಾಟದಲ್ಲಿ ಸತ್ಯಾಗ್ರಹ, ವಿದ್ಯಾರ್ಥಿ ಚಳವಳಿ, ಸ್ವದೇಶಿ ಮತ್ತು ಸಾಮಾಜಿಕ ಸುಧಾರಣೆಯ ಪ್ರಮುಖ ಕೇಂದ್ರವಾಗಿತ್ತು.

ಕ್ವಿಟ್ ಇಂಡಿಯಾ — ಯುವಕರ ಪ್ರತಿರೋಧ

1942ರ ಕ್ವಿಟ್ ಇಂಡಿಯಾ ಚಳವಳಿಯ ಸಂದರ್ಭದಲ್ಲಿ ತುಮಕೂರು, ತಿಪಟೂರು ಮತ್ತು ಮಧುಗಿರಿಗಳಲ್ಲಿ ವಿದ್ಯಾರ್ಥಿಗಳು ಹಾಗೂ ಯುವಕರು ಬೃಹತ್ ಪ್ರತಿಭಟನೆಗಳನ್ನು ನಡೆಸಿದರು.

ಬ್ರಿಟಿಷರ ಸಂಪರ್ಕ ವ್ಯವಸ್ಥೆಗೆ ಸವಾಲೆಸೆದು, ಟೆಲಿಗ್ರಾಫ್ ತಂತಿ ಕಡಿತ, ರೈಲ್ವೇ ಹಳಿಗಳ ಅಡ್ಡಿಪಡಿಸುವಿಕೆ ಮತ್ತು ಸರ್ಕಾರಿ ಕಚೇರಿಗಳ ವಿರುದ್ಧ ಪ್ರತಿಭಟನೆಗಳಂತಹ ಕಾರ್ಯಾಚರಣೆಗಳು ನಡೆದವು. ನಾಯಕರ ಬಂಧನದ ವಿರುದ್ಧ ಮಧುಗಿರಿಯಲ್ಲೂ ಜನರು ಬೀದಿಗಿಳಿದರು.

ಮೈಸೂರು ಚಲೋ

ಭಾರತ ಸ್ವಾತಂತ್ರ್ಯ ಪಡೆದ ನಂತರ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿಯುತ ಸರ್ಕಾರಕ್ಕಾಗಿ ನಡೆದ **"ಮೈಸೂರು ಚಲೋ"** ಚಳವಳಿಗೂ ತುಮಕೂರಿನ ನಾಯಕರು ಮತ್ತು ಸತ್ಯಾಗ್ರಹಿಗಳು ಕೈಜೋಡಿಸಿದರು. ಅನೇಕರು ಜೈಲುವಾಸ ಅನುಭವಿಸಿದರು.

ಸ್ವಾತಂತ್ರ್ಯದ ಜೊತೆಗೆ ಸಾಮಾಜಿಕ ಜಾಗೃತಿ

ಗಾಂಧೀಜಿಯವರ ಸ್ವದೇಶಿ, ಖಾದಿ, ಅಸ್ಪೃಶ್ಯತಾ ನಿರ್ಮೂಲನೆ ಮತ್ತು ಮದ್ಯಪಾನ ನಿಷೇಧದಂತಹ ಕಾರ್ಯಕ್ರಮಗಳಿಗೆ ಜಿಲ್ಲೆಯಲ್ಲಿ ವ್ಯಾಪಕ ಬೆಂಬಲ ದೊರೆಯಿತು. ಶ್ರೀ ಸಿದ್ಧಗಂಗಾ ಮಠ ಸೇರಿದಂತೆ ಹಲವು ಸಂಸ್ಥೆಗಳು ಜಾತಿ-ಭೇದವಿಲ್ಲದೆ ಅನ್ನ, ವಸತಿ ಮತ್ತು ಶಿಕ್ಷಣದ ಮೂಲಕ ಸಾಮಾಜಿಕ ಸಮಾನತೆಯ ಬೀಜ ಬಿತ್ತಿದವು.

"ಸ್ವಾತಂತ್ರ್ಯಕ್ಕಾಗಿ ಹೋರಾಟ
ಸಮಾಜದ ಜಾಗೃತಿಗಾಗಿ ಸೇವೆ."

ಹೋರಾಟ • ಶಿಕ್ಷಣ • ಸಮಾನತೆ • ಸ್ವದೇಶಿ

ಇವುಗಳ ಸಂಗಮವೇ ತುಮಕೂರಿನ ಸ್ವಾತಂತ್ರ್ಯ ಹೋರಾಟದ ಹೆಗ್ಗುರುತು.

ತುಮಕೂರಿನ ಸ್ವಾತಂತ್ರ್ಯದ ಮುಂಚೂಣಿಯವರು

◢ ಕೆ. ರಂಗ ಅಯ್ಯಂಗಾರ್

ವಕೀಲ, ಪತ್ರಕರ್ತ ಮತ್ತು ರಾಷ್ಟ್ರೀಯ ಚಳವಳಿಯ ಸಂಘಟಕ.

ಗಾಂಧೀಜಿಯವರ ತುಮಕೂರು-ಮಧುಗಿರಿ ಪ್ರವಾಸದ ಪ್ರಮುಖ ಸಂಘಟಕರಾಗಿ ಜನರನ್ನು ರಾಷ್ಟ್ರೀಯ ಚಳವಳಿಗೆ ಒಗ್ಗೂಡಿಸಿದರು. ಮೈಸೂರು ಕ್ರಾನಿಕಲ್ ಮೂಲಕ ಬ್ರಿಟಿಷರ ನೀತಿಗಳನ್ನು ಪ್ರಶ್ನಿಸಿ, ಕಾಂಗ್ರೆಸ್ ಸಂಘಟನೆ ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

◢ ತಾಳೇಕೆರೆ ಸುಬ್ರಹ್ಮಣ್ಯಂ

ಒಂಬತ್ತು ಬಾರಿ ಜೈಲು ಸೇರಿದ ಹೋರಾಟದ ಧೀಮಂತ ನಾಯಕ.

ಅಸಹಕಾರ ಚಳವಳಿಯಿಂದ ಮೈಸೂರು ಚಲೋವರೆಗೆ ತುಮಕೂರು ಮತ್ತು ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ರೈತರು, ಕಾರ್ಮಿಕರು ಹಾಗೂ ದಲಿತರನ್ನು ಸಂಘಟಿಸಿದರು. ಸ್ವದೇಶಿ, ಅಸ್ಪೃಶ್ಯತಾ ನಿವಾರಣೆಯನ್ನೂ ಹೋರಾಟದ ಭಾಗವನ್ನಾಗಿಸಿದರು.

◢ ಡಿ. ಎಸ್. ಮಲ್ಲಪ್ಪ

ಗಾಂಧಿವಾದಿ ಚಿಂತನೆಯ ಜನಸಂಘಟಕ.

ಗಾಂಧೀಜಿಯವರ ಭೇಟಿಗಳಿಂದ ಪ್ರೇರಿತರಾಗಿ ತುಮಕೂರು ಕಾಂಗ್ರೆಸ್ ಸಮಿತಿಯ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ರಾಷ್ಟ್ರೀಯ ಚಳವಳಿ ಮತ್ತು ರಚನಾತ್ಮಕ ಕಾರ್ಯಕ್ರಮಗಳನ್ನು ಬಲಪಡಿಸಿದರು. ನಾಗರಿಕ ಅಸಹಕಾರ ಚಳವಳಿಗೂ ಜನಬೆಂಬಲ ಒಗ್ಗೂಡಿಸಿದರು.

◢ ಜಿ. ವಿ. ಸೀತಮ್ಮ

ಕ್ವಿಟ್ ಇಂಡಿಯಾ ಚಳವಳಿಯ ಧೀರ ಮಹಿಳಾ ನಾಯಕಿ.

1942ರಲ್ಲಿ ತುಮಕೂರಿನಲ್ಲಿ ಮಹಿಳೆಯರನ್ನು ಸಂಘಟಿಸಿ ಬೃಹತ್ ಮೆರವಣಿಗೆಗಳನ್ನು ಮುನ್ನಡೆಸಿದರು. ಬ್ರಿಟಿಷರ ಬಂಧನ ಮತ್ತು ಜೈಲುವಾಸವನ್ನೂ ಧೈರ್ಯದಿಂದ ಎದುರಿಸಿ, ಅನೇಕ ಮಹಿಳೆಯರಿಗೆ ಸ್ಫೂರ್ತಿಯಾದರು.

ಇವರು ಹೋರಾಟವನ್ನು
ಜನರ ಮನೆಬಾಗಿಲಿಗೆ ತಂದರು.

ನಾಯಕತ್ವ • ತ್ಯಾಗ
ಮಹಿಳಾ ಶಕ್ತಿ • ಜನಸಂಘಟನೆ

ತುಮಕೂರಿನ ಈ ವೀರರ ಹೆಜ್ಜೆಗಳು
ಸ್ವಾತಂತ್ರ್ಯದ ಹಾದಿಯನ್ನು ಗಟ್ಟಿಗೊಳಿಸಿದವು.

◢ ಲಕ್ಷ್ಮಮ್ಮ

ಗ್ರಾಮೀಣ ಮಹಿಳಾ ಶಕ್ತಿಯನ್ನು ಸಂಘಟಿಸಿದ ಹೋರಾಟಗಾರ್ತಿ.

ತುರುವೇಕೆರೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಧ್ವಜ ಸತ್ಯಾಗ್ರಹ ಹಾಗೂ ಅಸಹಕಾರ ಚಳವಳಿಗೆ ಮಹಿಳೆಯರನ್ನು ಒಗ್ಗೂಡಿಸಿದರು. ಮನೆಮನೆಗೆ ತೆರಳಿ ಗ್ರಾಮೀಣ ಮಹಿಳೆಯರಲ್ಲಿ ದೇಶಭಕ್ತಿಯ ಕಿಡಿ ಹೊತ್ತಿಸಿದರು.

◢ ಸಾವಿತ್ರಮ್ಮ

ಸ್ವದೇಶಿ ಮತ್ತು ಮದ್ಯಪಾನ ವಿರೋಧಿ ಹೋರಾಟದ ಮುಂಚೂಣಿ.

ವಿದೇಶಿ ಬಟ್ಟೆಗಳ ಬಹಿಷ್ಕಾರಕ್ಕೆ ನೇತೃತ್ವ ನೀಡಿ, ಹೆಂಡದ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿದರು. ಸಾಮಾಜಿಕ ವಿರೋಧ ಮತ್ತು ಬಂಧನದ ಭಯವನ್ನೂ ಲೆಕ್ಕಿಸದೆ ಕಾಯ್ದೆಭಂಗ ಚಳವಳಿಯಲ್ಲಿ ಭಾಗವಹಿಸಿದರು.

◢ ಕೆ. ಕಮಲಮ್ಮ

ರಹಸ್ಯ ಸಂದೇಶಗಳ ಧೀರ ಕಾರ್ಯಕರ್ತೆ.

ಖಾದಿ ಮತ್ತು ಸ್ವದೇಶಿ ಪ್ರಚಾರದ ಜೊತೆಗೆ, ಬ್ರಿಟಿಷರ ಕಣ್ಣು ತಪ್ಪಿಸಿ ಹೋರಾಟಗಾರರಿಗೆ ರಹಸ್ಯ ಪತ್ರಗಳು, ಸಂದೇಶಗಳು ಮತ್ತು ಕರಪತ್ರಗಳನ್ನು ತಲುಪಿಸಿದರು. ಅವರ ಗುಪ್ತ ಕಾರ್ಯಾಚರಣೆಗಳು ಹೋರಾಟಗಾರರ ನಡುವಿನ ಸಂಪರ್ಕಕ್ಕೆ ಸೇತುವೆಯಾದವು.





ಜಂಗಲ್ ಸತ್ಯಾಗ್ರಹ — ಕಾಡಿನ ಬದುಕಿನ ಹೋರಾಟ

1930ರ ಆಗಸ್ಟ್‌ನಲ್ಲಿ ಶಿರಸಿ, ಸಿದ್ದಾಪುರ ಮತ್ತು ಯಲ್ಲಾಪುರಗಳಲ್ಲಿ ಅರಣ್ಯ ಸತ್ಯಾಗ್ರಹ ಆರಂಭವಾಯಿತು.

ಉರುವಲು ಸಂಗ್ರಹ, ಹುಲ್ಲು ಕತ್ತರಿಸುವುದು ಮತ್ತು ಜಾನುವಾರು ಮೇಯಿಸುವುದರ ಮೇಲಿನ ಬ್ರಿಟಿಷರ ನಿರ್ಬಂಧವನ್ನು ಜನರು ಧಿಕ್ಕರಿಸಿದರು.

ಗುಂಪುಗುಂಪಾಗಿ ಕಾಡಿಗೆ ತೆರಳಿ ಮರ ಕಡಿದು, ಕಟ್ಟಿಗೆಯನ್ನು ಸಾರ್ವಜನಿಕವಾಗಿ ಹರಾಜು ಹಾಕುವ ಮೂಲಕ “ಈ ಕಾಡು ನಮ್ಮ ಬದುಕಿನ ಭಾಗ” ಎಂಬ ಸಂದೇಶ ಸಾರಿದರು.

ಮಹಿಳೆಯರೂ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿ, ನಾಯಕರ ಬಂಧನದ ನಂತರವೂ ಚಳವಳಿಯನ್ನು ಮುಂದುವರಿಸಿದರು.

ಅಂಕೋಲಾ ಉಪ್ಪಿನ ಸತ್ಯಾಗ್ರಹ

“1930ರ ಏಪ್ರಿಲ್ 13. ಅಂಕೋಲಾ — ಪೂಜಗೇರಿ.
ಮೂರು ಕಲ್ಲಿನ ಒಲೆ.
ಕುದಿಯುತ್ತಿದ್ದ ಸಮುದ್ರದ ನೀರು.
ನೋಡುತ್ತಿದ್ದ ಸಾವಿರಾರು ಜನ.
ನೀರು ಆವಿಯಾಗಿ...
ಕೆಳಗೆ ಉಳಿದದ್ದು — ಉಪ್ಪು!”

ಇದು ಬ್ರಿಟಿಷರ ಉಪ್ಪಿನ ಕಾನೂನಿಗೆ ಜನರು ನೀಡಿದ ನೇರ ಉತ್ತರ.

ಮೊದಲ ಚೀಲ ಉಪ್ಪನ್ನು ಸ್ಥಳೀಯ ಹೊನ್ನಪ್ಪ ದೇವಿ ನಾಯಕ್ ಅವರು 30ರೂ.ಗಳಿಗೆ ಹರಾಜಿನಲ್ಲಿ ಖರೀದಿಸಿದರು.

ಸ್ಥಳೀಯ ನಾಯಕರು ಮತ್ತು ಕಾಂಗ್ರೆಸ್ ಕಾರ್ಯಕರ್ತರ ಸಂಘಟನೆಯಿಂದ ಆರಂಭವಾದ ಈ ಚಳವಳಿ ಅಂಕೋಲಾದ ಹಳ್ಳಿಹಳ್ಳಿಗೂ ಹರಡಿತು.

ಉತ್ತರ ಕನ್ನಡವನ್ನು ಕರ್ನಾಟಕದ ಬಾರ್ದೋಲಿಯಾಗಿಸಿದ ಸಿದ್ದಾಪುರದ ಕರ ನಿರಾಕರಣಾ ಚಳವಳಿ (1931)

ಗುಜರಾತಿನ ಬಾರ್ದೋಲಿ ಸತ್ಯಾಗ್ರಹದ ಯಶಸ್ಸಿನ ಬಳಿಕ, ಕರ್ನಾಟಕದ ಸಿದ್ದಾಪುರ ಸೇರಿದಂತೆ ನಾಲ್ಕು ತಾಲ್ಲೂಕುಗಳಲ್ಲಿ 'ಕರ ನಿರಾಕರಣಾ ಚಳವಳಿ (ಸಾರಾಬಂದಿ)' ಆರಂಭವಾಯಿತು.

ಸಿದ್ದಾಪುರ ಮತ್ತು ಅಂಕೋಲಾದ ರೈತರು ಭೂ ಕಂದಾಯ ಪಾವತಿಸಲು ನಿರಾಕರಿಸಿ ಬ್ರಿಟಿಷರ ವಿರುದ್ಧ ದೃಢ ಪ್ರತಿರೋಧ ತೋರಿದರು. ಇದಕ್ಕೆ ಪ್ರತಿಯಾಗಿ ಬ್ರಿಟಿಷ್ ಸರ್ಕಾರ ರೈತರ ಜಮೀನು, ಜಾನುವಾರು ಹಾಗೂ ಮನೆಬಳಕೆಯ ವಸ್ತುಗಳನ್ನು ಜಪ್ತಿ ಮಾಡಿ ಹರಾಜು ಹಾಕಿತು. ಈ ಹೋರಾಟದ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಯ ನೂರಾರು ಸ್ವಾತಂತ್ರ್ಯ ಹೋರಾಟಗಾರರು ಬಂಧನಕ್ಕೊಳಗಾಗಿ ಜೈಲು ಸೇರಿದರು. ಗ್ರಾಮೀಣ ಮಹಿಳೆಯರೂ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ದಮನವನ್ನು ಎದುರಿಸಿದರು.

ಸಿದ್ದಾಪುರ ಗೌರಮ್ಮ, ಸುಬ್ಬಮ್ಮ ಮತ್ತು ಕಾವೇರಮ್ಮ ಮುಂತಾದ ಮಹಿಳೆಯರು ಪೊಲೀಸ್ ದೌರ್ಜನ್ಯ, ಆಸ್ತಿ ಜಪ್ತಿ ಮತ್ತು ಜೈಲು ಶಿಕ್ಷೆಗಳನ್ನು ಎದುರಿಸಿ ಹೋರಾಟಕ್ಕೆ ಬಲ ತುಂಬಿದರು. ಸಿದ್ದಾಪುರದ ಈ ಕರ ನಿರಾಕರಣಾ ಚಳವಳಿ ಉತ್ತರ ಕನ್ನಡದ ಸ್ವಾತಂತ್ರ್ಯ ಹೋರಾಟದ ಪ್ರಮುಖ ಅಧ್ಯಾಯವಾಗಿ ಉಳಿದಿದೆ.

ಇತಿಹಾಸದ ದೀವಿಗೆಯಲ್ಲಿ ಭವಿಷ್ಯದ ಬೆಳಕು

ಅಂಕೋಲಾದ ಉಪ್ಪಿನ ಕಣದಿಂದ ಶಿರಸಿಯ ಕಾಡಿನವರೆಗೆ ಉತ್ತರ ಕನ್ನಡ ಜಿಲ್ಲೆಯ ಪ್ರತಿಯೊಂದು ಹೋರಾಟವೂ ಸ್ವಾತಂತ್ರ್ಯ, ಸ್ವಾಭಿಮಾನ, ಐಕ್ಯತೆ ಮತ್ತು ಬದುಕಿನ ಹಕ್ಕಿನ ಕಥೆ.

ಈ ನೆಲದ ಜನರು ಜಾತಿ, ಧರ್ಮ ಮತ್ತು ಭಾಷೆಯ ಗಡಿಗಳನ್ನು ಮೀರಿ “ನಾವು ಭಾರತೀಯರು” ಎಂಬ ಒಂದೇ ಭಾವನೆಯಿಂದ ಹೋರಾಡಿದರು.

ಇಂದು ನಾವು ಅನುಭವಿಸುವ ಸ್ವಾತಂತ್ರ್ಯ ಮತ್ತು ಹಕ್ಕುಗಳು ಅವರ ತ್ಯಾಗ ಮತ್ತು ಹೋರಾಟದ ಫಲ.

ನಮ್ಮ ಸಂವಿಧಾನ ಸಾರುವ ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವವನ್ನು ಕಾಪಾಡುವುದೇ ಆ ವೀರರಿಗೆ ಸಲ್ಲಿಸುವ ನಿಜವಾದ ಗೌರವ.

ಅವರ ಹೋರಾಟವನ್ನು ನೆನಪಿಸಿಕೊಳ್ಳೋಣ.
ಅವರ ಮೌಲ್ಯಗಳನ್ನು ಬದುಕೋಣ.
ಸಮಾನತೆಯ ಭಾರತವನ್ನು ಕಟ್ಟೋಣ.

ಜೈ ಹಿಂದ್! ಜೈ ಕರ್ನಾಟಕ!

ಸ್ವಾತಂತ್ರ್ಯ ಪ್ರೇಮಿಗಳ ಗಮನಕ್ಕೆ

ಇಲ್ಲಿ ನೀಡಲಾಗಿರುವ ಮಾಹಿತಿಯು, ಪ್ರತಿ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಕೊಡುಗೆಯ ಒಂದು ಪಕ್ಷಿನೋಟವಷ್ಟೇ. ಸ್ಥಳಾವಕಾಶ ಮತ್ತು ಅಧಿಕೃತ ದಾಖಲೆಗಳ ಕೊರತೆಯಿಂದ ಕೆಲವು ಪ್ರಮುಖ ಸಂಗತಿಗಳು ಬಿಟ್ಟುಹೋಗಿರಬಹುದು. ಹಾಗೆಯೇ, ನೈಜ ಚಿತ್ರಗಳು ಸಿಗದಿದ್ದಲ್ಲಿ AI ನೆರವಿನಿಂದ ತಯಾರಿಸಿದ ಚಿತ್ರಗಳನ್ನು ಬಳಸಲಾಗಿದೆ. ನಿಮ್ಮ ಬಳಿ ಅಧಿಕೃತ ಆಧಾರಗಳೊಂದಿಗೆ ಹೆಚ್ಚಿನ ಮಾಹಿತಿಯಿದ್ದರೆ,

ದಯವಿಟ್ಟು ನಮಗೆ ಇ-ಮೇಲ್ ಮಾಡಿ: freedomkarnataka@gmail.com





ಉತ್ತರ ಕನ್ನಡ

ಕರ್ನಾಟಕದ ಬಾರ್ದೋಲಿ





ಸ್ವಾತಂತ್ರ್ಯ ಹೋರಾಟದಲ್ಲಿ ಜಿಲ್ಲೆಯ ಪಾತ್ರ

ಉತ್ತರ ಕನ್ನಡದ ಸ್ವಾತಂತ್ರ್ಯ ಹೋರಾಟವು ಉಪ್ಪಿನ ಸತ್ಯಾಗ್ರಹದಿಂದ ಅರಣ್ಯ ಹಕ್ಕುಗಳವರೆಗೆ ಜನಜೀವನದ ಪ್ರತಿಯೊಂದು ಹಂತವನ್ನೂ ಒಳಗೊಂಡಿತ್ತು.

ಅಂಕೋಲಾ — ಉಪ್ಪಿನ ಸತ್ಯಾಗ್ರಹದ ಕಹಳೆ

1930ರಲ್ಲಿ ಅಂಕೋಲಾದಲ್ಲಿ ನಡೆದ ಐತಿಹಾಸಿಕ ಉಪ್ಪಿನ ಸತ್ಯಾಗ್ರಹ ಸಾವಿರಾರು ಜನರನ್ನು ಒಗ್ಗೂಡಿಸಿತು. ವಿದೇಶಿ ವಸ್ತುಗಳ ಬಹಿಷ್ಕಾರ, ಕರನಿರಾಕರಣೆ ಮತ್ತು ಪಿಕೆಟಿಂಗ್‌ಗಳ ಮೂಲಕ ಜನರು ಬ್ರಿಟಿಷ್ ಆಡಳಿತಕ್ಕೆ ಸವಾಲು ಹಾಕಿದರು.
ಈ ಹೋರಾಟದ ವ್ಯಾಪಕ ಜನಬೆಂಬಲದಿಂದ ಉತ್ತರ ಕನ್ನಡಕ್ಕೆ “ಕರ್ನಾಟಕದ ಬಾರ್ಡೋಲಿ” ಎಂಬ ಹೆಗ್ಗಳಿಕೆ ದೊರೆಯಿತು

ಕಾಡಿನ ಹಕ್ಕಿಗಾಗಿ ಅರಣ್ಯ ಸತ್ಯಾಗ್ರಹ

ಶಿರಸಿ, ಸಿದ್ದಾಪುರ ಮತ್ತು ಯಲ್ಲಾಪುರಗಳಲ್ಲಿ ನಡೆದ ಜಂಗಲ್ ಸತ್ಯಾಗ್ರಹ ಕೇವಲ ಬ್ರಿಟಿಷರ ವಿರುದ್ಧದ ಹೋರಾಟವಾಗಿರಲಿಲ್ಲ ಅದು ಜನರ ಕಾಡು, ಹುಲ್ಲುಗಾವಲು, ಉರುವಲು ಮತ್ತು ಜೀವನೋಪಾಯದ ಹಕ್ಕಿನ ಹೋರಾಟವೂ ಆಗಿತ್ತು.
ರೈತರು, ಗಿರಿಜನರು, ಮಹಿಳೆಯರು ಮತ್ತು ಸಾಮಾನ್ಯ ಜನರು ಒಗ್ಗಟ್ಟಾಗಿ ಬ್ರಿಟಿಷರ ಅರಣ್ಯ ಕಾಯಿದೆಗಳನ್ನು ಧಿಕ್ಕರಿಸಿದರು.

ಜನರ ಒಗ್ಗಟ್ಟಿನ ಹೋರಾಟ

ಹಾಲಕ್ಕಿ ಒಕ್ಕಲಿಗರು, ಕುಂಬ್ರಿ ಮರಾಠರು, ಸಿದ್ದಿ ಸಮುದಾಯ, ರೈತರು ,ಮಹಿಳೆಯರು, ವಿದ್ಯಾರ್ಥಿಗಳು ಎಲ್ಲರೂ ತಮ್ಮದೇ ರೀತಿಯಲ್ಲಿ ಸ್ವಾತಂತ್ರ್ಯ ಚಳವಳಿಗೆ ಬಲ ನೀಡಿದರು.

“ಕಾಡಿನ ಹಕ್ಕಿನಿಂದ ದೇಶದ ಸ್ವಾತಂತ್ರ್ಯದವರೆಗೆ ಉತ್ತರ ಕನ್ನಡ ಹೋರಾಡಿತು.”

ಉತ್ತರ ಕನ್ನಡದ ಸ್ವಾತಂತ್ರ್ಯದ ಮುಂಚೂಣಿಯವರು

■ ಕಾಣೇ ಬೊಮ್ಮಕ್ಕ

13ರ ಹರೆಯದಲ್ಲೇ ಬ್ರಿಟಿಷ್ ಆಡಳಿತಕ್ಕೆ ಸವಾಲೆಸೆದ ಧೀರ ಬಾಲಕಿ.

ದಟ್ಟ ಅರಣ್ಯ ಮತ್ತು ಬೆಟ್ಟದ ದುರ್ಗಮ ಹಾದಿಯಲ್ಲಿ ಕಿಲೋಮೀಟರ್‌ಗಳಷ್ಟು ನಡೆದು ಕಾರವಾರ ತಲುಪಿ, ಬ್ರಿಟಿಷ್ ಗವರ್ನರ್ ಎದುರು ಕಪ್ಪು ಬಾವುಟ ಪ್ರದರ್ಶಿಸಿದರು. ಬಂಧನಕ್ಕೂ ಹೆದರದ ಅವರ ಧೈರ್ಯ ಯುವಜನತೆಗೆ ಸ್ಫೂರ್ತಿಯಾಯಿತು.

■ ಚೌಡ ನಾಯ್ಕ ಮತ್ತು ತಿಮ್ಮಪ್ಪ ನಾಯ್ಕ

ಅರಣ್ಯ ಹಕ್ಕುಗಳ ಹೋರಾಟದ ಮುಂಚೂಣಿಯ ಗಿರಿಜನ ನಾಯಕರು.

ಬ್ರಿಟಿಷರ ಅರಣ್ಯ ಕಾಯಿದೆ ಮತ್ತು ಶೋಷಣೆಯನ್ನು ವಿರೋಧಿಸಿ ಸ್ಥಳೀಯರನ್ನು ಸಂಘಟಿಸಿದರು. ಅವರ ಪ್ರತಿರೋಧ ಮುಂದಿನ ಅರಣ್ಯ ಸತ್ಯಾಗ್ರಹಗಳಿಗೆ ಬಲವಾದ ನೆಲೆಯಾಯಿತು.

■ ಎಂ. ಪಿ. ನಾಡಕರ್ಣಿ

ಅಂಕೋಲಾ ಉಪ್ಪಿನ ಸತ್ಯಾಗ್ರಹದ ಪ್ರಮುಖ ನಾಯಕ.

1930ರಲ್ಲಿ ಸಾವಿರಾರು ಜನರ ಸಮ್ಮುಖದಲ್ಲಿ ಉಪ್ಪಿನ ಕಾನೂನು ಉಲ್ಲಂಘನೆಗೆ ನೇತೃತ್ವ ನೀಡಿದರು. ಅಂಕೋಲಾದಿಂದ ಹಳ್ಳಿಹಳ್ಳಿಗೆ ಹೋರಾಟವನ್ನು ವಿಸ್ತರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

■ ತಿಮ್ಮಪ್ಪ ನಾಯಕ ಮಾಸ್ತರ

ಹಳ್ಳಿಹಳ್ಳಿಗೆ ಸ್ವಾತಂತ್ರ್ಯದ ಸಂದೇಶ ಕೊಂಡೊಯ್ದ ಸಂಘಟಕ.

ಅಂಕೋಲಾ ಉಪ್ಪಿನ ಸತ್ಯಾಗ್ರಹಕ್ಕಾಗಿ ಗ್ರಾಮೀಣ ಜನರನ್ನು ಸಂಘಟಿಸಿದರು. ಮೊದಲ ಹಂತದಲ್ಲೇ ಉಪ್ಪು ತಯಾರಿಸಿ ಮಾರಾಟ ಮಾಡಿದ ಸತ್ಯಾಗ್ರಹಿಗಳ ತಂಡದಲ್ಲಿ ಭಾಗವಹಿಸಿದರು.

■ ಡಾ. ಎನ್. ಬಿ. ಕಬ್ಬೂರ

ಅರಣ್ಯ ಸತ್ಯಾಗ್ರಹದ ಸಂಘಟನಾ ಶಕ್ತಿ.

1930ರಲ್ಲಿ ಶಿರಸಿಯಲ್ಲಿ ನಡೆದ ಮೊದಲ ಅರಣ್ಯ ಸತ್ಯಾಗ್ರಹಕ್ಕೆ ಸಾವಿರಾರು ಜನರನ್ನು ಒಗ್ಗೂಡಿಸಿದರು. ಅರಣ್ಯ ಕಾಯಿದೆಗಳ ವಿರುದ್ಧದ ಹೋರಾಟವನ್ನು ಜಿಲ್ಲೆಯಾದ್ಯಂತ ವಿಸ್ತರಿಸಿದರು.

■ ಸರದಾರ ವೆಂಕಟರಾಮಯ್ಯ

ಸಿದ್ದಾಪುರದ ಕರನಿರಾಕರಣೆ ಚಳವಳಿಯ ಸಂಘಟಕ.

ಸ್ಥಳೀಯ ನಾಯಕರೊಂದಿಗೆ ಗುಪ್ತ ಸಭೆಗಳನ್ನು ನಡೆಸಿ, ನೂರಾರು ರೈತ ಕುಟುಂಬಗಳನ್ನು ಕಂದಾಯ ಪಾವತಿಸದ ಹೋರಾಟಕ್ಕೆ ಒಗ್ಗೂಡಿಸಿದರು.

■ ರಮಾಬಾಯಿ ಪ್ರಭು & ಭಾಗೀರಥಿಬಾಯಿ ಪುರಾಣಿಕ್

ಕರನಿರಾಕರಣೆ ಹೋರಾಟದ ಧೀರ ಮಹಿಳೆಯರು.

ಸರ್ಕಾರಿ ದಮನ ಮತ್ತು ಆಸ್ತಿ ಮುಟ್ಟುಗೋಲಿನ ನಡುವೆಯೂ ಮಹಿಳೆಯರನ್ನು ಸಂಘಟಿಸಿ, ಕಾನೂನುಭಂಗ ಚಳವಳಿಯನ್ನು ಮುಂದುವರಿಸಿದರು.